ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 4 ಗುರುವಾರ 2026

47

ಸಂಪುಟ: 47 | ಸಂಚಿಕೆ: 49 | ಪುಟಗಳು: 12

₹4


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ

ಗುರುವಾರ 4 ಜೂನ್ 2026

ಜೂನ್ 6 ರಂದು ಡಿ.ದೇವರಾಜ ಅರಸರ 44ನೇ ಪುಣ್ಯಸ್ಮರಣೆ



ಮೈಸೂರು,ಜೂ.3– ಮೈಸೂರಿನ ಅನ್ವೇಷಣಾ ಸೇವಾ ಟ್ರಸ್ಟ್, ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ವತಿಯಿಂದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸ್ ಅವರ 44ನೇ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಜೂನ್ 6 ರಂದು ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ದಿ.ಇನ್‌ಸ್ಟಿಟ್ಯೂಷನ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಬೆಳಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ.

ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ 6 ಮಂದಿ ಸಾಧಕರಿಗೆ 'ಧ್ವನಿ ಕೊಟ್ಟ ದಣಿ' ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ.

ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್‌ನ ಉಪಾಧ್ಯಕ್ಷ ಹೆಚ್.ಎ. ವೆಂಕಟೇಶ್, ಅನ್ವೇಷಣಾ ಸೇವಾ ಟ್ರಸ್ಟ್‌ನ ಅಧ್ಯಕ್ಷ ಡಾ.ಎಂಜಿಆರ್.ಅರಸ್ ಡಿ.ದೇವ ರಾಜ್ ಅರಸರ ಸಾಧನೆ ಮತ್ತು ಕೊಡುಗೆ ಕುರಿತು ಮಾತನಾಡಲಿದ್ದಾರೆ.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯರಾದ ಐವಾನ್ ಡಿಸೋಜ, ಡಾ.ಡಿ.ತಿಮ್ಮಯ್ಯ, ಹೆಚ್.ಡಿ.ಕೋಟೆ ಅರಸು ಸಂಘದ ಅಧ್ಯಕ್ಷ ಲಿಂಗರಾಜೇ ಅರಸ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ವಿಶ್ರಾಂತ ಜಂಟಿ ನಿರ್ದೇಶಕ ಶ್ರೀನಿವಾಸ್ ಬಹದ್ದೂರ್ ಭಾಗಿಯಾಗಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಕಲಿ ದಾಖಲೆ ಸೃಷ್ಟಿಸಿ ಸರ್ಕಾರಿ ಭೂ ಕಬಳಿಕೆ ವಿರುದ್ಧ ಕ್ರಮಕ್ಕೆ ರೈತರ ಆಗ್ರಹ

ಮೈಸೂರು, ಜೂ.3(ಎಂಕೆ)– ನಕಲಿ ದಾಖಲೆ ಸೃಷ್ಟಿಸಿ ಭೂ ಕಬಳಿಕೆ ನಡೆಸಲಾಗುತ್ತಿದ್ದು, ಕಂದಾಯ ಇಲಾಖೆ ಅಧಿಕಾರಿಗಳು ಭೂ ಕಬಳಿಕೆದಾರರಿಗೆ ಕಡಿವಾಣ ಹಾಕಬೇಕು. ಸರ್ಕಾರಿ ಆಸ್ತಿಯನ್ನು ಉಳಿಸುವಂತೆ ರೈತ ಮುಖಂಡರು ಒತ್ತಾಯಿಸಿದರು.

ಮೈಸೂರು ತಾಲೂಕು ಕಚೇರಿಯ ಸಭಾಂಗಣದಲ್ಲಿ ಮಂಗಳವಾರ ತಹಸೀಲ್ದಾರ್ ಮಹೇಶ್ ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಮೈಸೂರು ತಾಲೂಕು ರೈತರ ಕುಂದು–ಕೊರತೆ ಸಭೆಯಲ್ಲಿ ಭೂ ಕಬಳಿಕೆದಾರರ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸುವಂತೆ ಆಗ್ರಹಿಸಲಾಯಿತು.



ಮೈಸೂರು ತಾಲೂಕು ಕಚೇರಿಯ ಸಭಾಂಗಣದಲ್ಲಿ ಮಂಗಳವಾರ ರೈತರ ಕುಂದು–ಕೊರತೆ ಸಭೆ ನಡೆಯಿತು.

ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಮರಂಕಯ್ಯ ಮಾತನಾಡಿ, ತಾಲೂಕಿನಲ್ಲಿ ಮದ್ಯದಂಗಡಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ದಿನದ 24 ಗಂಟೆಯೂ ಮದ್ಯದಂಗಡಿಗಳು ತೆರೆದಿರುತ್ತವೆ. ಬಡ ರೈತ ಕೂಲಿ ಕಾರ್ಮಿಕರು ಸಂಪಾದಿಸಿದ ಹಣವೆಲ್ಲಾ ಮದ್ಯದಂಗಡಿ ಪಾಲಾಗುತ್ತಿದೆ. ಅಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿ ತಿಂಗಳಿಗೆ ಕೇವಲ ಮೂರು ದಿನವಷ್ಟೇ ಪಡಿತರ ವಿತರಣೆ ಮಾಡಲಾಗುತ್ತಿದ್ದು, ಇದರಿಂದ ಪಡಿತರದಾರರು ಪರದಾಡುವಂತಾಗಿದೆ. ಆದ್ದರಿಂದ ತಿಂಗಳಲ್ಲಿ ಕನಿಷ್ಠ 20 ದಿನಗಳ ಕಾಲ ಪಡಿತರ ವಿತರಣೆಯಾಗಬೇಕು ಎಂದು ಕೋರಿದರು.

ಕಬ್ಬು ಬೆಳಗಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜು ಮಾತನಾಡಿ, ತಾಲೂಕಿನ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇದ್ದು, ಸರಿಯಾದ ಸಮಯಕ್ಕೆ ರೋಗಿಗಳಿಗೆ ಸ್ಪಂದಿಸುತ್ತಿಲ್ಲ. ರೋಗಿಗಳು ವೈದ್ಯರಿಗೆ ಕಾದು ಸಾಕಾಗಿ, ಕಡೆಗೆ ನಗರಕ್ಕೆ ಬರುವಂತಾಗಿದೆ. ಆದ್ದರಿಂದ ಈ ವ್ಯವಸ್ಥೆಯನ್ನು ಸರಿಪಡಿಸಬೇಕೆಂದು ಒತ್ತಾಯಿಸಿದರು.

ತಾಲೂಕು ಅಧ್ಯಕ್ಷ ಆನಂದೂರು ಪ್ರಭಾಕರ್ ಮಾತನಾಡಿ, ಕೃಷಿ ಇಲಾಖೆಗಳಲ್ಲಿ ಸರಿಯಾದ ಸಮಯಕ್ಕೆ ಬಿತ್ತನೆ ಬೀಜ ಮತ್ತು ರಸ ಗೊಬ್ಬರಗಳು ಪೂರೈಕೆ ಮಾಡುತ್ತಿಲ್ಲ. ತೋಟಗಾರಿಕೆ ಇಲಾಖೆಯಿಂದ ಸಿಗುತ್ತಿರುವ ಸಬ್ಸಿಡಿಗಳು ರೈತರಿಗೆ ದೊರೆಯುವಂತೆ ಮಾಡುವಲ್ಲಿ ಇಲಾಖೆ ಅಧಿಕಾರಿಗಳು ವಿಫಲವಾಗಿದ್ದಾರೆ ಎಂದು ದೂರಿದರು.

ಈ ವೇಳೆ ಸಭೆಯಲ್ಲಿ ರೈತ ಮುಖಂಡ ರಾದ ಜಗದೀಶ್ ಸೂರ್ಯ, ನಾಗನಹಳ್ಳಿ ಚಂದ್ರಶೇಖರ್, ಅಂಕಪ್ಪ ನಾಗರಾಜು, ಶಿವಣ್ಣ ಮತ್ತಿತರರು ಉಪಸ್ಥಿತರಿದ್ದರು.

ಇಂದು ಉಚಿತ ಗಿಡಗಳ ವಿತರಣೆ

ಮೈಸೂರು, ಜೂ.3–ವಿಶ್ವ ಪರಿಸರ ದಿನಾಚರಣೆ ಹಿನ್ನೆಲೆ, ಮುಡಾ ಮಾಜಿ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ಹೆಚ್.ವಿ. ರಾಜೀವ್ ಸ್ನೇಹ ಬಳಗದ ವತಿಯಿಂದ ಉಚಿತ ಗಿಡಗಳ ವಿತರಣಾ ಕಾರ್ಯಕ್ರಮವನ್ನು ಜೂನ್ 4 ರಂದು ಮೈಸೂರು–ಊಟಿ ರಸ್ತೆಯಲ್ಲಿರುವ ಶೆಲ್ ಪೆಟ್ರೋಲ್ ಬಂಕ್ ಎದುರಿನ ಹಸಿರು ಮೈಸೂರು ನರ್ಸರಿಯಲ್ಲಿ ಬೆಳಗ್ಗೆ 9.45ಕ್ಕೆ ಹಮ್ಮಿಕೊಳ್ಳಲಾಗಿದೆ.

ಹಸಿರು ಮೈಸೂರು ನರ್ಸರಿಯಲ್ಲಿ 15 ಸಾವಿರ ವಿವಿಧ ಜಾತಿಯ ಸಸಿಗಳನ್ನು ಬೆಳೆಸಲಾಗಿದ್ದು, ಗಿಡ ನೆಟ್ಟು ಪೋಷಣೆ ಮಾಡಲು ಆಸಕ್ತಿ ಹೊಂದಿರುವ ಸಂಘ–ಸಂಸ್ಥೆಗಳು, ವ್ಯಕ್ತಿಗಳು ಅರ್ಜಿ ಸಲ್ಲಿಸಿ ಗಿಡಗಳನ್ನು ಪಡೆಯುವಂತೆ ಸಂಸ್ಥೆ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ ಶೇಷಾ ಪ್ರಸಾದ್ ಕೆ.ಎಸ್. ಮೊ:9353006616, ಸುನೀಲ್ ಮೊ: 7353638002, ಹುಡ್ಕೋ ಕುಮಾರ್ ಮೊ: 9845275741 ಮೂಲಕ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಬೆಳದಿಂಗಳ ಸಂಗೀತ



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ನಡೆದ 292ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ವಿದುಷಿ ಅರ್ಚನಾ ಎಲ್.ರಾವ್ ಗಾಯನ ಪ್ರಸ್ತುತಿಪಡಿಸಿದರು. ಪಕ್ಕವಾದ್ಯದಲ್ಲಿ ವಿದ್ವಾನ್ ಸುನಿಲ್ ಸುಬ್ರಹ್ಮಣ್ಯಂ, ವಿದ್ವಾನ್ ರಾಜಾಪುರಂ ಆರ್. ಕಾರ್ತಿಕ್ ಹಾಗೂ ವಿದುಷಿ ಸಿ.ವಿ. ಸಾಥ್ ನೀಡಿದರು.

ಅಡುಗೆ ಅನಿಲ ಬೇಡಿಕೆಯಲ್ಲಿ ಶೇ.19ರಷ್ಟು ಕಡಿತ

ಕಟ್ಟುನಿಟ್ಟಿನ ದಾಖಲೆ ಪರಿಶೀಲನೆ ಫಲಶ್ರುತಿ



ಮೈಸೂರು, ಜೂ.3(ಎಂಕೆ)– ಬಿಸಿಲಿನ ತಾಪಮಾನ ಹೆಚ್ಚಳ, ಸಿಎನ್‌ಜಿ ಬಳಕೆ ಹಾಗೂ ಇ–ಕೈವೈಸಿ(ದಾಖಲೆ ಪರಿಶೀಲನೆ) ಕಡ್ಡಾಯ ಹಿನ್ನಲೆಯಲ್ಲಿ ಎಲ್‌ಪಿಜಿ ಅಡುಗೆ ಅನಿಲ ಬೇಡಿಕೆಯಲ್ಲಿ ಶೇ.19 ರಷ್ಟು ಕಡಿಮೆಯಾಗಿದ್ದು, ಮೈಸೂರಿನಲ್ಲಿ ಶೇ.14 ರಷ್ಟು ಕಡಿತವಾಗಿದೆ.

ಮಧ್ಯ ಪ್ರಾಚ್ಯ ದೇಶಗಳ ನಡುವಿನ ಯುದ್ಧದಿಂದಾಗಿ ಎಲ್‌ಪಿಜಿ ಸಿಲಿಂಡರ್ ವಿತರಣೆಯಲ್ಲಿ ಉಂಟಾಗಿದ್ದ ಕೊರತೆ ಸಮಸ್ಯೆ ಬಗೆಹರಿಸಿದ್ದು, ಇ–ಕೈವೈಸಿ ಮತ್ತು ಸೇಫ್ಟಿ ಇನ್‌ಸ್ಪೆಕ್ಷನ್ ಕಡ್ಡಾಯ ಮಾಡಿದ ಬಳಿಕ ಅಡುಗೆ ಅನಿಲ ಬಳಕೆ ಮತ್ತು ಪೂರೈಕೆ ಪ್ರಮಾಣ ಕಡಿಮೆಯಾಗುತ್ತಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಒಂದು ಸಿಲಿಂಡರ್ ಬುಕ್ ಮಾಡಿ ಪಡೆದ 45 ದಿನಗಳ ಬಳಿಕ ಮತ್ತೊಂದು ಸಿಲಿಂಡರ್ ಬುಕಿಂಗ್ ಮಾಡಲು ಅವಕಾಶ ನೀಡಿದ್ದು, ನಗರ ಪ್ರದೇಶದಲ್ಲೂ 25 ದಿನಗಳಿಗೆ ವಿಸ್ತರಣೆ ಮಾಡಿದ್ದರಿಂದ ಗೃಹ ಬಳಕೆ ಸಿಲಿಂಡರ್ ಬುಕಿಂಗ್ ಪ್ರಮಾಣ ಕಡಿಮೆಯಾಗುತ್ತಿದೆ ಎಂದು ಎಲ್‌ಪಿಜಿ ಡಿಸ್ಟ್ರಿಬ್ಯೂಟರ್ ಅಸೋಸಿಯೇಷನ್ ಆಫ್ ಇಂಡಿಯಾ ರಾಜ್ಯಾಧ್ಯಕ್ಷ ಮೆಹುಲ್ ಜೆ.ಪಟೇಲ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಇ–ಕೈವೈಸಿ ಮತ್ತು ಸೇಫ್ಟಿ ಇನ್‌ಸ್ಪೆಕ್ಷನ್ ಮಾಡದಿದ್ದಲ್ಲಿ ಅಡುಗೆ ಸಿಲಿಂಡರ್ ಪೂರೈಕೆ ಮಾಡುವಂತಿಲ್ಲ ಎಂದು ಸರ್ಕಾರ ಆದೇಶಿಸಿದ್ದು, ಅದರಂತೆ ಇಂಡಿಯನ್ ಆಯಿಲ್ ಕಾರ್ಪೊರೇಷನ್, ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಹಾಗೂ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಪಾಲಿಸುತ್ತಿವೆ. ಈ ನಿಟ್ಟಿನಲ್ಲಿ ಅಡುಗೆ ಅನಿಲ ಬಳಕೆ ಮತ್ತು ಪೂರೈಕೆಯಲ್ಲಿ ಗಣನೀಯವಾಗಿ ಕಡಿಮೆಯಾಗುತ್ತಿದೆ ಎಂದರು.

ಸೌದೆ ಒಲೆ ಎಫೆಕ್ಟ್: ಕಮರ್ಷಿಯಲ್ ಸಿಲಿಂಡರ್ ಪೂರೈಕೆ ಸ್ಥಗಿತಗೊಂಡಿದ್ದ ವೇಳೆ ಹಲವು ಸೌದೆ ಒಲೆ ಬಳಕೆಗೆ ಮುಂದಾಗಿದ್ದಾರೆ. ಇದರಿಂದಲೂ ಸಿಲಿಂಡರ್ ಬಳಕೆ ಪ್ರಮಾಣ ಕಡಿಮೆಯಾಗಿದೆ. ಸೌದೆ ಒಲೆ ಬಳಕೆ ಪ್ರಾರಂಭಿಸಿದವರೂ ಇಂದಿಗೂ ಅದನ್ನೆ ಮುಂದುವರೆಸುತ್ತಿದ್ದು, ಸೌದೆ ಒಲೆ ಎಫೆಕ್ಟ್‌ನಿಂದಲೂ ಬಳಕೆ ಕಡಿತವಾಗಿದೆ ಎಂದು ಮಾಹಿತಿ ನೀಡಿದರು.

ಶೇ.100 ರಷ್ಟು ವಿತರಣೆ: ಕಮರ್ಷಿಯಲ್ ಸಿಲಿಂಡರ್ ಪೂರೈಕೆಯನ್ನು ಶೇ.100 ರಷ್ಟು ಮಾಡಲಾಗುತ್ತಿದ್ದು, ಗ್ರಾಹಕರ ಅಗತ್ಯತೆಗೆ ಅನುಗುಣವಾಗಿ ವಿತರಣೆಯಾಗುತ್ತಿದೆ. ಮೊದಲಿನಂತೆ ಹೆಚ್ಚುವರಿಯಾಗಿ ವಿತರಣೆ ಮಾಡುತ್ತಿಲ್ಲ. ಅಗತ್ಯ ಇರುವಷ್ಟು ಮಾತ್ರವೇ ಪೂರೈಕೆ ಮಾಡಲಾಗುತ್ತಿದ್ದು, ಮೈಸೂರಿನಲ್ಲಿಯೂ ಅಡುಗೆ ಅನಿಲ ಪೂರೈಕೆ ಪ್ರಮಾಣ ಶೇ.14 ರಷ್ಟು ಕಡಿಮೆಯಾಗಿದೆ ಎಂದು ತಿಳಿಸಿದರು.

ಎರಡು ತಿಂಗಳು ಕಳೆದರೂ ಮೈಸೂರಿಗೆ ಬಾರದ ಸ್ವಚ್ಛ ಸರ್ವೇಕ್ಷಣಾ ತಂಡ

ಮೈಸೂರು, ಜೂ.3(ಬಿಎಲ್‌ಯು)– ಮೈಸೂರು ನಗರದ ಸ್ವಚ್ಛತೆ ಬಗ್ಗೆ ಪರಿಶೀಲನೆ ನಡೆಸಿ ರ‍್ಯಾಂಕಿಂಗ್ ನೀಡುವ ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಸ್ವಚ್ಛ ಸರ್ವೇಕ್ಷಣೆಯ ತಂಡ ಎರಡು ತಿಂಗಳು ಕಳೆದರೂ ಇನ್ನು ಮೈಸೂರಿಗೆ ಆಗಮಿಸಿಲ್ಲ.

ಸ್ವಚ್ಛ ಸರ್ವೇಕ್ಷಣೆಯ ತಂಡ ಸಾಮಾನ್ಯವಾಗಿ ಪ್ರತಿ ವರ್ಷ ಏಪ್ರಿಲ್ ತಿಂಗಳಲ್ಲಿ ಆಗಮಿಸಿ ಮೈಸೂರಿನ ಸ್ವಚ್ಛತೆ ಬಗ್ಗೆ ಪರಿಶೀಲನೆ ನಡೆಸುತ್ತಿತ್ತು. ಸ್ವಲ್ಪ ವಿಳಂಬವಾದರೆ ಮೇ ಮೊದಲ ವಾರದಲ್ಲಿ ಪರಿಶೀಲನಾ ಕಾರ್ಯ ಮುಗಿಸಿ ದೆಹಲಿಗೆ ತೆರಳುತ್ತಿತ್ತು.

ಆದರೆ, ಈ ಬಾರಿ ಏಪ್ರಿಲ್, ಮೇ ತಿಂಗಳು ಕಳೆದರೂ ಸ್ವಚ್ಛ ಸರ್ವೇಕ್ಷಣೆಯ ತಂಡ ಮೈಸೂರಿಗೆ ಬಂದಿಲ್ಲ. ಸ್ವಚ್ಛ ಸರ್ವೇಕ್ಷಣೆಯಲ್ಲಿ ಅಗ್ರ ಸ್ಥಾನ ಪಡೆಯಲು ಮೈಸೂರು ನಗರ ಪಾಲಿಕೆ ಮಾರ್ಚ್ ತಿಂಗಳಿನಿಂದಲೇ ಸ್ವಚ್ಛತೆಗೆ ಸಂಬಂಧಿಸಿದಂತೆ ಕಾರ್ಯಕ್ರಮ ಆರಂಭಿಸಿದೆ.

ಸ್ವಚ್ಛ ಸರ್ವೇಕ್ಷಣಾ ತಂಡ ಮೈಸೂರಿಗೆ ಬಂದಾಗ ನಗರವು ಸ್ವಚ್ಛ, ಸುಂದರವಾಗಿರಬೇಕೆಂದು ನಗರ ಪಾಲಿಕೆಯ ಪೌರ ಕಾರ್ಮಿಕರು, ಸ್ವಯಂ ಸೇವಕರು ಹಗಲಿರುಳು ದುಡಿದಿದ್ದಾರೆ. ಆದರೆ ಎರಡು ತಿಂಗಳು ಕಳೆದರೂ ಸ್ವಚ್ಛ ಸರ್ವೇಕ್ಷಣ ತಂಡ ಈ ತನಕ ಮೈಸೂರಿಗೆ ಆಗಮಿಸಿಲ್ಲ.

ಮೈಸೂರಿನ ಸ್ವಚ್ಛತೆ ಬಗ್ಗೆ ರ‍್ಯಾಂಕಿಂಗ್ ನೀಡಲು ಸ್ವಚ್ಛ ಸರ್ವೇಕ್ಷಣಾ ತಂಡ ಈಗಾಗಲೇ ಮೈಸೂರಿಗೆ ಬರಬೇಕಿತ್ತು. ಆದರೆ ಯಾವ ಕಾರಣದಿಂದ ವಿಳಂಬವಾಗಿದೆ ಎಂಬ ಖಚಿತ ಮಾಹಿತಿ ಇಲ್ಲ. ತಂಡ ಮೈಸೂರಿಗೆ ಆಗಮಿಸುವ ಎರಡು ದಿನ ಮುನ್ನ ಮಾಹಿತಿ ನೀಡುತ್ತದೆ. ಆದರೆ ಈ ಸಂಬಂಧ ಇದೂವರೆಗೆ ಯಾವುದೇ ವಿವರ ತಿಳಿದು ಬಂದಿಲ್ಲ ಎಂದು ನಗರ ಪಾಲಿಕೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮೃತ್ಯುಂಜಯ ಅವರು 'ಮೈಸೂರು ಮಿತ್ರ'ಗೆ ತಿಳಿಸಿದರು.

ನಾಳೆ 'ಕಿಷ್ಕಿಂದ ಕಲಹ' ನಾಟಕ ಪ್ರದರ್ಶನ

ಮೈಸೂರು, ಜೂ.3(ಬಿಎಲ್‌ಯು)– ಮೈಸೂರಿನ ವಿಜಯನಗರ 4ನೇ ಹಂತದ ಸಾತ್ವಿಕಿ ಫೌಂಡೇಷನ್ ವತಿಯಿಂದ ಕಲಾಮಂದಿರದ ಕಿರು ರಂಗ ಮಂದಿರದಲ್ಲಿ ಜೂ. 5ರಂದು 'ಕಿಷ್ಕಿಂದ ಕಲಹ' ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ಫೌಂಡೇಶನ್ ಅಧ್ಯಕ್ಷೆ ಎನ್.ಸರಸ್ವತಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 7 ಗಂಟೆಗೆ ನಾಟಕ ಆರಂಭವಾಗಲಿದ್ದು, ನಾಟಕದ ಅವಧಿ ಒಂದು ಗಂಟೆಯಾಗಿರುತ್ತದೆ ಎಂದು ಹೇಳಿದರು.

ನಿರ್ದೇಶಕ ಅಂಕಿತ್ ರಾಜ್ ಅವರು ಮಾತನಾಡಿ, ಕುವೆಂಪು ಅವರ ರಾಮಾಯಣ ದರ್ಶನಂ, ವಾಲ್ಮೀಕಿ ರಾಮಾಯಣ ಆಧರಿಸಿ ಈ ನಾಟಕ ರಚಿಸಲಾಗಿದ್ದು, ಇದರಲ್ಲಿ ಕುವೆಂಪು ಅವರ ಸಾತ್ವಿಕ ಚಿಂತನೆ ಒಳಗೊಂಡಿದೆ. ನಾಟಕದ ಮಧ್ಯ ಗೊಂಬೆಗಳನ್ನು ಪ್ರದರ್ಶಿಸಲಾಗುವುದು ಎಂದರು

ಸಾರ್ವಜನಿಕರಿಗೆ ಸಿಹಿ, ಉಪಹಾರ ವಿತರಣೆ



ಚಾಮರಾಜ ಕ್ಷೇತ್ರದ ವಿಜಯನಗರ ವಾರ್ಡ್ ನಂಬರ್ 20ರ ಯೋಗ ನರಸಿಂಹಸ್ವಾಮಿ ದೇವಸ್ಥಾನದ ಎದುರು ಡಿ.ಕೆ.ಶಿವಕುಮಾರ್ ಪ್ರಮಾಣ ವಚನ ಸ್ವೀಕರಿಸಿದ ಪ್ರಯುಕ್ತ ಸಾರ್ವಜನಿಕರಿಗೆ ಸಿಹಿ ಹಾಗೂ ಉಪಹಾರ ವಿತರಿಸಲಾಯಿತು.

ಜೂ.7, ರಾಜ್ಯಮಟ್ಟದ ಯೋಗಾಸನ, ಯೋಗ ರಸಪ್ರಶ್ನೆ ಸ್ಪರ್ಧೆ

ಮೈಸೂರು: ಮೈಸೂರು ಯೋಗೀಸ್ ಟ್ರಸ್ಟ್, ಮೈಸೂರಿನ ಸರ್ಕಾರಿ ಸಂಸ್ಕೃತ ಕಾಲೇಜು ವತಿಯಿಂದ ಶ್ರೀ ತಿರುಮಲೆ ಕೃಷ್ಣಮಾಚಾರ್ಯ ಸ್ಮರಣಾರ್ಥ ರಾಜ್ಯ ಮಟ್ಟದ ಉಚಿತ ಯೋಗಾಸನ ಸ್ಪರ್ಧೆ, ಲಿಖಿತ ಯೋಗ ರಸಪ್ರಶ್ನೆ ಕಾರ್ಯಕ್ರಮವನ್ನು ಜೂ.7ರಂದು ನಗರದ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮಹಾರಾಜ ಸರ್ಕಾರಿ ಸಂಸ್ಕೃತ ಕಾಲೇಜಿನಲ್ಲಿ ಬೆಳಗ್ಗೆ 9 ರಿಂದ ಏರ್ಪಡಿಸಲಾಗಿದೆ.

ಸ್ಪರ್ಧೆಯಲ್ಲಿ 8 ರಿಂದ 80 ವರ್ಷದೊಳಗಿನ ಪುರುಷ ಮತ್ತು ಮಹಿಳೆಯರು ಭಾಗವಹಿಸಬಹುದು. ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಗಳಿಸಿದವರಿಗೆ ಕ್ರಮವಾಗಿ 2000, 1500 ಹಾಗೂ 1000 ನಗದು ಬಹುಮಾನ, ಸ್ಮರಣಿಕೆ ಮತ್ತು ಪ್ರಮಾಣಪತ್ರ ನೀಡಿ ಗೌರವಿಸಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಮೊ: 9449886322 ಮೂಲಕ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಇಂದು ರಾಜರ್ಷಿ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ



ಮೈಸೂರು,ಜೂ.3–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ ಹಾಗೂ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತ್ಯೋತ್ಸವ ಸಮಿತಿ ವತಿಯಿಂದ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿಯನ್ನು ಜೂನ್ 4 ರಂದು ಮಧ್ಯಾಹ್ನ 12 ಘಂಟೆಗೆ ಕರ್ನಾಟಕ ಕಲಾಮಂದಿರ ದಲ್ಲಿ ಆಯೋಜಿಸಲಾಗಿರುತ್ತದೆ.

ಬೆಳಗ್ಗೆ 9 ಗಂಟೆಗೆ ಮೈಸೂರು ಅರಮನೆ ಆವರಣದಲ್ಲಿನ ಪುರಾತನ ಶ್ರೀ ಲಕ್ಷ್ಮೀರಮಣಸ್ವಾಮಿ ದೇವಸ್ಥಾನದ ಮುಂಭಾಗದಿಂದ ಪೊಲೀಸ್ ಅಶ್ವಾರೋಹಿದಳ, ಪೊಲೀಸ್ ಬ್ಯಾಂಡ್ ಹಾಗೂ ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆ ಹೊರಟು ಕೆ.ಆರ್. ವೃತ್ತದಲ್ಲಿರುವ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಗಣ್ಯರಿಂದ ಮಾಲಾರ್ಪಣೆ ಹಾಗೂ ಪುಷ್ಪಾರ್ಚನೆ ಮಾಡಲಾಗುತ್ತದೆ. ನಂತರ ಡಿ.ದೇವರಾಜ ಅರಸು ರಸ್ತೆ–ಮೆಟ್ರೋಪೋಲ್ ವೃತ್ತದ ಮೂಲಕ ಕರ್ನಾಟಕ ಕಲಾಮಂದಿರದವರೆಗೆ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ.

ಲಾಡ್ಜ್‌ನಲ್ಲಿ ಅಪರಿಚಿತ ವ್ಯಕ್ತಿ ಸಾವು



ಮೈಸೂರು,ಜೂ.3– ಖಾಸಗಿ ಲಾಡ್ಜ್‌ವೊಂದರಲ್ಲಿ ರೂಮು ಪಡೆದು ತಂಗಿದ್ದ ಕೇರಳ ಮೂಲದ ಪಿ.ಜಿ. ಕೃಷ್ಣ ಎಂಬ ವ್ಯಕ್ತಿ ಮೃತಪಟ್ಟಿರುವ ಘಟನೆ ಮೈಸೂರಿನ ಮಂಡಿಮೊಹಲ್ಲಾದ ಗುಡ್‌ನೈಟ್ ಲಾಡ್ಜಿನಲ್ಲಿ ನಡೆದಿದೆ. ಮೃತ ವ್ಯಕ್ತಿ ನಗರದ ಆರ್‌ಎಂಸಿಯಲ್ಲಿ ಕೆಲಸ ಮಾಡುತ್ತಿದ್ದರು. ಮೇ 21ರಂದು ಗುಡ್‌ನೈಟ್ ಲಾಡ್ಜ್‌ನಲ್ಲಿ ರೂಮು ಪಡೆದು 8 ದಿನಗಳು ಉಳಿದುಕೊಂಡಿದ್ದರು. ಮೇ 28 ರ ರಾತ್ರಿ ಎಂದಿನಂತೆ ಲಾಡ್ಜಿನಲ್ಲಿ ತಂಗಿದ್ದ ಕೃಷ್ಣ, ರಾತ್ರಿ ವೇಳೆ ಮೃತಪಟ್ಟಿದ್ದಾರೆ. ಈ ವಿಷಯವನ್ನು ಲಾಡ್ಜಿನ ಸಿಬ್ಬಂದಿ ಗಮನಿಸಿ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಮೃತ ವ್ಯಕ್ತಿಯ ಹೆಸರು ಪಿ.ಜಿ. ಕೃಷ್ಣ, ವಯಸ್ಸು 60 ವರ್ಷ, ದುಂಡು ಮುಖ, ಕಪ್ಪು ಮೈಬಣ್ಣ, ಸಾಧಾರಣ ಶರೀರ, ಕಪ್ಪು ಬಿಳಿ ತಲೆಗೂದಲು ಉಳ್ಳವರಾಗಿದ್ದು, ನೀಲಿ ಬಣ್ಣದ ಒಳ ಉಡುಪು ಧರಿಸಿರುತ್ತಾರೆ. ಶವವನ್ನು ಮೈಸೂರಿನ ಸರ್ಕಾರಿ ಮೆಡಿಕಲ್ ಕಾಲೇಜಿನ ಶವಾಗಾರದಲ್ಲಿ ಇರಿಸಲಾಗಿದೆ. ಮೃತರ ವಾರಸುದಾರರು ಯಾರಾದರೂ ಇದ್ದಲ್ಲಿ ಮೈಸೂರಿನ ಮಂಡಿ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 0821–2418339, 2418313ಗೆ ಸಂಪರ್ಕಿಸಬಹುದು ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.

ಗ್ರಂಥಾಲಯದ ಎರವಲು ಸೇವೆಯಲ್ಲಿ ವ್ಯತ್ಯಯ

ಮೈಸೂರು: ಮೈಸೂರು ನಗರ ಕೇಂದ್ರ ಗ್ರಂಥಾಲಯ ಕಚೇರಿಯ ಅಧೀನ ಶಾಖಾ, ಸೇವಾ ಕೇಂದ್ರ ಗ್ರಂಥಾಲಯಗಳಲ್ಲಿ ಜೂ.8ರಿಂದ 30ರವರೆಗೆ ಗ್ರಂಥಾಲಯದ ಸಿಬ್ಬಂದಿ ತಮ್ಮ ಶಾಖೆಗಳಲ್ಲಿ 2025–26ನೇ ಸಾಲಿನ ಪುಸ್ತಕ ದಾಸ್ತಾನು ಹಾಗೂ ಪೀಠೋಪಕರಣಗಳ ಭೌತಿಕ ಪರಿಶೀಲನೆಯನ್ನು ಕೈಗೊಳ್ಳಲಾಗುತ್ತಿದೆ. ಸದರಿ ದಿನಗಳಂದು ಸಾರ್ವಜನಿಕರಿಗೆ ಗ್ರಂಥಾಲಯದ ಎರವಲು ಸೇವೆ ನೀಡುವಲ್ಲಿ ವ್ಯತ್ಯಯ ಉಂಟಾಗಲಿದೆ.

ವಾರಾಂತ್ಯ ರಂಗಾಭಿನಯ ಉಚಿತ ತರಬೇತಿ

ಮೈಸೂರು, ಜೂ.3(ಬಿಎಲ್ ಯು)– ರಂಗಾಂತರಂಗ ಮೈಸೂರು ವತಿಯಿಂದ ನಾರಾಯಣ ಶಾಸ್ತ್ರಿ ರಸ್ತೆಯ ಮಹಿಳಾ ಸದನದಲ್ಲಿ ವಾರಾಂತ್ಯ ರಂಗಾಭಿನಯ ಉಚಿತ ತರಬೇತಿ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕ ಕೆ.ಎಂ. ಕೀರ್ತಿರಾಜ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ಶನಿವಾರ ಮಧ್ಯಾಹ್ನ 3.30 ರಿಂದ ಸಂಜೆ 6.30 ಗಂಟೆವರೆಗೆ ಹಾಗೂ ಪ್ರತಿ ಭಾನುವಾರ ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 1.30 ಗಂಟವರೆಗೆ ತರಬೇತಿ ನಡೆಯಲಿದೆ ಎಂದರು.

ರಂಗಭೂಮಿ ಪರಿಚಯ, ನವರಸ, ಧ್ವನಿ ಮತ್ತು ಮಾತು, ರಂಗಾಟಗಳು, ಮಕ್ಕಳಿಂದ ಕಾವ್ಯಾತ್ಮಕ ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ಕೀರ್ತಿರಾಜ್ ತಿಳಿಸಿದರು.

ಹಿರಿಯ ರಂಗಕರ್ಮಿ ಮೈಮ್ ರಮೇಶ್ ಮಾತನಾಡಿ, ಇಂದು ಹಿಂಸೆ ರಾರಾಜಿಸುತ್ತಿದ್ದು, ಮಾನವೀಯತೆ ಮಾಯವಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಬೆಳೆಯುವ ಮಕ್ಕಳಿಗೆ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ದೊರೆಯುತ್ತಿಲ್ಲ. ಟಿವಿ ವಾಹಿನಿಗಳ ಕಾರ್ಯಕ್ರಮ ಕೇವಲ ನಗಿಸುವುದಕ್ಕೆ ಸೀಮಿತವಾಗಿವೆ. ಇಂಥ ಸಂದರ್ಭದಲ್ಲಿ ಈ ರೀತಿ ನಡೆಯುವ ತರಬೇತಿಗಳು ಮಕ್ಕಳ ಕಲಾತ್ಮಕತೆಯ ಬೆಳವಣಿಗೆಗೆ ಅನುಕೂಲವಾಗಲಿವೆ ಎಂದು ಅಸಮಾಧಾನ ವಕ್ತಪಡಿಸಿದರು.

ಈ ವೇಳೆ ಹಿರಿಯ ಸಾಹಿತಿ ನಾ.ದಿವಾಕರ, ನಟರಾಜ್ ಹಾಗೂ ಗೌರಿಶಂಕರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

04.06.2026 ಗುರುವಾರ, ಮಳೆ ನಕ್ಷತ್ರ: ರೋಹಿಣಿ 25.05.2026ರಿಂದ 07.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಉತ್ತರಾಷಾಢ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ಶ್ರೀ ಸೂತ್ರ ಆಯುರ್ಧಾಮ:** ಮೊಣಕಾಲು ನೋವಿಗೆ ಉಚಿತ ವೈದ್ಯಕೀಯ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ ಆಸ್ಪತ್ರೆ, ಜೆಎಲ್‌ಬಿ ರಸ್ತೆ, ಬೆಳಗ್ಗೆಯಿಂದ.
- **ಎಚ್.ವಿ. ರಾಜೀವ್ ಸ್ನೇಹ ಬಳಗ, ಮೈಸೂರು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ :** ಹಸಿರು ಮೈಸೂರು–ಲಕ್ಷವೃಕ್ಷ ಅಭಿಯಾನ, ಸಾನ್ನಿಧ್ಯ : ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ, ಉದ್ಘಾಟನೆ : ಪತ್ರಕರ್ತ ಅಜಿತ್ ಹನುಮಕ್ಕನವರ್, ಮುಖ್ಯ ಅತಿಥಿಗಳು : ಮೈಸೂರು ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಮೈಸೂರು ಮಿತ್ರ ಪತ್ರಿಕೆ ಸಂಪಾದಕ ಎಂ. ಗೋವಿಂದೇಗೌಡ, ಟಿ. ಬಾಲಚಂದ್ರ, ಅಧ್ಯಕ್ಷತೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಸ್ಥಳ: ಮೈಸೂರು–ಊಟಿ ಮುಖ್ಯ ರಸ್ತೆ, ಶೆಲ್ ಪೆಟ್ರೋಲ್ ಬಂಕ್ ಎದುರು, ಬೆಳಗ್ಗೆ 9.45ಕ್ಕೆ.
- **ಅರಸು ಮಂಡಳಿ ಸಂಘ, ವಿವಿಧ ಸಂಘ ಸಂಸ್ಥೆಗಳ ಒಕ್ಕೂಟ :** ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತ್ಯೋತ್ಸವ, ಮೆರವಣಿಗೆಗೆ ಚಾಲನೆ : ರಾಜಮಾತೆ ಶ್ರೀಮತಿ ಪ್ರಮೋದಾದೇವಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್, ಉಪಸ್ಥಿತರು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಳವಳ್ಳಿ ಮಂಟೇಸ್ವಾಮಿ ಮಠದ ಶ್ರೀ ಎಂ.ಎಲ್. ವರ್ಚಸ್ವಿ ಶ್ರೀಕಂಠ ಸಿದ್ದಲಿಂಗರಾಜೇ ಅರಸ್, ಶ್ರೀ ಜ್ಞಾನಾನಂದ ಚನ್ನರಾಜೇ ಅರಸ್, ವರುಣ್ ಲಿಂಗರಾಜೇ ಅರಸ್, ಬಿ.ಪಿ. ಭರತ್ ಅರಸ್, ಮುಖ್ಯ ಅತಿಥಿಗಳು : ಶಾಸಕರಾದ ಟಿ.ಎಸ್. ಶ್ರೀವತ್ಸ, ಕೆ. ಹರೀಶ್‌ಗೌಡ, ಸ್ಥಳ: ಶ್ರೀ ಜಯಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್, ಕೃಷ್ಣರಾಜ ಬುಲೇವಾರ್ಡ್ ರಸ್ತೆ, ಬೆಳಗ್ಗೆ 9ಕ್ಕೆ.
- **ಶ್ರೀ ಶ್ರೀನಿವಾಸ ಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸಸ್ವಾಮಿಯವರ ವಾರ್ಷಿಕ ಮಹೋತ್ಸವ, ಸಂಜೆ 6ಕ್ಕೆ ಮುಡಿಉತ್ಸವ, ಗರುಡೋತ್ಸವ, ಸ್ಥಳ: ಶ್ರೀ ಶ್ರೀನಿವಾಸ ಸ್ವಾಮಿ ಕೈಂಕರ್ಯ ಸಭಾ, ಶ್ರೀ ಶ್ರೀನಿವಾಸಸ್ವಾಮಿ ದೇವಸ್ಥಾನದ ರಸ್ತೆ, ತಿಲಕ್‌ನಗರ.
- **ಸುಯೋಗ್ ಆಸ್ಪತ್ರೆ :** ಮಕ್ಕಳ ಆರೋಗ್ಯ ಉಚಿತ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.
- **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.
- **ಮಲಬಾರ್ ಚಾರಿಟಬಲ್ ಟ್ರಸ್ಟ್ :** ಜಿಲ್ಲೆಯ ಸರ್ಕಾರಿ ಹಾಗೂ ಅನುದಾನಿತ 52 ಕಾಲೇಜುಗಳ 442 ವಿದ್ಯಾರ್ಥಿನಿಯರಿಗೆ 35.66 ಲಕ್ಷ ಮೊತ್ತದ ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮ, ಉಪಸ್ಥಿತರು : ಶಾಸಕರಾದ ಟಿ.ಎಸ್. ಶ್ರೀವತ್ಸ, ಕೆ. ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಅಪರ ಜಿಲ್ಲಾಧಿಕಾರಿ ಶ್ರೀಮತಿ ಆರ್.ಕೆ. ಐಶ್ವರ್ಯ, ಡಿಸಿಪಿ ಡಾ. ಹರ್ಷ ಪ್ರಿಯಂವದ, ರುಡ್‌ಸೆಟ್ ನಿರ್ದೇಶಕಿ ಶ್ರೀಮತಿ ಕೆ.ಎಸ್. ಸರಿತಾ, ಪ್ರಿನ್ಸಿಪಾಲ್ ಪಿ. ಶಿವಣ್ಣ, ದಕ್ಷಿಣ ವಲಯ ಮುಖ್ಯಸ್ಥ ಪಿ. ಶರಫುದ್ದೀನ್, ಪ್ರಾದೇಶಿಕ ಜಂಟಿ ನಿರ್ದೇಶಕರಾದ ಡಾ. ಡಿ.ಎಸ್. ಪ್ರತಿಮಾ, ಡಾ. ಎಸ್. ಮುತ್ತುರಾಜ, ಪ್ರೊ. ಎಸ್. ವೆಂಕಟೇಶ, ಸ್ಥಳ: ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಪಡುವಾರಹಳ್ಳಿ, ಬೆಳಗ್ಗೆ 11.30ಕ್ಕೆ.
- **ವಾಟರ್ ಫೋರಂ ಮೈಸೂರು, ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್, ಅರಣ್ಯ ಔಟ್‌ರೀಚ್ ಸಂಸ್ಥೆಗಳು :** ಜೀವಜಲ ಜೀವನಾಡಿ ಕುರಿತು ನಾಗರೀಕ ಪಾಲುದಾರರ ಸಭೆ, ಸ್ಥಳ: ಮೈಸೂರ್ ಸ್ಕೂಲ್ ಆಫ್ ಆರ್ಕಿಟೆಕ್ಚರ್, ಲಿಂಗಾಂಬುದಿ ಪಾಳ್ಯ, ದಟ್ಟಗಳ್ಳಿ, ಸಂಜೆ 4 ರಿಂದ.
- **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಮಹಾ ಸಂಸ್ಥಾನ, ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಸತ್ಯ ಸಂಕಲ್ಪ ತೀರ್ಥರ ಹಾಗೂ ಶ್ರೀ ಸತ್ಯ ಸಂತುಷ್ಟ ತೀರ್ಥರ ಸನ್ನಿಧಾನ:** ಅಧಿಕ ಮಾಸೋತ್ಸವ, ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯ–2026, ಸಾಂಸ್ಕೃತಿಕ ಕಾರ್ಯಕ್ರಮ, ವಿದುಷಿ ಜಯತೀರ್ಥ ಮೇವುಂಡಿ ಅವರಿಂದ ದಾಸವಾಣಿ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ, ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 'ದೈಹಿಕ ದೀಕ್ಷೆ' ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ. ಕುಲದೀಪ್.ಎನ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗದ ಜಗತ್ತು, 8.45 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಹರಿಣಿ . ಆರ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಸುತ್ತಮುತ್ತ : ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಪ್ರಮುಖ ಸಭೆ ಸಮಾರಂಭಗಳ ಪರಿಚಯಾತ್ಮಕ ಕಾರ್ಯಕ್ರಮ. ಪ್ರಸ್ತುತಿ–ಚಂದನಾ .ಸಿ ಹಾಗೂ ಅರ್ಚನಾ. ಪಿ ಆರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಕನ್ನಡ ಭಾರತಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಹಣ್ಣು ಹೊನ್ನು– ತೋಟಗಾರಿಕಾ ಬೆಳೆಗಳ ಸುಸ್ಥಿರ ಬೇಸಾಯ ಕುರಿತ ಬಾನುಲಿ ಸರಣಿ. ಮಾವಿನ ಬೆಳೆಯಲ್ಲಿ ಚಾಟನಿ, ಬೇಸಾಯ ಕ್ರಮಗಳು ಹಾಗೂ ಪೋಷಕಾಂಶ ನಿರ್ವಹಣೆ ಈ ಕುರಿತು ಮೈಸೂರು ತಾಲ್ಲೂಕು ಎಲಚನಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಎಚ್. ಆರ್. ಮನುಕುಮಾರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಯುವವಾಣಿ –ಅಂತಾರಾಷ್ಟ್ರೀಯ ಪರಿಸರ ದಿನಾಚರಣೆ ಸಂದರ್ಭದಲ್ಲಿ 'ನಮ್ಮ ಪರಿಸರ ಬದುಕಿಗೆ ಆಧಾರ' ಕುರಿತ ವಿಶೇಷ ಕಾರ್ಯಕ್ರಮ, ಪ್ರಸ್ತುತಿ–ಮೈಸೂರಿನ ಕುವೆಂಪುನಗರದ ಶಾರದಾ ಕಲಾ ಕೇಂದ್ರದ ವಿದ್ಯಾರ್ಥಿಗಳು, 8.30 ಹಿಂದಿ ಚಿತ್ರಗೀತೆಗಳು, 9.30 ಕನ್ನಡ ಭಾರತಿ, 10.00 ರಾಷ್ಟ್ರೀಯ ಜನಪದ ಹಾಗೂ ಲಘು ಸಂಗೀತ ಕಾರ್ಯಕ್ರಮ, 10.30 ಸವಿನೆನಪು

ಆರೋಗ್ಯ ಕುರಿತ ಉಪನ್ಯಾಸ ಕಾರ್ಯಕ್ರಮ

ಮೈಸೂರು, ಜೂ.3(ಬಿಎಲ್‌ಯು)– ಮೈಸೂರು ಯೋಗ ಒಕ್ಕೂಟದ 25 ನೇ ವಾರ್ಷಿಕೋತ್ಸವ ಸಮಾರಂಭದ ಅಂಗವಾಗಿ ಜೂ.7 ರಂದು ರಾಮಕೃಷ್ಣನಗರದ ಶ್ರೀ ರಾಮಕೃಷ್ಣ ವಿದ್ಯಾ ಕೇಂದ್ರದಲ್ಲಿ ಆರೋಗ್ಯದ ಬಗ್ಗೆ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಒಕ್ಕೂಟದ ಗೌರವಾಧ್ಯಕ್ಷ ಟಿ.ಜಲೇಂದ್ರ ಕುಮಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 9.30 ಗಂಟೆಗೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ

ಶರೀರ ಶಾಸ್ತ್ರ, ಚಿಕಿತ್ಸಾ ಯೋಗ ಸೇರಿದಂತೆ ಹಲವು ವಿಚಾರಗಳ ಬಗ್ಗೆ ತಜ್ಞರು ಮಾತನಾಡಲಿದ್ದಾರೆ ಎಂದು ಜಲೇಂದ್ರ ಕುಮಾರ್ ತಿಳಿಸಿದರು.

ಈ ವೇಳೆ ಸಂಸ್ಥೆಯ ಶಿವಪ್ರಕಾಶ್, ಬಿ.ಪಿ. ಮೂರ್ತಿ, ಕೆ.ಜಿ.ದೇವರಾಜ್, ನರಸಿಂಹ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ರಾಜ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು, ಜೂ.3–ಬೆಂಗಳೂರಿನ ಹೇಸರಘಟ್ಟದ ಅನ್ವೇಷಣೆ ಸಾಂಸ್ಕೃತಿಕ ಅಕಾಡೆಮಿ, ಕಾವ್ಯ ಸ್ಪಂದನ ಪಬ್ಲಿಕೇಷನ್ ಸಹಯೋಗದಲ್ಲಿ ರಾಜ್ಯ ಪ್ರಶಸ್ತಿಗೆ ಕಲೆ, ಸಾಹಿತ್ಯ, ತಂತ್ರಜ್ಞಾನ, ಕ್ರೀಡೆ, ಯಕ್ಷಗಾನ, ಭರತನಾಟ್ಯ, ಪುಸ್ತಕ ಪ್ರಕಾಶನ, ಸಮಾಜ ಸೇವೆ, ಯೋಗ, ಕೃಷಿ, ಜ್ಯೋತಿಷ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಅರ್ಹರಿಂದ ರಾಜ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿದೆ.

ಆಸಕ್ತರು ಜೂನ್ 30 ರೊಳಗೆ ತಮ್ಮ ವ್ಯಕ್ತಿಗತ ವಿವರ ಮತ್ತು ಫೋಟೋದೊಂದಿಗೆ ಮೊ: 9880181671 ಗೆ ವಾಟ್ಸ್‌ಆ್ಯಪ್ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜೂನ್ 4 ಗುರುವಾರ 2026
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
47
ಸಂಪುಟ: 47 | ಸಂಚಿಕೆ: 49 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಡಿ.ಕೆ. ಶಿವಕುಮಾರ್
... ಎಂಬ ಹೆಸರಿನವನಾದ ನಾನು ಈಗ
ಕರ್ನಾಟಕದ ಮುಖ್ಯಮಂತ್ರಿ

● ಲೋಕಭವನದಲ್ಲಿ ರಾಜ್ಯಪಾಲರಿಂದ 25ನೇ ಸಿಎಂ ಆಗಿ ಡಿ.ಕೆ.ಶಿವಕುಮಾರ್ ಪ್ರಮಾಣ ವಚನ ಸ್ವೀಕಾರ ● ಇವರೊಂದಿಗೆ 13 ಮಂದಿ ಸಚಿವರಾಗಿ ಶಪಥ



ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಮುನ್ನ ತಮ್ಮ ತಾಯಿ ಶ್ರೀಮತಿ ಗೌರಮ್ಮ ಅವರಿಂದ ಡಿಕೆಶಿ ಆಶೀರ್ವಾದ ಪಡೆದರು.



ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಬುಧವಾರ ಪ್ರಮಾಣವಚನ ಸ್ವೀಕರಿಸಿದರು.

ಬೆಂಗಳೂರು, ಜೂ.3– ಕರ್ನಾಟಕದ 25ನೇ ಮುಖ್ಯಮಂತ್ರಿ ಯಾಗಿ ಡಿ.ಕೆ. ಶಿವಕುಮಾರ್ ಇಂದು ಪ್ರಮಾಣವಚನ ಸ್ವೀಕರಿಸಿದ್ದಾರೆ. ಬೆಂಗಳೂರಿನ ಲೋಕಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ನೂತನ ಮುಖ್ಯಮಂತ್ರಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ವೀರ ಗಂಗಾಧರ ಅಜ್ಜಯ್ಯ ಹೆಸರಲ್ಲಿ ಡಿಕೆಶಿ ಪ್ರಮಾಣ ವಚನ ಸ್ವೀಕರಿಸಿದರು. ರೇಷ್ಮೆ ಪಂಚೆ, ಜುಬ್ಬ, ಶಲ್ಯ ಧರಿಸಿ ಸಾಂಪ್ರದಾಯಿಕ ಉಡುಗೆಯಲ್ಲಿ ಶಿವಕುಮಾರ್ ಕಾಣಿಸಿಕೊಂಡು ಗಮನಸೆಳೆದರು.

ಕಾರ್ಯಕ್ರಮದಲ್ಲಿ ಗಣ್ಯಾತಿ ಗಣ್ಯರು ಭಾಗಿ: ಸಿಎಂ ಆಗಿ ಡಿಕೆಶಿ ಪ್ರಮಾಣವಚನಕ್ಕೆ ಗಣ್ಯಾತಿ ಗಣ್ಯರು ಸಾಕ್ಷಿಯಾಗಿದ್ದಾರೆ. ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣು ಗೋಪಾಲ್, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಮಾಜಿ ಸಿಎಂ ಸಿದ್ದರಾಮಯ್ಯ, ತೆಲಂಗಾಣ ಸಿಎಂ ರೇವಂತ್ ರೆಡ್ಡಿ, ಕೇರಳಂ ಸಿಎಂ ಸತೀಶನ್, ಕಾಂಗ್ರೆಸ್ ನಾಯಕರಾದ ಹರಿಪ್ರಸಾದ್, ಮೊಹಮ್ಮದ್ ಅಜರುದ್ದೀನ್, ರಾಜೀವ್ ಶುಕ್ಲಾ ಸೇರಿ ಪಕ್ಷದ ಪ್ರಮುಖ ನಾಯಕರು ಮತ್ತು ಜನಪ್ರತಿನಿಧಿಗಳು, ವಿವಿಧ ಮಠಾಧೀಶರು, ಮೌಲ್ವಿಗಳು, ಮತ್ತು ಚರ್ಚ್‌ಗಳ ಮುಖ್ಯಸ್ಥರು, ಸಿನಿ ತಾರೆಯರು ಸೇರಿ ಡಿಕೆಶಿ ಕುಟುಂಬಸ್ಥರು ಭಾಗಿಯಾಗಿದ್ದರು. ಬಿಜೆಪಿಯ ಉಚ್ಚಾಟಿತ ಶಾಸಕರಾದ ಶಿವರಾಮ ಹೆಬ್ಬಾರ್ ಮತ್ತು ಎಸ್.ಟಿ. ಸೋಮಶೇಖರ್ ಕೂಡ ಈ ವೇಳೆ ಕಾಣಿಸಿ ಕೊಂಡಿರುವುದು ವಿಶೇಷ.

ಪ್ರಮಾಣವಚನಕ್ಕೂ ಮುನ್ನ ವಿಶೇಷ ಪೂಜೆ: ಕರ್ನಾಟಕದ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸುವ ಮುನ್ನ ಡಿ.ಕೆ. ಶಿವಕುಮಾರ್ ಅವರ ಸದಾಶಿವನಗರದಲ್ಲಿರುವ ನಿವಾಸದಲ್ಲಿ 5ಕ್ಕೂ ಹೆಚ್ಚು ಪುರೋಹಿತರಿಂದ ವಿಶೇಷ ಪೂಜೆ ನೆರವೇರಿಸಲಾಗಿತ್ತು.

13 ಸಚಿವರ ಶಪಥ: ಡಿ.ಕೆ. ಶಿವಕುಮಾರ್ (ಒಕ್ಕಲಿಗ) ಅಜ್ಜಯ್ಯನ ಹೆಸರಲ್ಲಿ, ಡಾ. ಜಿ. ಪರಮೇಶ್ವರ್ (ಎಸ್‌ಸಿ) ಡಾ. ಅಂಬೇಡ್ಕರ್ ಹೆಸರಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಇವರೊಂದಿಗೆ ಕೆ.ಎಚ್.ಮುನಿಯಪ್ಪ (ಎಸ್‌ಸಿ), ಕೆ.ಜೆ.ಜಾರ್ಜ್ (ಕ್ರಿಶ್ಚಿಯನ್),


■ 6ನೇ ಪುಟಕ್ಕೆ

● ನಿಮ್ಮ 'ಮೈಸೂರು ಮಿತ್ರ'ನ ವರದಿ ದಿಟವಾಯ್ತಲ್ಲಾ... ●



ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗುವ ಮಹತ್ವಾಕಾಂಕ್ಷೆ ಮತ್ತು ಅದಕ್ಕಾಗಿ ಕಳೆದ ಆರು ತಿಂಗಳಿಂದ ನಡೆದಂತಹ ರಾಜಕೀಯ ಬೆಳವಣಿಗೆಗಳನ್ನು ನಿಮ್ಮ 'ಮೈಸೂರು ಮಿತ್ರ' ಖಚಿತ ಮೂಲಗಳ ಆಧರಿಸಿ ವರದಿ ಮಾಡುತ್ತಲೇ ಬಂದಿತ್ತು. ಆದರೆ ಈ ವಿಚಾರದಲ್ಲಿ ನಡೆದ ನಾನಾ ರಾಜಕೀಯ ಬೆಳವಣಿಗೆಗಳಿಂದ ಈ ಪ್ರಕ್ರಿಯೆ ತಡವಾಯಿತು. ಹಾಗಾಗಿ 'ಮಿತ್ರ'ನ ವರದಿ ವಿಚಾರವಾಗಿ ಕೆಲವರು ಅಪಹಾಸ್ಯ ಮಾಡಿದ್ದು ಉಂಟು. ಆದರೆ, ಎಲ್ಲದಕ್ಕೂ ಸಮಯ ಕೂಡಿ ಬರಬೇಕಲ್ಲ! ಆ ಘಳಿಗೆ ಈಗ ಒದಗಿ ಬಂತು. ಅಂತೂ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಪಟ್ಟ ಏರಿದ್ದಾರೆ. ಇದರೊಂದಿಗೆ 'ಮಿತ್ರ'ನ ವರದಿ ಓದುಗ ಬಾಂಧವರಲ್ಲಿ ಮತ್ತಷ್ಟು ವಿಶ್ವಾಸ ಮೂಡಿಸಿದೆ ಎಂಬ ಅತೀವ ನಂಬಿಕೆ ನಮ್ಮದು.

13 ಸಚಿವರ ಪ್ರಮಾಣವಚನ



ಡಾ. ಪರಮೇಶ್ವರ್ | ಕೆ.ಹೆಚ್.ಮುನಿಯಪ್ಪ | ಕೆ.ಜೆ. ಜಾರ್ಜ್ | ಎಂ.ಬಿ. ಪಾಟೀಲ್ | ರಾಮಲಿಂಗಾರೆಡ್ಡಿ | ಸತೀಶ್‌ಜಾರಕಿಹೊಳಿ



ಕೃಷ್ಣಭೈರೇಗೌಡ | ಪ್ರಿಯಾಂಕ್‌ಖರ್ಗೆ | ಯು.ಟಿ.ಖಾದರ್ | ಈಶ್ವರ್ ಬಿ.ಖಂಡ್ರೆ | ಯತೀಂದ್ರ | ಬೈರತಿ ಸುರೇಶ್ | ಶರಣ ಪ್ರಕಾಶ

ಕೆಪಿಸಿಸಿ ನೂತನ ಅಧ್ಯಕ್ಷರಾಗಿ ಬಿ.ಕೆ.ಹರಿಪ್ರಸಾದ್ ನೇಮಕ

ಹೊಸದಿಲ್ಲಿ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ನೂತನ ಅಧ್ಯಕ್ಷರಾಗಿ ಹಿರಿಯ ನಾಯಕ, ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರನ್ನು ನೇಮಕ ಮಾಡಲಾಗಿದೆ.



ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ರಾಷ್ಟ್ರೀಯ ಅಧ್ಯಕ್ಷರು ಈ ಆದೇಶ ಹೊರಡಿಸಿದ್ದು, ಇದು ತಕ್ಷಣ ದಿಂದಲೇ ಜಾರಿಗೆ ಬರಲಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜಿಯಿಲ್ಲದ ತೀಕ್ಷ್ಣ ಮಾತುಗಳ ಮೂಲಕ ಜಾತ್ಯತೀತ ನಿಲುವಿನ ಫೈರ್ ಬ್ರಾಂಡ್ ರಾಜಕಾರಣಿಯೆಂದೇ ಗುರುತಿಸಿ ಕೊಂಡಿರುವ ಬಿ.ಕೆ.ಹರಿಪ್ರಸಾದ್, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ನೂತನ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ

71ರ ಹರೆಯದ ಬಿ.ಕೆ.ಹರಿಪ್ರಸಾದ್ ಹುಟ್ಟಿದ್ದು ಬೆಂಗಳೂರಿನಲ್ಲಿ. ತಂದೆ ಕೆಂಪಯ್ಯ ತಾಯಿ ಕೆ.ಗುಣವತಿ, ಬೆಂಗಳೂರಿನ ಎಂ.ಇ.ಎಸ್ ಕಾಲೇಜಿನಲ್ಲಿ ಬಿ.ಕಾಂ ಪದವಿ ಪಡೆದಿರುವ ಅವರು, ವಿದ್ಯಾರ್ಥಿ ದೆಸೆಯಿಂದಲೇ ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿ ಗುರುತಿಸಿ ಕೊಂಡವರು. ರಾಜ್ಯಸಭಾ ಸದಸ್ಯರಾಗಿ ನಾಲ್ಕು ಬಾರಿ 1990, 2004, 2013, ಮತ್ತು 2014ರ ಉಪಚುನಾವಣೆಯಲ್ಲಿ ಆಯ್ಕೆಯಾದವರು.

■ 6ನೇ ಪುಟಕ್ಕೆ

ಡಿ.ಕೆ. ಶಿವಕುಮಾರ್‌ಗೆ ಶುಭ ಕೋರಿದ ಸೋನಿಯಾ ಗಾಂಧಿ

ನವದೆಹಲಿ: ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಇಂದು ಸಂಜೆ 4.05 ಗಂಟೆಗೆ ಲೋಕಭವನದಲ್ಲಿ ಅಧಿಕಾರ ಸ್ವೀಕರಿಸಿದ ಡಿ.ಕೆ.ಶಿವಕುಮಾರ್ ಅವರಿಗೆ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಶುಭಾಶಯ ಕೋರಿದ್ದಾರೆ.



ಡಿ.ಕೆ. ಶಿವಕುಮಾರ್ ಅವರಿಗೆ ಸೋನಿಯಾ ದೂರವಾಣಿ ಕರೆ ಮಾಡಿದ್ದು, ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯಿರಿ ಎಂಬ ಸಲಹೆ ನೀಡಿದ್ದಾರೆ ಎನ್ನಲಾಗಿದೆ. ಕರ್ನಾಟಕವನ್ನು ಯಶಸ್ವಿಯಾಗಿ ಮುನ್ನಡೆಸುತ್ತೀರಿ ಎಂಬ ಅದಮ್ಯ ವಿಶ್ವಾಸ ನನಗಿದೆ. ಹೊಸ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿ. ಮತ್ತಷ್ಟು ಯಶಸ್ಸು ನಿಮ್ಮದಾಗಲಿ ಎಂದು ಶುಭಾಶಯ ಹೇಳಿದ್ದಾರೆ. ಡಿ.ಕೆ. ಶಿವಕುಮಾರ್‌ರವರಿಗೆ ಸೋನಿಯಾ ಹಾಗೂ ಪ್ರಿಯಾಂಕ ಗಾಂಧಿ ಬೆಂಬಲವಾಗಿ ನಿಂತಿದ್ದನ್ನು ಸ್ಮರಿಸಬಹುದು.

ನಿಮ್ಮ ಜೊತೆ ಕೇಂದ್ರ ಸರ್ಕಾರವಿದೆ...

ನೂತನ ಸಿಎಂ ಡಿ.ಕೆ.ಶಿವಕುಮಾರ್‌ಗೆ ಪ್ರಧಾನಿ ಮೋದಿ ಅಭಿನಂದನೆ

ನವದೆಹಲಿ: ಕರ್ನಾಟಕದ 25ನೇ ಮುಖ್ಯಮಂತ್ರಿಯಾಗಿ ಡಿಕೆ ಶಿವಕುಮಾರ್ ಪ್ರಮಾಣ ವಚನ ಸ್ವೀಕರಿಸಿದರು.



ಇದರ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು ಡಿಕೆ ಶಿವಕುಮಾರ್ ಅವರಿಗೆ ಅಭಿನಂದನೆ ತಿಳಿಸಿದ್ದಾರೆ. ಕರ್ನಾಟಕ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಡಿ.ಕೆ. ಶಿವಕುಮಾರ್‌ಗೆ ಅಭಿನಂದನೆಗಳು. ಜನರ ಕಲ್ಯಾಣಕ್ಕಾಗಿ ಕೇಂದ್ರವು ಕರ್ನಾಟಕ ಸರ್ಕಾರದೊಂದಿಗೆ ನಿಕಟವಾಗಿ ಕೆಲಸ ಮಾಡುತ್ತದೆ ಎಂದು ಮೋದಿ ಅವರು ಟ್ವೀಟ್ ಮಾಡಿದ್ದಾರೆ.

ಲವ್ ಯೂ ಅಪ್ಪಾ...

ತಂದೆಗೆ ಪುತ್ರಿ ಐಶ್ವರ್ಯ ಶುಭ ಕೋರಿಕೆ

ಬೆಂಗಳೂರು: ಡಿ.ಕೆ. ಶಿವಕುಮಾರ್ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುತ್ತಿರುವ ಸಂದರ್ಭದಲ್ಲಿ ಅವರ ಪುತ್ರಿ ಐಶ್ವರ್ಯ ಡಿಕೆಎಸ್ ಹೆಗ್ಡೆ ಮಾಡಿರುವ ಪೋಸ್ಟ್ ಸಖತ್ ವೈರಲ್ ಆಗುತ್ತಿದೆ.




ಸಾಮಾಜಿಕ ಜಾಲತಾಣ ಇನ್ಸ್ಟಾಗ್ರಾಮ್‌ನಲ್ಲಿ 'ಅಭಿನಂದನೆಗಳು ಅಪ್ಪ' ಎಂಬ ಸಂದೇಶದೊಂದಿಗೆ ಭಾವನಾತ್ಮಕ ಪೋಸ್ಟ್ ಹಂಚಿಕೊಂಡಿದ್ದಾರೆ. ಈ ಪೋಸ್ಟ್ ವೈರಲ್ ಆಗುತ್ತಿದ್ದು, ಜನರು ಕೂಡಾ ತಮ್ಮ ಪ್ರತಿಕ್ರಿಯೆ ನೀಡುತ್ತಿದ್ದಾರೆ. ಈ ಹಿಂದೆ ಐಶ್ವರ್ಯಾ ಮಾತನಾಡಿದ್ದ ವೀಡಿಯೊವೊಂದು ಕೂಡ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಇದರಲ್ಲಿ ನಮ್ಮ ಅಪ್ಪ ಯಾಕೆ ಸಿಎಂ ಆಗಬೇಕು ಎಂದು ಅವರು ವಿವರಿಸಿದ್ದಾರೆ.

ಇವತ್ತು ಜನ ಬಂಡೆ ಎಂದು ಕರೆಯಬಹುದು. ಆದರೆ, ಆ ಬಂಡೆ ರೂಪುಗೊಳ್ಳುವುದಕ್ಕೆ ಎಷ್ಟು ಸಮಯ ತೆಗೆದುಕೊಂಡಿದೆ ಅಂತಾ ನಾವು ಚಿಕ್ಕ ವಯಸ್ಸಿನಿಂದ ನೋಡಿದ್ದೇವೆ. ಮುಂದಿನ

■ 6ನೇ ಪುಟಕ್ಕೆ

ನೂತನ ಸಿಎಂ ಆರ್ಥಿಕ ಸಲಹೆಗಾರರಾಗಿ ಎಲ್‌.ಕೆ ಅತೀಕ್ ನೇಮಕ!

ಬೆಂಗಳೂರು: ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ಆರ್ಥಿಕ ಸಲಹೆಗಾರರನ್ನಾಗಿ ನಿವೃತ್ತ ಐಎಎಸ್ ಅಧಿಕಾರಿ, ಪ್ರಸ್ತುತ ಬೆಂಗಳೂರು ಬಿಸಿನೆಸ್ ಕಾರಿಡಾರ್ ಅಧ್ಯಕ್ಷರಾಗಿರುವ ಎಲ್‌.ಕೆ ಅತೀಕ್ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.



ನೇಮಕಾತಿ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅಧಿಕೃತ ಅಧಿಸೂಚನೆ ಪ್ರಕಟಿಸಿದೆ. ಮುಖ್ಯ ಕಾರ್ಯದರ್ಶಿ ಹುದ್ದೆಗೆ ಸಮನಾದ ವೇತನ ಹಾಗೂ ಇತರ ಭತ್ಯೆಗಳು ಈ ಹುದ್ದೆಗೆ ಸಿಗಲಿವೆ ಎಂದು ಆದೇಶದಲ್ಲಿ ಹೇಳಲಾಗಿದೆ. ಮಾಜಿ ಸಿಎಂ ಸಿದ್ದರಾಮಯ್ಯ ಅವರ ಆಡಳಿತಾತ್ಮಕ ಸಲಹೆಗಾರರಾಗಿ ಮತ್ತು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದ ಅತೀಕ್ ಎಲ್‌.ಕೆ. ಅವರು ಇದೀಗ

■ 6ನೇ ಪುಟಕ್ಕೆ

ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್; ಉದ್ಯೋಗ ಸಮಸ್ಯೆಗೆ ಪರಿಹಾರ

● ಸರ್ಕಾರಿ ಹುದ್ದೆ ಭರ್ತಿ ಜೊತೆಗೆ ಖಾಸಗಿ ಉದ್ಯೋಗ ವಿನಿಮಯ ವ್ಯವಸ್ಥೆ ಜಾರಿ ● ಪಂಚಾಯಿತಿಗೆ ಒಂದರಂತೆ ರಾಜ್ಯದಲ್ಲಿ 10 ಸಾವಿರ ಯುವಕರ ಸಂಘ ಸ್ಥಾಪನೆ ಹಾಗೂ 10 ಲಕ್ಷ ಅನುದಾನ ● ಒಸಿ– ಸಿಸಿ ಸಮಸ್ಯೆಗೆ ಪರಿಹಾರ ● ರಾಜ್ಯದೆಲ್ಲೆಡೆ ಬಿ ಖಾತಾಯಿಂದ ಎ ಖಾತಾ ಪರಿವರ್ತನೆ ● ಬೆಂಗಳೂರು ನಗರದ ರಸ್ತೆಗಳ ಡಾಂಬರೀಕರಣಕ್ಕೆ 2 ಸಾವಿರ ಕೋಟಿ ಅನುದಾನ ● ಯುವ ಯುಗ ಆರಂಭಕ್ಕೆ ಶಿವಕುಮಾರ್ ನೇತೃತ್ವದ ಸರ್ಕಾರದ ಪಟ್ಟಿದಿ ● ರೈತರ ಸಮಸ್ಯೆ ನಿವಾರಣೆಗೆ ತಜ್ಞರ ಜತೆ ಚರ್ಚಿಸಿ ಶೀಘ್ರ ಕಾರ್ಯಕ್ರಮ



ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿಧಾನಸೌಧದ ತಮ್ಮ ಕಚೇರಿಯಲ್ಲಿ ದಾಖಲೆಗಳಿಗೆ ಸಹಿ ಹಾಕುತ್ತಿರುವುದು.

ಬೆಂಗಳೂರು, ಜೂ.3– ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್, ಸರ್ಕಾರಿ ಹುದ್ದೆ ಭರ್ತಿ ಜೊತೆಗೆ ಖಾಸಗಿ ಉದ್ಯೋಗ ವಿನಿಮಯ ವ್ಯವಸ್ಥೆ, ಪಂಚಾಯಿತಿಗೆ ಒಂದರಂತೆ ರಾಜ್ಯದಲ್ಲಿ 10 ಸಾವಿರ ಯುವಕರ ಸಂಘ ಸ್ಥಾಪನೆ ಹಾಗೂ 10 ಲಕ್ಷ ಅನುದಾನ, ಒಸಿ ಸಿಸಿ ಸಮಸ್ಯೆಗೆ ಪರಿಹಾರ, ರಾಜ್ಯದೆಲ್ಲೆಡೆ ಬಿ ಖಾತಾಯಿಂದ ಎ ಖಾತಾ ಪರಿವರ್ತನೆ, ಬೆಂಗಳೂರು ನಗರದ ರಸ್ತೆಗಳ ಡಾಂಬರೀಕರಣಕ್ಕೆ 2 ಸಾವಿರ ಕೋಟಿ ಅನುದಾನ... ಇವಿಷ್ಟು ಕರ್ನಾಟಕ ರಾಜ್ಯದಲ್ಲಿ ಯುವ ಯುಗ ಆರಂಭಕ್ಕೆ ಸಿಎಂ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ನೂತನ ಸರ್ಕಾರ ಕೈಗೊಂಡಿರುವ ಪಟ್ಟಿದಿಗಳು.

ವಿಧಾನಸೌಧದಲ್ಲಿ ಬುಧವಾರ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿ ಮೊದಲ ಸಚಿವ ಸಂಪುಟ ಸಭೆ ನಡೆಸಿದ ಬಳಿಕ ಶಿವಕುಮಾರ್ ಅವರು ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದರು.

ರೈತರು ಬೆನ್ನೆಲುಬು: ರಾಜ್ಯದ ರೈತರು ನಮ್ಮ ಬೆನ್ನೆಲುಬು, ಕೂಲಿ ಕಾರ್ಮಿಕರು ಹಾಗೂ ಎಲ್ಲಾ ವರ್ಗದ ಜನರಿಗಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಲು ಕಳೆದ ಆರು ತಿಂಗಳಿಂದ ಸಿದ್ಧತೆ ನಡೆಯುತ್ತಿತ್ತು. ಇಂದಿನ ಸಚಿವ ಸಂಪುಟ ಸಭೆಯಲ್ಲಿ 2 ಗಂಟೆಗಳ ಕಾಲ ಚರ್ಚೆ ಮಾಡಿ 6 ವರ್ಗದ ಜನರಿಗೆ ಇರುವ ಸಮಸ್ಯೆಗಳನ್ನು ಬಗೆಹರಿಸಿ ಹೊಸ ಯುವ ಯುಗ ಆರಂಭಕ್ಕೆ ತೀರ್ಮಾನಿಸಲಾಗಿದೆ ಎಂದರು.



ಮುಖ್ಯಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸಿದ ಬಳಿಕ ಡಿ.ಕೆ.ಶಿವಕುಮಾರ್ ವಿಧಾನಸೌಧದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿರುವುದು.

ಮೊದಲ ಸಚಿವ ಸಂಪುಟದಲ್ಲಿ ಜನತೆಗೆ ಹೊಸ ಕೊಡುಗೆ ನೀಡಲು ತೀರ್ಮಾನ ಮಾಡಿದ್ದೇವೆ. ಇದು ಯುವ ಯುಗ. ಹೀಗಾಗಿ ಹೊಸ ಆಲೋಚನೆ ಮಾಡಿದೆವು. ರೈತರ ವಿಚಾರದಲ್ಲಿ ಎಲ್ಲ ತಜ್ಞರ ಜೊತೆ ಚರ್ಚೆ ಮಾಡಿ ನೀತಿ ರೂಪಿಸಬೇಕಿದೆ. ಕೇವಲ ಮಾತು ಕೊಡುವುದಲ್ಲ, ಅದನ್ನು ಜಾರಿಗೆ ತರಬೇಕು. ನಾನೇ ಬೆಂಗಳೂರಿನಲ್ಲಿ ಕಸ ಎತ್ತುವ ವಿಚಾರವಾಗಿ 3 ವರ್ಷಗಳಲ್ಲಿ ನಮ್ಮ ಮುಂದೆ ಎಷ್ಟು

■ 6ನೇ ಪುಟಕ್ಕೆ

ಸಿಎಂ ಕುರ್ಚಿ ನನ್ನದಲ್ಲ, ಜನರದ್ದು: ಅವರು ಕೊಟ್ಟ ಅಧಿಕಾರವನ್ನ ಸೇವೆಗೆ ಮುಡಿಪಾಗಿಡ್ತೇನೆ...!

■ ಎಲ್ಲಾ ಗೊಂದಲಗಳಿಗೆ ಹೈಕಮಾಂಡ್ ನಾಯಕರಿಂದ ತೆರೆ ■ ಟೀಕೆಗಳು ಸಾಯುತ್ತವೆ ಕೆಲಸಗಳು ಉಳಿಯುತ್ತವೆ ■ ಮಾನವ ಧರ್ಮದ ಮೇಲೆ ನಂಬಿಕೆ ಇಟ್ಟುಕೊಂಡಿದ್ದೇನೆ

ಬೆಂಗಳೂರು, ಜೂ.3– ಸಿಎಂ ಕುರ್ಚಿ ಈ ಡಿ.ಕೆ.ಶಿವಕುಮಾರನದ್ದಲ್ಲ, ಇದು ಜನರ ಕುರ್ಚಿ. ಜನರು ಕೊಟ್ಟಿರುವ ಅಧಿಕಾರವನ್ನು ಅವರ ಸೇವೆಗೆ ಮುಡಿಪಾಗಿಡುತ್ತೇನೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನಸೌಧದಲ್ಲಿ ಬುಧವಾರ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿ, ಮೊದಲ ಸಚಿವ ಸಂಪುಟ ಸಭೆ ನಡೆಸಿದ ಬಳಿಕ ಶಿವಕುಮಾರ್ ಮಾಧ್ಯಮ ಗೋಷ್ಠಿ ನಡೆಸಿ ಮಾತನಾಡಿದರು.

ನನ್ನ ವೈಯಕ್ತಿಕ ವಿಚಾರ ಬದಿಗೊತ್ತಿ, ರಾಜ್ಯದ ಜನರ ಸೇವೆಗೆ ಸಂಕಲ್ಪ ಮಾಡಿ ಈ ಅಧಿಕಾರ ಸ್ವೀಕರಿಸಿದ್ದೇನೆ. ಹಿಂದಿನ ಹೆಜ್ಜೆಗಳನ್ನು ಮರೆತವನು ಮುಂದಿನ ಹೆಜ್ಜೆ ಇಡಲಾರ ಎಂಬ ಮಾತನ್ನು ನಂಬಿರುವವನು ನಾನು. ನಾವು ನಮ್ಮ ಬೇರು ಮರೆತರೆ ಫಲ ಸಿಗುವುದಿಲ್ಲ ಎಂದು ಹೇಳುತ್ತಿರುತ್ತೇನೆ. ಇಂದು ಹೊಸ ದಿನ. ಹೊಸ ಕೆಲಸ ಮಾಡಿ, ಹೊಸ ಅವಕಾಶಗಳನ್ನು ಕಾಂಗ್ರೆಸ್ ಪಕ್ಷ ಹಾಗೂ ರಾಜ್ಯದ ಜನತೆ ನೀಡಿದ್ದಾರೆ. ಬಾಕಿ ಇರುವ 2 ವರ್ಷಗಳಲ್ಲಿ ರಾಜ್ಯದ ಜನರ ಸೇವೆ ಮಾಡಲು ಏನೆಲ್ಲಾ ಸೇವೆ ಮಾಡಬಹುದು, ರಾಜ್ಯದ ಕಲ್ಯಾಣಕ್ಕೆ ನಾನು ಹೊಸ ಅವಕಾಶಗಳನ್ನು ಹುಡುಕುತ್ತಿದ್ದೇನೆ

■ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಮದುವೆಗೂ ಮುಂಚೆ ನನ್ನನ್ನು ನೋಡಲು ದಿನ ಕಾಯ್ತಾ ಇದ್ರಿ. ಈಗ್ಯಾಕೆ ಮುಖನೇ ನೋಡಲ್ಲ.

ಗಂಡ : ಹಸಿವಾದಾಗ ಮೆನು ಕಾರ್ಡ್ ನೋಡೋದು ಸಹಜ ಕಣೇ. ಆದ್ರೆ ಊಟ ಆರ್ಡರ್ ಮಾಡಿ ತಟ್ಟೇಲಿ ಬಂದ ಮೇಲೆ ಯಾರಾದರೂ ಮೆನು ಕಾರ್ಡ್ ನೋಡ್ತಾರಾ.

ಮೈಸೂರು ಮಿತ್ರ
ಗುರುವಾರ, ಜೂನ್ 4, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಒಳ್ಳೆಯತನ ಶಾಪವೋ ವರದಾನವೋ ಗೊತ್ತಿಲ್ಲ. ಆದರೆ ಕೊನೆಗೆ ಕೆಟ್ಟವನೆಂಬ ಅಪವಾದ ಸಿಗುವುದು ಮಾತ್ರ ಖಂಡಿತ.

ವೇದ ಸುಳ್ಳಾದರೂ } ಒಗ್ಗಟ್ಟಿಲ್ಲದ ಊರಲ್ಲಿ,
ಗಾದೆ ಸುಳ್ಳಾಗದು } ಒಪ್ಪತ್ತೂ ಇರಬೇಡ.

ನಿಮ್ಮ ಪತ್ರಗಳು

ಡಿಕೆ ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಯುವ ಜನರಿಗೆ ಆದ್ಯತೆ ನೀಡಲಿ

ಮಾನ್ಯರೆ,

ಡಿ.ಕೆ. ಶಿವಕುಮಾರ್ ನೇತೃತ್ವದ ನೂತನ ಮಂತ್ರಿ ಮಂಡಲದಲ್ಲಿ ಯುವ ಪಡೆ ಒಳಗೊಂಡ ಸಂಪುಟಕ್ಕೆ ಪ್ರಾಮುಖ್ಯತೆ ಕೊಡಬೇಕಿದೆ. ಯಾವುದೇ ಸರ್ಕಾರಿ ಕಚೇರಿಗಳಲ್ಲಿ ಪಾರದರ್ಶಕ ಆಡಳಿತ, ಭ್ರಷ್ಟಾಚಾರ ರಹಿತ, ಸಾರ್ವಜನಿಕರಿಗೆ ಸದಾ ಸ್ಪಂದಿಸುವ, ನಿಷ್ಠೆ, ಬದ್ಧತೆ, ತೋರುವ ಗುಣ ಇರುವ ಯುವ ಉತ್ಸಾಹಿ ಹೊಸ ಮುಖಗಳಿಗೆ ಮಣೆ ಹಾಕಬೇಕಿದೆ.

ಕಳೆದ ಮೂರು ವರ್ಷಗಳ ಸಿದ್ದರಾಮಯ್ಯ ಅವಧಿಯಲ್ಲಿ ಬಹುತೇಕರು 60 ವರ್ಷಗಳು ಮೀರಿದವರೇ ಸಚಿವರಾಗಿದ್ದರು. ಇದು ಉಳಿದ ಎರಡು ವರ್ಷಕ್ಕೂ ಪುನರಾವರ್ತನೆ ಆಗಬಾರದು. ಏಕೆಂದರೆ, ಇವರುಗಳಿಂದ ಹೆಚ್ಚಿನ ಗುಣ ಮಟ್ಟದ ಕಾರ್ಯಕ್ಷಮತೆ ಬಯಸಲು ಅಸಾಧ್ಯವಾಗಿದೆ.

ಸಾರ್ವಜನಿಕರ ಸಮಸ್ಯೆಗಳನ್ನು ಕುಂತಲ್ಲೇ ನಿಂತಲ್ಲೇ ಪರಿಹರಿಸುವ ಮೂಲಕ ಅತ್ಯಂತ ಹೆಚ್ಚು ಉತ್ಸಾಹಿಯಾಗಿ ಜನರ ನಡುವೆ ಬೆರೆಯುವ ಸರಳತೆಯಿಂದ ಆಲಿಸುವ ರಾಜ್ಯಾದ್ಯಂತ ಪಾದರಸದಂತೆ ಜನರ ಸಮಸ್ಯೆಗಳನ್ನು ಆಲಿಸುವ ಯುವ ಉತ್ಸಾಹಿ ನಾಯಕರು ಸಚಿವರಾಗಬೇಕು.

ಸದ್ಯ, ಈಗಾಗಲೇ ನೆರೆಯ, ತಮಿಳುನಾಡಿನಲ್ಲಿ ನೂತನ ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಟಿವಿಕೆ ನೇತೃತ್ವದ ಮಂತ್ರಿ ಮಂಡಲ ಈ "ಜೆನ್ ಜೆಡ್" (ಯುವ ಪಡೆ ಒಳಗೊಂಡ ಸಂಪುಟ) ಶೈಲಿಯ ಸರ್ಕಾರದ ಕಾರ್ಯ ವೈಖರಿಯ ಶೈಲಿ ಇಡೀ ದೇಶಕ್ಕೆ ಮಾದರಿ ಆಗಿ ಯುವ ಜನರ ಆಶೋತ್ತರಗಳಿಗೆ ಕಾರ್ಯ ನಿರ್ವಹಿಸುತ್ತಿದೆ. ಬಹುತೇಕರು 40 ವರ್ಷ ವಯಸ್ಸಿನ ಒಳಗಿನವರಾಗಿದ್ದು ನಿಜಕ್ಕೂ ಇದು ಶ್ಲಾಘನೀಯ.

"ಜೆನ್ ಜೆಡ್" ಯುವ ಪಡೆಯಾಗಿದ್ದು ನಮ್ಮ ರಾಜ್ಯದಲ್ಲಿ ಕೂಡ ಅತೀ ಹೆಚ್ಚು ಈ ಪೀಳಿಗೆಯ ಯುವ ಜನರೇ ಹೆಚ್ಚು ಇದ್ದು ಇವರಿಗೆ ತಕ್ಕಂತೆ ಆಡಳಿತ ನೀಡಲು ಡಿಕೆ ಶಿವಕುಮಾರ್ ಕ್ಯಾಬಿನೆಟ್‌ನಲ್ಲಿ ಕಿರಿಯರಿಗೆ ಪ್ರಾತಿನಿಧ್ಯ ಕೊಡುವುದು ಹೆಚ್ಚು ಸೂಕ್ತ. ಜನರ ನಡುವಿನ ಕೊಂಡಿಯಾಗಿ ಸಮಸ್ಯೆಗಳನ್ನು ಪರಿಹರಿಸುವ ಹಗಲಿರುಳು ಕೆಲಸ ಮಾಡುವ ಯುವ ಶಾಸಕರನ್ನು ಗುರುತಿಸಿ ಸಚಿವರಾಗಿ ಮಾಡಿದರೆ ರಾಜ್ಯಾದ್ಯಂತ ಇನ್ನಷ್ಟು ಜನಪರ ಕೆಲಸ ಕಾರ್ಯಗಳನ್ನು ಮಾಡಲು ಪ್ರಯೋಜನವಾಗಲಿದೆ. ಸಚಿವ ಸ್ಥಾನ ನಿಭಾಯಿಸುವ ಸಾಮರ್ಥ್ಯ ಹೊಂದಿರುವ ಕಿರಿಯ ಶಾಸಕರುಗಳಿಗೆ ಪ್ರಾಮುಖ್ಯತೆ ಸಿಗಬೇಕಿದೆ.

–ಅನಿಲ್ ಕುಮಾರ್, ನಂಜನಗೂಡು.

ರೈಲಿನ ಆಸನಗಳ ಸ್ವಚ್ಛ ಮಾಡಿ



ಮಾನ್ಯರೆ,

ಮೈಸೂರಿನ ಅಶೋಕಪುರಂನಿಂದ ಎಂ.ಜಿ.ಆರ್ ಚೆನ್ನೈ ಸೆಂಟ್ರಲ್‌ಗೆ ತಲುಪುವ 16552 ಗಾಡಿ ಸಂಖ್ಯೆಯ ರೈಲಿನ ಎ.ಸಿ. ಚೇರ್ ಕಾರ್ ಬೋಗಿಯಲ್ಲಿ ಹಲವಾರು ಕುರ್ಚಿಗಳಲ್ಲಿ ಧೂಳು ತುಂಬಿ ಕಲೆಗಳಾಗಿದ್ದು, ಕೂರಲು ಕೂಡ ಯೋಗ್ಯವಲ್ಲದಾಗಿದೆ. ರೈಲಿನ ಟಿ.ಟಿ.ಇ ಅವರನ್ನು ಇದರ ಬಗ್ಗೆ ಪ್ರಶ್ನಿಸಿದರೆ ಕೇಳಿಸಿದ್ದರೂ ಕಂಡಿಲ್ಲವೆಂಬಂತೆ ಬೇಜವಾಬ್ದಾರಿತನ ಮೆರೆಯುತ್ತಾರೆ. ಕಾಸಿಗೆ ತಕ್ಕಂತೆ ಕಜ್ಜಾಯ ಎಂಬ ಗಾದೆ ಮಾತಿನಂತೆ, ಹೆಚ್ಚಿನ ಮೊತ್ತ ನೀಡಿ ನಮ್ಮ ಸುರಕ್ಷತೆ ಹಾಗೂ ಆರಾಮದಾಯಕ ಪ್ರಯಾಣಕ್ಕೆ ಕಾಯ್ದಿರಿಸಿಕೊಂಡರೆ ಇವರ ಅಸಡ್ಡೆತನಕ್ಕೆ ನಾವು ಮೂಕ ಬಲಿಪಶುಗಳಾಗಬೇಕಾಗುವ ಪ್ರಸಂಗ ಎದುರಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಸೂಕ್ತ ಅಧಿಕಾರಿಗಳು ಕೂಡಲೇ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ಮನವಿ.

–ಸೈಯದ್ ಖಿಜರ್, ಶಿಕ್ಷಕರು, ಮೈಸೂರು

ಮೈಸೂರು ಪೊಲೀಸ್ ಆಯುಕ್ತರಲ್ಲಿ ಮನವಿ

ಮಾನ್ಯರೆ,

ಮೈಸೂರು ನಗರದಲ್ಲಿ ಇತ್ತೀಚೆಗೆ ಅಪರಾಧ ಪ್ರಕರಣಗಳು ಹೆಚ್ಚಾಗಿ ಬೆಂಗಳೂರು ಮಹಾನಗರಿಯನ್ನೇ ಮೀರಿಸುವಂತಾಗಿದೆ. ಇದು ಸಹಜವಾಗಿ ಮೈಸೂರಿಗರಲ್ಲಿ ಆತಂಕ, ಭಯ ಮೂಡಿಸುವಂತಾಗಿದೆ. ಮಾದಕ ವಸ್ತುಗಳ ಸಾಗಾಣೆ, ಐಪಿಎಲ್ ಬೆಟ್ಟಿಂಗ್, ಜೂಜಾಟ ಹಾಗೂ ಇತ್ತೀಚಿನ ವಿಜಯನಗರ 2ನೇ ಹಂತದಲ್ಲಿ ಯುವಕನ ಕೊಲೆ ನಡೆದಿರುವುದು ರಾತ್ರಿ 11.30ರ ಮೇಲೆ. ಮೈಸೂರಿನಲ್ಲಿ ರಾತ್ರಿ 11 ಗಂಟೆಯ ನಂತರ ಪಬ್‌ಗಳನ್ನು ಮುಚ್ಚಬೇಕೆಂಬ ಆದೇಶವಿದ್ದರೂ ಇವರು ಹೇಗೆ ತೆಗೆದಿದ್ದರು. ರಾತ್ರಿ 11 ಗಂಟೆಗೆ ಮುಚ್ಚಿದ್ದರೆ ಒಬ್ಬ ವಿದ್ಯಾವಂತ ಯುವಕನ ಜೀವ ಉಳಿಯುತ್ತಿತ್ತು. ಮೈಸೂರು ನಗರ ಪೊಲೀಸ್ ಆಯುಕ್ತರು ಇದಕ್ಕೆಲ್ಲಾ ಮುಕ್ತಿ ನೀಡಿ ಶಾಂತಿ ಕಾಪಾಡಲು ಸಹಕರಿಸಬೇಕು.

–ಜಿ.ಪಿ.ರಾಜೇಶ್ ಮತ್ತು ಸ್ನೇಹಿತರು, ವಿವಿ ಮೊಹಲ್ಲಾ, ಮೈಸೂರು.

ಸರ್ಕಾರಕ್ಕೆ ಮೇಜರ್ ಸರ್ಜರಿ ಅಗತ್ಯ

ಮಾನ್ಯರೆ,

21 ವರ್ಷಗಳ ನಂತರ, ಮೂಲ ಕಾಂಗ್ರೆಸ್ಸಿಗರೊಬ್ಬರು (ಧರ್ಮಸಿಂಗ್ ನಂತರ) ರಾಜ್ಯದ ಮುಖ್ಯಮಂತ್ರಿ ಆಗುತ್ತಿರುವುದು ಸಹಜವಾಗಿ ಮೂಲ ಕಾಂಗ್ರೆಸ್ಸಿಗರಿಗೆ ಸಂತೋಷದ ವಿಷಯವಾಗಿರಬಹುದು. ಪಕ್ಷಕ್ಕೆ ನಿಷ್ಠರಾದವರನ್ನು ಪಕ್ಷ ಒಂದಿಲ್ಲೊಂದು ದಿನ ಗುರುತಿಸಿ ಅಧಿಕಾರ ನೀಡುತ್ತದೆ ಎಂಬ ಸಂದೇಶವು ಇದಾಗಿರಬಹುದು. ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಕುರ್ಚಿ ಹೂವಿನ ಹಾಸಿಗೆಯಲ್ಲ. ಅವರು ಮೊದಲು ತಮ್ಮ ಸುತ್ತಲಿನ ಹೊಗಳು ಭಟ್ಟರಿಂದ ಅಂತರ ಕಾಯ್ದುಕೊಳ್ಳಬೇಕು. ಹಿಂದಿನ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರ ಆಡಳಿತದಲ್ಲಿ ಸರ್ಕಾರದ ಬಹುತೇಕ ಆಯಕಟ್ಟಿನ ಜಾಗಗಳಲ್ಲಿ ಅವರ ಸ್ವಜಾತಿಯ ಅಧಿಕಾರಿಗಳೇ ನಿಯೋಜಿತಗೊಂಡಿದ್ದು, ಸಾರ್ವಜನಿಕರ ಅಸಮಾಧಾನಕ್ಕೂ ಕಾರಣವಾಗಿತ್ತು. ಇದು ಮುಂದೆ ಹೀಗಾಗಬಾರದು. ಎಲ್ಲಾ ಸಮುದಾಯದವರನ್ನು ಸಮಾನವಾಗಿ ಕಾಣುವಂತಹ ಆಡಳಿತ ನಿಮ್ಮದಾಗಬೇಕು. ಕೆಲವು ಉನ್ನತ ಮಟ್ಟದ ಅಧಿಕಾರಿಗಳು ಹತ್ತಾರು ವರ್ಷಗಳಿಂದ ಒಂದೇ ಜಾಗದಲ್ಲಿದ್ದು, ಅವರು ಯಾವ ಪಕ್ಷ ಅಧಿಕಾರಕ್ಕೆ ಬಂದರೂ ಅವರ ಜೊತೆ ಹೊಂದಾಣಿಕೆ ಮಾಡಿಕೊಂಡು ಹೋಗುವಂತಹ ಚಾಣಾಕ್ಷತೆ ಹೊಂದಿದ್ದಾರೆ. ಇಂತಹವರನ್ನು ಮೊದಲು ಎತ್ತಂಗಡಿ ಮಾಡಿ ಆಡಳಿತ ಯಂತ್ರಕ್ಕೆ ಮೇಜರ್ ಸರ್ಜರಿ ಮಾಡಿದಾಗ ಮಾತ್ರ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಲು ಸಾಧ್ಯ.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಬಹುಮುಖಿ

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರಂತೆ ದೇಶದ ಎಲ್ಲಾ ಮಹಾರಾಜರುಗಳೂ ಇದ್ದಿದ್ದರೆ ನಮಗೆ ಸ್ವಾತಂತ್ರ್ಯವೇ ಬೇಕಿರಲಿಲ್ಲ. ಇದಕ್ಕಾಗಿ ಹೋರಾಟದ ಅಗತ್ಯವೂ ಇರಲಿಲ್ಲ!

–ಮಹಾತ್ಮಗಾಂಧಿ



“ 1894 ರಲ್ಲಿ ಬಾಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ತಂದೆ ಹತ್ತನೇ ಚಾಮರಾಜ ಒಡೆಯರ್, ಕಲ್ಕತ್ತಾದಲ್ಲಿದ್ದಾಗ ಗಂಟಲು ಬೇನೆಯಿಂದ ಅಕಾಲಿಕ ಮರಣಕ್ಕೆ ತುತ್ತಾದರು. ಆಗ ಬಾಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ 1895 ಫೆಬ್ರವರಿ 2ರಂದು ಪಟ್ಟಾಭಿಷೇಕವಾಯಿತು. ಇವರು ಪ್ರಾಪ್ತ ವಯಸ್ಸಿಗೆ ಬರುವವರೆಗೆ ಅಂದಿನ ವೈಸ್‌ರಾಯ್ ಮತ್ತು ಗೌರ್ನರ್ ಜನರಲ್ ಆಗಿದ್ದ ಎಲ್ಗಿನ್ ಅವರು ತಾಯಿ ಮಹಾರಾಣಿ ವಾಣಿವಿಲಾಸರಿಗೆ ಮೈಸೂರು ಸಂಸ್ಥಾನದ ರಾಜಪ್ರತಿನಿಧಿ (ರೀಜೆಂಟ್)ಯಾಗಿ ಅಧಿಕಾರ ವಹಿಸಿ ಕೊಟ್ಟರು. ಭಾರತೀಯ ನಾಗರಿಕ ಸೇವಾ (ಐಸಿಎಸ್) ಅಧಿಕಾರಿಯಾದ ಸರ್ ಸ್ಟುವರ್ಟ್ ಮಿಟ್ ಫೋರ್ಡ್ ಫ್ರೇಸರ್ ಅವರು ಬಾಲಕ ನಾಲ್ವಡಿ ಮಹಾರಾಜರ ಟ್ಯೂಟರ್ ಆಗಿ 1896 ರಲ್ಲಿ ನೇಮಕವಾದರು.

1910ರ ದಶಕ. ಆಳರಸರ ದರ್ಬಾರಿನಲ್ಲಿ ಮೈಸೂರು ದಸರಾ ವೈಭವದಿಂದ ನಡೆಯುತ್ತಿದ್ದ ಕಾಲವದು. ಆಗ ನವರಾತ್ರಿಯ ಸಂದರ್ಭದಲ್ಲಿ ಯೂರೋಪಿಯನ್ನರಿಗಾಗಿ ವಿಶೇಷ ದರ್ಬಾರು ನಡೆಯುತ್ತಿತ್ತು. ದಿವಾನರಾದಿಯಾಗಿ ಅಲ್ಲಿ ಎಲ್ಲಾ ಗಣ್ಯರೂ ಕೆಳಗೆ ಕೂರುವುದು ಮತ್ತು ಯೂರೋಪಿಯನ್ನರು ಹಾಗೂ ಅತಿಥಿಗಳು ಮಾತ್ರ ವಿಶೇಷವಾದ ಕುರ್ಚಿಯ ಮೇಲೆ ಕೂರುವುದು ಬಹುಕಾಲದಿಂದ ನಡೆದು ಬಂದ ಪದ್ಧತಿಯಾಗಿತ್ತು. ಆದರೆ ಅಂದಿನ ಮಹಾರಾಜರಿಗೆ ಈ ತಾರತಮ್ಯತೆ ಸರಿ ಎನಿಸಲಿಲ್ಲ. ತಕ್ಷಣವೇ ತಲೆತಲಾಂತರದಿಂದ ನಡೆದು ಬಂದಿದ್ದ ಈ ತಾರತಮ್ಯತೆಗೆ ತಿಲಾಂಜಲಿಯಿತ್ತು ಎಲ್ಲರೂ ಸಮಾನವಾಗಿ ಕುಳಿತುಕೊಳ್ಳುವಂತಹ ವ್ಯವಸ್ಥೆಗೆ 1910ರಲ್ಲಿ ನಾಂದಿ ಹಾಡಿದರು.

ಆ ಕಾಲದಲ್ಲಿದು ಬಹುದೊಡ್ಡ ವಿಷಯವಾಗಿ ಮೈಸೂರಿಗೆ ಮೈಸೂರೇ ಇಂಥ ಸಮಾನ ನೀತಿಜ್ಞ ಮಹಾರಾಜರ ಸಮಾನ ಸಮಾಜದ ಪ್ರಗತಿಪರ ದೃಷ್ಟಿಯನ್ನು ಮನಸಾರೆ ಮೆಚ್ಚಿ ಕೊಂಡಾಡಿತ್ತು. ಇದೇ ಮಹಾರಾಜರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅಂದು ಅರಮನೆಯೊಳಗಿನ ದರ್ಬಾರಿಗೆ ದಲಿತರಿಗೆ ಪ್ರವೇಶವಿಲ್ಲದಂತಿದ್ದ ಕಟ್ಟುಪಾಡನ್ನು ಸ್ವತಃ ತಾವೇ ಮುರಿದು, ದಲಿತರೂ ನಮ್ಮಂತೆಯೇ ಮನುಷ್ಯರೇ ಆಗಿರುವಾಗ ಇಲ್ಲಿ ಬೇಧ-ಭಾವ ಕೂಡದೆಂದರು. ಅಂತೆಯೇ 1936ರಲ್ಲಿ ನಡೆದ ದಸರಾ ಮಹೋತ್ಸವದ ದರ್ಬಾರಿನಲ್ಲಿ ದಲಿತರಿಗೆ ಎಲ್ಲಾ ಸಂದರ್ಭಗಳಲ್ಲೂ ಭಾಗವಹಿಸುವ ಅವಕಾಶ ಕಲ್ಪಿಸಿ, ಮನುಷ್ಯರೆಲ್ಲಾ ಒಂದೇ ಎಂದು ಅವರನ್ನೂ ಗೌರವಿಸಿ ಮಾನವ ಕುಲ ತಾನೊಂದೇ ಎಂದು ಜಗತ್ತಿಗೆ ಸಾರಿ ಸಮಾನತೆಯ ಬೆಳಕು ಚೆಲ್ಲಿದ್ದರು. ಆ ಮಹಾರಾಜರೇ ಎಂದೆಂದಿಗೂ ನಾಡು ಮರೆಯದ **ನಾಲ್ವಡಿ ಕೃಷ್ಣರಾಜ ಒಡೆಯರ್!**

ದೇಶದ ಯಾವ ಸಂಸ್ಥಾನದ ಮಹಾರಾಜರಿಗೂ ಅಂದು ಇರದಿದ್ದ ಸಮಾನ ನೀತಿ ಅಂದಿನ ಕಾಲದಲ್ಲೇ ಇವರಲ್ಲಿದ್ದು ಸಮಾನತೆಯ ಹರಿಕಾರರಾಗಿ ಎಲ್ಲರಿಗೂ ಮಾದರಿಯಾಗಿದ್ದ ಮಹಾರಾಜರಾಗಿದ್ದರಿವರು. ಇದಕ್ಕಾಗಿಯೇ ಇವರನ್ನು ರಾಷ್ಟ್ರಪಿತ ಮಹಾತ್ಮಗಾಂಧೀಜಿ ಅವರು 'ರಾಜರ್ಷಿ' ಎಂದು ಕರೆದು ಕೊಂಡಾಡಿದ್ದಾರೆ. ಹಾಗೆಯೇ ದಸರಾ ದರ್ಬಾರಿಗೆ ದಲಿತರಿಗೆ ಮುಕ್ತ ಅವಕಾಶ ನೀಡಿ ಅಸ್ಪೃಶ್ಯತೆ ಅಳಿಸಲು ಮುಂದಾದ ಇವರ 'ಸಮಾನ ನೀತಿಜ್ಞ' ಆಡಳಿತವನ್ನು 1938 ರ ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ ವಿಶೇಷ ಸಂಪುಟದಲ್ಲಿ ಬಗೆಬಗೆಯಾಗಿ ಬಣ್ಣಿಸಿ ಶ್ಲಾಘಿಸಲಾಗಿದೆ. ಅಂತೆಯೇ ಪ್ಲೇಟೋನ 'ರಿಪಬ್ಲಿಕ್' ಗ್ರಂಥದಲ್ಲಿ ಆದರ್ಶ ತತ್ವಜ್ಞಾನಿ ರಾಜ ಇವರೆಂದು ಪಾಲ್ ಬ್ರಂಟನ್ ಮೆಚ್ಚುಗೆ ವ್ಯಕ್ತಪಡಿಸಿದ್ದರೆ, ಬ್ರಿಟಿಷ್ ರಾಜ ನೀತಿಜ್ಞ ಲಾರ್ಡ್ ಸ್ಯಾಮ್ಯುಯೆಲ್ ಇವರನ್ನು ಅಶೋಕ ಚಕ್ರವರ್ತಿಗೆ ಹೋಲಿಸಿದ್ದಾರೆ. ಅಷ್ಟೇ ಅಲ್ಲ ದೇಶ ವಿದೇಶಗಳ ಗಣ್ಯರನೇಕರು 'ರಾಜರ್ಷಿ' ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಆಡಳಿತವನ್ನು ರಾಮರಾಜ್ಯ ಎಂದು ಪ್ರಶಂಸಿಸಿರುವುದು ಇತಿಹಾಸದ ಪುಟಗಳಲ್ಲಿದೆ. ದಿವಾನರಾಗಿ ಮಿರ್ಜಾ ಇಸ್ಮಾಯಿಲ್‌ರವರು 1930 ರಲ್ಲಿ ಪ್ರತಿನಿಧಿಸಿದ್ದ ಇಂಗ್ಲೆಂಡ್‌ನಲ್ಲಿ ನಡೆದ ದುಂಡು ಮೇಜಿನ ಸಭೆಯಲ್ಲಿ ನಾಲ್ವಡಿಯವರ ಆಡಳಿತವು ಇಡೀ ದೇಶದಲ್ಲಿಯೇ ಉತ್ತಮ ರಾಜ್ಯವೆಂದು ಪ್ರಶಂಸೆಗೊಳಗಾಗಿತ್ತು. ಸಮಕಾಲೀನ ಮಹಾರಾಜರಾಗಿದ್ದ ಬರೋಡದ ಸಯ್ಯಾಜಿರಾವ್ ಗಾಯಕವಾಡ್ ಮತ್ತು ಕೊಲ್ಲಾಪುರದ ಶಾಹು ಮಹಾರಾಜರು ನಾಲ್ವಡಿಯವರಂತೆಯೇ ಸಾಮಾಜಿಕ ನ್ಯಾಯಾದ ಹರಿಕಾರರಾಗಿದ್ದು, ಜನಪರ ಕಾಳಜಿವುಳ್ಳ ಸಮಾನ ಮನಸ್ಕರಾಗಿದ್ದರು.

ನಾಡಿನ ಭವ್ಯ ಪರಂಪರೆಯನ್ನು ಉಳಿಸಿ, ಬೆಳೆಸಿ, ಬೆಳಗಿಸಿ, ದೇಶದ ಸಂಸ್ಕೃತಿ ಕಲೆ ಅಳಿಸಿ ಹೋಗದಂತೆ ಕಾಪಾಡಿದ ಮಹಾನ್ ವ್ಯಕ್ತಿ ಮತ್ತು ಸಮಾನ ಸಮಾಜದ ಸಮಾನತಾದೃಷ್ಟಿ ಹೊಂದಿದ್ದ ಮಹಾನ್ ಆದರ್ಶವಾದಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜನಿಸಿದ್ದು 1884ರ ಜೂನ್ 4ರಂದು. ತಂದೆ 1399 ರಿಂದ 1950ರವರೆಗೆ ಮೈಸೂರು ರಾಜ್ಯವನ್ನು ಆಳಿದ ಯದುವಂಶದ 23ನೇ ಮಹಾರಾಜರಾದ ಹತ್ತನೆಯ ಚಾಮರಾಜ ಒಡೆಯರ್, ತಾಯಿ ಮಹಾರಾಣಿ ಕೆಂಪನಂಜಮ್ಮಣ್ಣಿ ವಾಣಿವಿಲಾಸ ಸನ್ನಿಧಾನರು. ಇವರ ಜೇಷ್ಠಪುತ್ರರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಹುಟ್ಟಿದ್ದು 1886ರಲ್ಲಿ ಬೆಂಕಿಗೆ ಆಹುತಿಯಾದ ಮೈಸೂರಿನ ಹಿಂದಿನ ಹಳೆಯ ಅರಮನೆಯಲ್ಲಿ. ನಂತರದ ದಿನಗಳಲ್ಲಿ ಇವರ ತಾಯಿ ವಾಣಿವಿಲಾಸ್ ಸನ್ನಿಧಿಯವರೇ ಈಗಿರುವ ಜಗದ್ವಿಖ್ಯಾತ ಮೈಸೂರು ಅರಮನೆಯನ್ನು ಭವ್ಯವಾಗಿ ನಿರ್ಮಿಸಿದರು. ಇದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ತಾಯಿಯ ಅಭೂತಪೂರ್ವ ಸಾಧನೆಯೂ ಹೌದು! ನಾಲ್ವಡಿಯವರ ಒಡಹುಟ್ಟಿದವರು ಜಯಲಕ್ಷ್ಮಮ್ಮಣ್ಣಿ, ಚೆಲುವಾಜಮ್ಮಣ್ಣಿ ಮತ್ತು ಕೃಷ್ಣಾಜಮ್ಮಣ್ಣಿ ಎಂಬ ಮೂವರು ತಂಗಿಯರು. ಓರ್ವ ತಮ್ಮ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್. ಒಟ್ಟು ಐದು ಮಂದಿ ಮಕ್ಕಳಿವರು.

1894 ರಲ್ಲಿ ಬಾಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ತಂದೆ ಹತ್ತನೇ ಚಾಮರಾಜ ಒಡೆಯರ್, ಕಲ್ಕತ್ತಾದಲ್ಲಿದ್ದಾಗ ಗಂಟಲು ಬೇನೆಯಿಂದ ಅಕಾಲಿಕ ಮರಣಕ್ಕೆ ತುತ್ತಾದರು. ಆಗ ಬಾಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ 1895 ಫೆಬ್ರವರಿ 2ರಂದು ಪಟ್ಟಾಭಿಷೇಕವಾಯಿತು. ಇವರು ಪ್ರಾಪ್ತ ವಯಸ್ಸಿಗೆ ಬರುವವರೆಗೆ ಅಂದಿನ ವೈಸ್‌ರಾಯ್ ಮತ್ತು ಗೌರ್ನರ್ ಜನರಲ್ ಆಗಿದ್ದ ಎಲ್ಗಿನ್ ಅವರು ತಾಯಿ ಮಹಾರಾಣಿ ವಾಣಿವಿಲಾಸರಿಗೆ ಮೈಸೂರು ಸಂಸ್ಥಾನದ ರಾಜಪ್ರತಿನಿಧಿ (ರೀಜೆಂಟ್)ಯಾಗಿ ಅಧಿಕಾರ ವಹಿಸಿಕೊಟ್ಟರು. ಭಾರತೀಯ ನಾಗರಿಕ ಸೇವಾ (ಐಸಿಎಸ್) ಅಧಿಕಾರಿಯಾದ ಸರ್ ಸ್ಟುವರ್ಟ್ ಮಿಟ್ ಫೋರ್ಡ್ ಫ್ರೇಸರ್ ಅವರು ಬಾಲಕ ನಾಲ್ವಡಿ ಮಹಾರಾಜರ ಟ್ಯೂಟರ್ ಆಗಿ 1896 ರಲ್ಲಿ ನೇಮಕವಾದರು. ಈ ಸಂದರ್ಭದಲ್ಲಿ 1895ರಿಂದ 1902 ರ ತನಕ ಏಳು ವರ್ಷಗಳ ಕಾಲ ಇವರ ತಾಯಿ ಮಹಾರಾಣಿ ವಾಣಿ ವಿಲಾಸರು ಕೆಲವು ಕಾಲ ರಾಜಪ್ರತಿನಿಧಿಯಾಗಿ ಆಡಳಿತ ನಡೆಸಿದ್ದರು. ಆಗ ಬಾಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ವಿದ್ಯಾಭ್ಯಾಸಕ್ಕಾಗಿಯೇ ರಾಯಲ್ ಸ್ಕೂಲ್ ಎಂಬ ರಾಜಶಾಲೆ 1892 ರಲ್ಲಿ ಆರಂಭವಾಗಿತ್ತು. ಇವರು ಪಾಶ್ಚಾತ್ಯ ಅಧ್ಯಯನದ ಜೊತೆಗೆ ಕನ್ನಡ, ಇಂಗ್ಲೀಷ್, ಉರ್ದು, ಪಾರ್ಷಿ ಮತ್ತು ಸಂಸ್ಕೃತವನ್ನು ಕಲಿತರು. ಅಷ್ಟೇ ಅಲ್ಲ ಈ ಎಲ್ಲಾ ಭಾಷೆಗಳಲ್ಲೂ ಪಾಂಡಿತ್ಯ ಗಳಿಸಿದರು. ಜೆ.ಜೆ.ವೈಟ್ಲಿ, ಪಿ.ರಾಘವೇಂದ್ರ ರಾವ್, ಎಂ.ಎ. ನಾರಾಯಣ್‌ರಾವ್, ಬಿ. ಭೀಮರಾವ್, ಎಂ.ಹುಸೇನ್ ಅಲಿ ಅವರುಗಳು ಗುರುಗಳಾಗಿದ್ದರು. ಮಿರ್ಜಾ ಇಸ್ಮಾಯಿಲ್, ಲಕ್ಷ್ಮಿ ಕಾಂತರಾಜ ಅರಸ್, ಟಿ.ಎಸ್. ಅಲಿಖಾನ್, ಎಂ.ಎಸ್. ರಾಮಚಂದ್ರ ರಾವ್ ಮುಂತಾದವರು ಸಹಪಾಠಿಗಳಾಗಿದ್ದರು. ಬಾಂಬೆ ಸಿವಿಲ್ ಸರ್ವೀಸ್‌ನ ಸರ್ ಸ್ಟುಯೆರ್ಟ್ ಫ್ರೇಸರ್ ಇವರಿಗೆ ಆಡಳಿತದ ಬಗ್ಗೆ ತರಬೇತಿ ನೀಡಿದ್ದರು. ಆ ಸಂದರ್ಭದಲ್ಲೇ ತಮಗೆ ಬೇಕಾದ ಕುದುರೆ ಸವಾರಿ, ಅಂಗಸಾಧನೆ, ಚಿತ್ರಕಲೆ, ಭಾರತೀಯ ಮತ್ತು ಪಾಶ್ಚಾತ್ಯ ಸಂಗೀತ ಸೇರಿದಂತೆ ಸಕಲ ಕಲಾ ಶಿಕ್ಷಣವನ್ನೂ ತಮ್ಮದಾಗಿಸಿಕೊಂಡ ಇವರು ರಾಜ್ಯಾಡಳಿತದ ಚುಕ್ಕಾಣಿ ಹಿಡಿಯಲು ಸರ್ವ ಅರ್ಹತೆಯನ್ನೂ ಪಡೆದುಕೊಂಡು 1902 ರ ಆಗಸ್ಟ್ 8 ರಂದು ವೈಸ್‌ರಾಯ್ ಲಾರ್ಡ್ ಕರ್ಜನ್ ಅವರಿಂದ ಆಡಳಿತದ ಪೂರ್ಣಾಧಿಕಾರ ತೆಗೆದುಕೊಂಡರು. ಅಲ್ಲಿಂದ ಶುರುವಾಯಿತು ಮೈಸೂರು ಸಂಸ್ಥಾನದ 24 ನೇ ಮಹಾರಾಜರಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತದ ಸುವರ್ಣ ಕಾಲ. ಸೋದರ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್‌ಕೂಡ ಇವರಿಗೆ ಒತ್ತಾಸೆಯಾಗಿ ನಿಂತರು.

ಜೂನ್ 4, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನ. ತನ್ನಿಮಿತ್ತ ಈ ಲೇಖನ.

ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ದಿವಾನರಾಗಿ ಪಿ.ಎನ್. ಕೃಷ್ಣಮೂರ್ತಿ (1901–1906), ವಿ.ಪಿ. ಮಾಧವರಾವ್ (1906–1909), ಟಿ.ಆನಂದರಾವ್ (1909–1912), ಎಂ.ವಿಶ್ವೇಶ್ವರಯ್ಯ (1912–1918), ಎಂ.ಕಾಂತರಾಜ ಅರಸ್ (1918–1922), ಎ.ಆರ್.ಬ್ಯಾನರ್ಜಿ (1922–1926) ಹಾಗೂ ಮಿರ್ಜಾ ಇಸ್ಮಾಯಿಲ್ (1926–1940) ಅವರುಗಳು ಸೇವೆ ಸಲ್ಲಿಸಿದ್ದರು. ಈ ಏಳು ಮಂದಿ ಮೇಧಾವಿ ದಿವಾನರುಗಳೂ ನಾಲ್ವಡಿಯವರ ಆಶಯಕ್ಕೆ ಕಾಳಜಿಗೆ ತಕ್ಕಂತೆ ನಾಡಿನ ಸರ್ವತೋಮುಖ ಪ್ರಗತಿಗಾಗಿ ಸಹಕರಿಸಿದ್ದರು. ಹಾಗಾಗಿ ನಾಲ್ವಡಿಯವರು ಕಂಡ ಕನಸುಗಳೆಲ್ಲವೂ ಬಹುಬೇಗ ಸಾಕಾರಗೊಳ್ಳುತ್ತಿದ್ದವು. ಅದರಲ್ಲೂ ವಿಶೇಷವಾಗಿ ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಸಂದರ್ಭದಲ್ಲಿ ನಾಲ್ವಡಿಯವರ ನಾಡಿನ ಅಭಿವೃದ್ಧಿ ಕಾರ್ಯಗಳು ದುಪ್ಪಟ್ಟುಗೊಂಡು ವೇಗ ಪಡೆದುಕೊಂಡಿದ್ದವು.

ಮೈಸೂರು ಸಂಸ್ಥಾನವನ್ನು ಆಳಿದ 25 ಮಂದಿ ಮಹಾರಾಜರ ಪೈಕಿ ಅಭಿವೃದ್ಧಿಯ ರಥ ಚಲಿಸಿದ್ದು ಇವರ ಕಾಲದಲ್ಲೇ ಹೆಚ್ಚು. ಹಾಗಾಗಿ ಮೈಸೂರು ಆಳರಸರ ನೂರಾರು ಅತ್ಯದ್ಭುತ ಮಹತ್ಸಾಧನೆಗಳಲ್ಲಿ ಇವರದೇ ಸಿಂಹಪಾಲು. ಇಡೀ ಏಷ್ಯಾದಲ್ಲೇ ಮೊದಲಿಗೆ 1905ರಲ್ಲಿ ಶಿವನ ಸಮುದ್ರದಲ್ಲಿ ಜಲವಿದ್ಯುತ್ ಉತ್ಪಾದನೆ ಆರಂಭಿಸಿದ ಕೀರ್ತಿಯ ಜೊತೆಗೆ 1905 ರ ಆಗಸ್ಟ್ 5 ರಲ್ಲಿ ಬೆಂಗಳೂರಿಗೆ ವಿದ್ಯುತ್ ಬೀದಿ ದೀಪಗಳನ್ನು ಬೆಳಗಿಸಿ ವಿದ್ಯುತ್ ಬೀದಿದೀಪಗಳನ್ನು ಪಡೆದ ಏಷ್ಯಾದ ಮೊದಲ ನಗರವೆಂಬ ಹೆಗ್ಗಳಿಕೆಯನ್ನು ಇವರು ಬೆಂಗಳೂರಿಗೆ ತಂದು ಕೊಟ್ಟರು. ಅಂತೆಯೇ ಶಿವನಸಮುದ್ರ ಜಲವಿದ್ಯುತ್ ಕೇಂದ್ರದಿಂದ ಕೋಲಾರದ ಚಿನ್ನದ ಗಣಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದು, ಇದು ಏಷ್ಯಾದಲ್ಲೇ ಪ್ರಥಮ ಪ್ರಯೋಗವಾಗಿದೆ. ಹಾಗೆಯೇ ಇವರ ದೂರದೃಷ್ಟಿಯ ಫಲವಾಗಿ 1911ರಲ್ಲಿ ಆರಂಭಿಸಿ 1932 ರಲ್ಲಿ ಸಂಪೂರ್ಣಗೊಂಡು ನಿರ್ಮಿಸಲ್ಪಟ್ಟ ಕೆ.ಆರ್.ಎಸ್. ಎಂದೇ ವಿಶ್ವವಿಖ್ಯಾತಿ ಹೊಂದಿರುವ ಕನ್ನಂಬಾಡಿ ಕಟ್ಟೆ ಅಂದಿನಿಂದ ಇಂದಿಗೂ ಲಕ್ಷಾಂತರ ರೈತರ ಪಾಲಿಗೆ ಅಕ್ಷಯಪಾತ್ರೆಯಾಗಿದೆ. 1913 ರಲ್ಲಿ ಎಲ್ಲರಿಗೂ ಕಡ್ಡಾಯ ಶಿಕ್ಷಣ ಮತ್ತು ಉಚಿತ ಶಿಕ್ಷಣದ ಆದೇಶ ಹೊರಡಿಸಿದ ಖ್ಯಾತಿಯೂ ಇವರದ್ದೇ ಆಗಿದೆ. ಭಾರತೀಯ ರಾಜ್ಯವೊಂದು ಆರಂಭಿಸಿದ ಮೊದಲ ವಿಶ್ವವಿದ್ಯಾಲಯವೆಂಬ ಹಿರಿಮೆಯೊಡನೆ 1916 ರ ಜುಲೈ 27 ರಂದು ಇವರು ಸ್ಥಾಪಿಸಿದ ಮೈಸೂರು ವಿಶ್ವವಿದ್ಯಾನಿಲಯ ಇಂದು ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯವಾಗಿದೆ. ಇದರ ಪ್ರಥಮ ಕುಲಪತಿಗಳಾಗಿ ಕಾರ್ಯನಿರ್ವಹಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಬನಾರಸ್ ವಿಶ್ವವಿದ್ಯಾಲಯದ ಮೊದಲ ಕುಲಪತಿಯಾಗಿಯೂ ಸೇವೆಗೈದು ತಮ್ಮ ಶೈಕ್ಷಣಿಕ ಸಾಧನೆಯನ್ನು ಮೆರೆದಿದ್ದಾರೆ. 1918 ರಲ್ಲಿ ದೇಶದಲ್ಲೇ ಮೊದಲಿಗೆ ನ್ಯಾಯಮೂರ್ತಿ ವೆಸ್ಲಿಮಿಲ್ಲರ್ ಅಧ್ಯಕ್ಷತೆಯಲ್ಲಿ ಹಿಂದುಳಿದ ಆಯೋಗ ರಚಿಸಿ ಮೀಸಲಾತಿಯನ್ನು ಜಾರಿಗೆ ತಂದಿದ್ದ ಕೀರ್ತಿ ಇವರದು.

ಮತದಾನದ ಸಮಯದಲ್ಲಿ ಬೆರಳಿಗೆ ಹಚ್ಚುವ ಬಣ್ಣವನ್ನು ತಯಾರಿಸುವ ದೇಶದ ಏಕೈಕ ಕಾರ್ಖಾನೆಯಾದ ಮೈಸೂರಿನ ಅರಗು ಮತ್ತು ಬಣ್ಣದ ಕಾರ್ಖಾನೆಯನ್ನು 1937 ರಲ್ಲಿ ಸ್ಥಾಪಿಸಿದ ಮತ್ತು ಆಗಿನ ಕಾಲಕ್ಕೆ ಇಡೀ ದೇಶದಲ್ಲೇ ಬೃಹತ್ ವಾಣಿಜ್ಯ ಸಂಕೀರ್ಣವೆಂದು ಕರೆಯಲಾದ 882 ಅಡಿ ಉದ್ದ ಹಾಗೂ 180 ಅಡಿ ಅಗಲದ 726 ಮಳಿಗೆಗಳುಳ್ಳ ದೇವರಾಜ ಮಾರುಕಟ್ಟೆಯನ್ನು 1903 ರಲ್ಲಿ ನಿರ್ಮಿಸಿದ ಕೀರ್ತಿ ಇವರದು. ಅಂತೆಯೇ 1906 ರಲ್ಲಿ ಚಾಮರಾಜೇಂದ್ರ ಇಂಜಿನಿಯರಿಂಗ್ ಸಂಸ್ಥೆ, ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್, 1916 ರಲ್ಲಿ ಶ್ರೀಗಂಧದೆಣ್ಣೆ ಕಾರ್ಖಾನೆ, 1930 ರಲ್ಲಿ ಮೈಸೂರು ಮೆಡಿಕಲ್ ಕಾಲೇಜು, 1921ರಲ್ಲಿ ತಮ್ಮ ಸೋದರಿ ರಾಜಕುಮಾರಿ ಕೃಷ್ಣಾಜಮ್ಮಣ್ಣಿ ಹೆಸರಿನಲ್ಲಿ ಪಿ.ಕೆ. ಸ್ಯಾನಿಟೋರಿಯಂ ನಿರ್ಮಿಸಿದ ಗರಿಮೆ ಕೂಡ ಇವರದೇ. ಇವಿಷ್ಟೇ ಸಾಕು, ಸಾವಿರ ಉದಾಹರಣೆ ನೀಡಬೇಕಾಗಿಲ್ಲ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಧನೆಗಳನ್ನು ಸಾರಲು. ಆಶ್ಚರ್ಯವೆಂದರೆ 1903 ರಲ್ಲೇ ಮೈಸೂರು ನಗರದ ವ್ಯವಸ್ಥಿತ ಅಭಿವೃದ್ಧಿಗಾಗಿ ದೇಶದಲ್ಲೇ ಮೊಟ್ಟಮೊದಲಿಗೆ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯನ್ನು ಇವರು ಸ್ಥಾಪಿಸಿದ್ದರು.

ಮೈಸೂರು ನಗರಕ್ಕೆ ಅರಮನೆಗಳ ನಗರಿ ಎಂಬ ಖ್ಯಾತಿ ಬರಲು ಇವರು ಬಹುಮುಖ್ಯ ಕಾರಣರು. ಇಂದಿಗೂ ಒಂದೊಂದು ಅರಮನೆಯೂ ಒಂದೊಂದು ಕಥೆ ಹೇಳುತ್ತಾ ಮೈಸೂರಿನಲ್ಲಿ ಮಿನುಗುತ್ತಿರುವ ಲಲಿತಮಹಲ್ ಅರಮನೆ, ಚೆಲುವಾಂಬ ವಿಲಾಸ್ ಅರಮನೆ, ಜಯಲಕ್ಷ್ಮಿ ವಿಲಾಸ್ ಅರಮನೆ, ರಾಜೇಂದ್ರವಿಲಾಸ್ ಅರಮನೆ, ಕಾರಂಜಿ ವಿಲಾಸ್ ಅರಮನೆಗಳು ನಾಲ್ವಡಿ ಅವರು ನಿರ್ಮಿಸಿದ್ದೇ ಆಗಿವೆ. ಮೈಸೂರು ಮತ್ತು ಇದರ ಸುತ್ತಮುತ್ತ ಪುಟ್ಟ ಪುಟ್ಟ ಅರಮನೆಗಳಂತೆ ಕಂಗೊಳಿಸುತ್ತಿರುವ ಪುರಭವನ, ಕ್ರಾಫರ್ಡ್ ಭವನ, ವಿಶ್ವೇಶ್ವರಯ್ಯ ಕಟ್ಟಡ, ಲ್ಯಾನ್ಸ್‌ಡೌನ್ ಕಟ್ಟಡ, ದೊಡ್ಡ ಗಡಿಯಾರ, ಜನತಾ ಬಜಾರ್ ಕಟ್ಟಡ, ಗನ್‌ಹೌಸ್, ಮಹಾನಗರ ಪಾಲಿಕೆ ಕಟ್ಟಡ, ಕೃಷಿ ಇಲಾಖೆ ಕಟ್ಟಡ, ವಾಣಿ ವಿಲಾಸ್ ಮಾರುಕಟ್ಟೆ ಮುಂತಾದ ಭವ್ಯ ಭವನಗಳು ಇವರ ಕೊಡುಗೆಯೇ. 1914 ರಲ್ಲಿ 'ಎಕನಾಮಿಕ್ ಜರ್ನಲ್' ಎಂಬ ಪತ್ರಿಕೆಯನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಆರಂಭಿಸಿದ್ದ ಇವರು ಪತ್ರಿಕೋದ್ಯಮಕ್ಕೂ ತಮ್ಮದೇ ಆದ ಕಾಣಿಕೆ ನೀಡಿದ್ದಾರೆ.

1900ರಲ್ಲಿ ಕಾಥೇವಾಡದ ರಾಜಕುಮಾರಿ ಪ್ರತಾಪಕುಮಾರಿ ಬಾಯಿ ಅವರೊಡನೆ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ನಡೆದ ಅದ್ದೂರಿ ವಿವಾಹ ಸಮಾರಂಭದಲ್ಲಿ ವೈವಾಹಿಕ ಜೀವನಕ್ಕೆ ಕಾಲಿರಿಸಿದ್ದ ನಾಲ್ವಡಿ ಅವರು ತಮ್ಮ ಆಳ್ವಿಕೆಯಲ್ಲಿ 25 ವರ್ಷ ಪೂರೈಸಿದ ದ್ಯೋತಕವಾಗಿ ರಜತ ಮಹೋತ್ಸವವನ್ನು ಅಷ್ಟೇ ಭವ್ಯವಾಗಿ ಆಚರಿಸಿಕೊಂಡಿದ್ದರು.

'ರಾಜ ಪ್ರತ್ಯಕ್ಷ ದೈವ' ಎಂಬ ಮಾತಿಗೆ ಅನ್ವರ್ಥವಾಗಿ ಬಾಳಿ ಬದುಕಿದ್ದ ಇವರು 1940 ಆಗಸ್ಟ್ 3 ರಂದು ಇನ್ನಿಲ್ಲವಾದರೂ ಕೂಡ ತಮ್ಮ ಪ್ರಜಾಪರ ಸಾಧನೆಗಳ ಮೂಲಕ ಅವರಿನ್ನೂ ನಾಡಿನಲ್ಲಿ ಜೀವಂತವಾಗಿಯೇ ಇದ್ದಾರೆ. ರೈತರ ಬಾಳನ್ನು ಹಸಿರುಗೊಳಿಸಿ, ಹಸನುಗೊಳಿಸಲು ಇವರು ಕಟ್ಟಿದ ಕನ್ನಂಬಾಡಿ ಕಟ್ಟೆಯ ಭೋರ್ಗರೆತ ಕಂಡಾಗ ಅದೂ ಸಹ ನಾಲ್ವಡಿ ಕೃಷ್ಣರಾಜ ಒಡೆಯರು ಅಮರರು, ಅಜರಾಮರರೆಂದು ಸಾರಿ ಸಾರಿ ಹೇಳುತ್ತಿರುವಂತೆ ಅನಿಸುತ್ತದೆ. ನಾಡಿಗೆ ಬೆಳಕು ನೀಡಲು ಇವರು ಸ್ಥಾಪಿಸಿರುವ ಶಿವನಸಮುದ್ರದ ಜಲವಿದ್ಯುತ್ ಉತ್ಪಾದನಾ ಕೇಂದ್ರವನ್ನು ಕಂಡರೆ ಅದೂ ಕೂಡ ನಾಲ್ವಡಿಯವರು ಬೆಳಕಲ್ಲಿ ಬೆಳಕಾಗಿ ನನ್ನೊಳಗಿದ್ದಾರೆಂದು ನುಡಿಯುತ್ತಿದೆಯೇನೋ ಎನಿಸುತ್ತದೆ. ಏಕೆಂದರೆ, ಇವೆರಡೂ ನಾಡಿಗೆ ನಾಲ್ವಡಿಯವರ ಅಂಥಾ ಅದ್ಭುತ ಕೊಡುಗೆಗಳು.

ನೂತನ ಡಿಸಿಎಂಗೆ ಅಭಿನಂದನೆ...



ಉಪಮುಖ್ಯ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಡಾ.ಜಿ.ಪರಮೇಶ್ವರ್ ಅವರಿಗೆ ಹೂಗುಚ್ಛ ನೀಡಿ ಮುಖಂಡರಾದ ಭರತ್ ರಾಮಸ್ವಾಮಿ, ಕಾಂತರಾಜು, ಶಿವಕುಮಾರ್ ಬೆಂಗಳೂರಿನಲ್ಲಿ ಅಭಿನಂದನೆ ಸಲ್ಲಿಸಿದರು.

ಶಾಲೆಗಳಲ್ಲಿ ಚಿತ್ರೀಕರಣಕ್ಕೆ ಆಕ್ಷೇಪ

ಮೈಸೂರು, ಜೂ.3(ಎಸ್‌ಪಿಎನ್)– ಚಲನಚಿತ್ರ, ಕಿರುಚಿತ್ರ, ಸಾಕ್ಷ್ಯಚಿತ್ರಗಳು, ದೂರದರ್ಶನ ಸೇರಿದಂತೆ ಖಾಸಗಿ ದೃಶ್ಯ ಮಾಧ್ಯಮ, ಧಾರಾವಾಹಿ ಹಾಗೂ ಸಾಮಾಜಿಕ ಜಾಲತಾಣಗಳಿಗಾಗಿ ರೂಪಿಸುವ ವಿಡಿಯೊ ಚಿತ್ರೀಕರಣಗಳಿಗೆ ಶಾಲಾ ವಿದ್ಯಾರ್ಥಿಗಳ ಗೋಪ್ಯತೆ, ಸುರಕ್ಷತೆ, ಕಲಿಕಾ ಪರಿಸರಕ್ಕೆ ಧಕ್ಕೆಯಾಗುವ ಕಾರಣದಿಂದ ಆಯಾಯ ಶಾಲಾ ಮುಖ್ಯಸ್ಥರು, ಅನುಮತಿ ನೀಡಬಾರದು ಎಂದು ಶಾಲಾ ಶಿಕ್ಷಣ ಇಲಾಖಾ ಆಯುಕ್ತ ವಿಕಾಸ್ ಕಿಶೋರ್ ಸುರಳ್ಕರ್ ಸೂಚಿಸಿದ್ದಾರೆ.


ಚಿತ್ರೀಕರಣಗಳಿಂದ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಅಡಚಣೆಯಾಗುತ್ತಿದೆ. ವಿದ್ಯಾರ್ಥಿಗಳ ಕಲಿಕೆಯ ಮೇಲೆ ಪರಿಣಾಮ ಬೀರುತ್ತಿದೆ. ಕೆಲವೆಡೆ ಚಿತ್ರೀಕರಣದ ಸಮಯದಲ್ಲಿ ಮಕ್ಕಳು ಭಾಗಿಯಾಗುವುದಕ್ಕೆ ಪೋಷಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿಗಳ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಮಕ್ಕಳ ಸುರಕ್ಷತೆಯ ಹೊಣೆ ಆಯಾ ಶಾಲೆಯ ಮುಖ್ಯಶಿಕ್ಷಕರದ್ದಾಗಿದೆ. ಶಾಲೆಯ ಮಕ್ಕಳ ಭದ್ರತಾ ದೃಷ್ಟಿಯಿಂದಲೂ ಈ ಕ್ರಮ ಅನಿವಾರ್ಯ ಎಂದು ಹೇಳಿದ್ದಾರೆ.

ಶಾಲಾ ಶಿಕ್ಷಣ ಇಲಾಖೆ ರಾಜ್ಯದ ಎಲ್ಲ ಶಾಲೆಗಳಿಗೂ ವಾರ್ಷಿಕ ಶೈಕ್ಷಣಿಕ ಕ್ರಿಯಾ ಯೋಜನೆಯ ವೇಳಾಪಟ್ಟಿ ಕಳುಹಿಸಿದ್ದು, ಶೈಕ್ಷಣಿಕ ಅವಧಿ, ಪಠ್ಯೇತರ ಚಟುವಟಿಕೆಗಳು, ರಜಾ ದಿನಗಳು ಮತ್ತು ವಾರ್ಷಿಕ ಕಾರ್ಯಸೂಚಿಸಿ ನಿಗದಿ ಮಾಡಿದೆ. ಆದರೆ, ಚಿತ್ರೀಕರಣದಂತಹ ಶಿಕ್ಷಣೇತರ ಚಟುವಟಿಕೆಗಳಿಗೆ ಆಸ್ಪದ ನೀಡಿಲ್ಲ ಎಂದು ವಿವರಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮಾಜಿ ಪ್ರಧಾನಿ ದೇವೇಗೌಡರು, ಮಾಜಿ ಸಿಎಂ ಯಡಿಯೂರಪ್ಪ ಆಶೀರ್ವಾದ ಪಡೆದ ಡಿಕೆಶಿ





ಪ್ರಮಾಣ ವಚನ ಸ್ವೀಕಾರಕ್ಕೆ ಮುನ್ನ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬುಧವಾರ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಾಗೂ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿಯಾಗಿ, ಆಶೀರ್ವಾದ ಪಡೆದರು.

ಬೆಂಗಳೂರು, ಜೂ.3(ಕೆಎಂಶಿ)– ರಾಜಕೀಯ ವೈರತ್ವ ಮರೆತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದು ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ಧುರೀಣರೂ ಆದ ಹೆಚ್.ಡಿ.ದೇವೇಗೌಡರು ಹಾಗೂ ಮಾಜಿ ಮುಖ್ಯಮಂತ್ರಿ ಮತ್ತು ಬಿಜೆಪಿಯ ಮುತ್ಸದ್ದಿ ಬಿ.ಎಸ್.ಯಡಿಯೂರಪ್ಪ ಅವರನ್ನು ಇಂದು ಭೇಟಿ ಮಾಡಿ ಆಶೀರ್ವಾದ ಪಡೆದುಕೊಂಡರು. ಈ ವೇಳೆ ಇಬ್ಬರು ನಾಯಕರ ಅಭಿನಂದಿಸಿದರು. ಪ್ರತಿಯಾಗಿ ಅವರೂ ಸನ್ಮಾನಿಸಿ, ಶುಭ ಕೋರಿದರು.

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುವ ಮುನ್ನ ಪಕ್ಷ ಹಾಗೂ ಪ್ರತಿಪಕ್ಷದ ನಾಯಕರ ಭೇಟಿ ಮಾಡಿ, ಆಶೀರ್ವಾದ ಪಡೆದಿದ್ದಲ್ಲದೆ, ಪ್ರಮಾಣ ವಚನ ಸಮಾರಂಭಕ್ಕೆ ಆಹ್ವಾನಿಸಿದರು.

ಇದಕ್ಕೂ ಮುನ್ನ ಸಂಪುಟ ಸೇರ್ಪಡೆಗೊಳ್ಳುವ ಸದಸ್ಯರಿಗೆ ತಾವೇ ಖುದ್ದು ದೂರವಾಣಿ ಕರೆ ಮಾಡಿ ಎಐಸಿಸಿ ಸಮ್ಮತಿ ತಿಳಿಸಿದರು. ಮಂತ್ರಿಮಂಡಲದಲ್ಲಿ ಅವಕಾಶದಿಂದ ವಂಚಿತರಾದ ಕೆಲವು ಹಿರಿಯ ನಾಯಕರನ್ನು ಸಂಪರ್ಕಿಸಿದ ಶಿವಕುಮಾರ್, ಮುಂದಿನ ದಿನಗಳಲ್ಲಿ ಪಕ್ಷದ ನಾಯಕರು ಸಮ್ಮತಿಸಬಹುದು, ನಮ್ಮ ಜೊತೆ ನೀವಿರಿ, ನಿಮ್ಮ ಜೊತೆ ನಾವಿರುತ್ತೇವೆ ಎಂದು ಸಾಂತ್ವನ ಹೇಳಿದರು.

ಡಿಕೆಶಿಗೆ ಶುಭ ಹಾರೈಸಿದ ಕೇಂದ್ರ ಸಚಿವ ಕುಮಾರಸ್ವಾಮಿ



ಬೆಂಗಳೂರು: ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಇಂದು (ಬುಧವಾರ) ಪ್ರಮಾಣವಚನ ಸ್ವೀಕರಿಸಿದರು. ಲೋಕಭವನದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರು ಪ್ರಮಾಣವಚನ ಬೋಧಿಸಿದ್ದಾರೆ.

ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಎಚ್.ಡಿ.ಕುಮಾರಸ್ವಾಮಿ ಅವರು, ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿರುವ ಡಿ.ಕೆ. ಶಿವಕುಮಾರ್ ಅವರಿಗೆ ಹೃತ್ಪೂರ್ವಕ ಶುಭಾಶಯಗಳು ಮತ್ತು ಅಭಿನಂದನೆಗಳು. ನಿಮ್ಮ ನಾಯಕತ್ವದಲ್ಲಿ ಕರ್ನಾಟಕ ರಾಜ್ಯವು ಎಲ್ಲ ಕ್ಷೇತ್ರಗಳಲ್ಲಿಯೂ ಸಶಕ್ತವಾಗಿ ಮುನ್ನಡೆಯಲಿ ಹಾಗೂ ತಮಗೆ ದೊರೆತಿರುವ ಅವಕಾಶದಲ್ಲಿ ಜನರಿಗೆ ಒಳ್ಳೆಯದನ್ನು ಮಾಡಿ ಎಂದು ಹಾರೈಸುತ್ತೇನೆ ಎಂದಿದ್ದಾರೆ.

ತಮಗೆ ದೊರೆತಿರುವ ಈ ಅವಕಾಶವನ್ನು ಜನಪರ ಕೆಲಸಗಳಿಗೆ ಹಾಗೂ ಕರ್ನಾಟಕದ ಅಭಿವೃದ್ಧಿಗೆ ಉಪಯೋಗ ಮಾಡಿಕೊಳ್ಳಿ ಎಂದು ಆಶಿಸುತ್ತೇನೆ ಎಂದು ಎಚ್.ಡಿ. ಕುಮಾರಸ್ವಾಮಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ

ಶಕ್ತಿ ಕೇಂದ್ರಕ್ಕೆ ನೂತನ ಸಿಎಂ ಡಿ.ಕೆ.ಶಿವಕುಮಾರ್ ವಿಧ್ಯುಕ್ತ ಪ್ರವೇಶ



ರಾಜ್ಯವನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸಲಿ: ಡಿಕೆಶಿಗೆ ಸಿದ್ದರಾಮಯ್ಯ ಶುಭಾಶಯ

ಬೆಂಗಳೂರು: ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಡಿ.ಕೆ.ಶಿವಕುಮಾರ್ ಅವರಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಭಾಶಯಗಳನ್ನು ತಿಳಿಸಿದ್ದಾರೆ.

ಈ ಕುರಿತು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಸಿದ್ದರಾಮಯ್ಯ, ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಸಂಗಾತಿ ಡಿ.ಕೆ.ಶಿವ ಕುಮಾರ್ ಅವರಿಗೂ ಹಾಗೂ ಎಲ್ಲಾ ನೂತನ ಸಚಿವರುಗಳಿಗೂ ಅಭಿನಂದನೆಗಳು ಎಂದು ತಿಳಿಸಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕವನ್ನು ಶಾಂತಿ, ಸಮೃದ್ಧಿ ಹಾಗೂ ಸೌಹಾರ್ದತೆಯ ನಾಡನ್ನಾಗಿ ಕಟ್ಟಲು, ರಾಜ್ಯದ ಪ್ರತಿಯೊಬ್ಬರಿಗೂ ನ್ಯಾಯ, ಸ್ವಾತಂತ್ರ್ಯ ಹಾಗೂ ಸುರಕ್ಷತೆ ಒದಗಿಸಲು ಪ್ರಾಮಾಣಿಕವಾಗಿ ಶ್ರಮಿಸಿದ ಆತ್ಮಸಂತೃಪ್ತಿ ನನಗಿದೆ. ಗ್ಯಾರಂಟಿ ಯೋಜನೆಗಳನ್ನು ಒಳಗೊಂಡ ಅಭಿವೃದ್ಧಿ ಕಾರ್ಯಕ್ರಮಗಳ ಜೊತೆಗೆ ಸಾಮಾಜಿಕ ನ್ಯಾಯವನ್ನು ಅನುಷ್ಠಾನಕ್ಕೆ ತಂದು ಕರ್ನಾಟಕ ಅಭಿವೃದ್ಧಿಯ ಹೊಸ ಮಾದರಿಯನ್ನು ಕೊಟ್ಟಿದ್ದೇವೆ. ಮುಂದಿನ ದಿನಗಳಲ್ಲಿ ನೂತನ ಮುಖ್ಯ ಮಂತ್ರಿಗಳು ಹಾಗೂ ಸಚಿವರು ಎಲ್ಲರೂ ಒಗ್ಗೂಡಿ ಕರ್ನಾಟಕವನ್ನು ಇದೇ ಮಾದರಿಯ ಅಭಿವೃದ್ಧಿ ಪಥದಲ್ಲಿ ಮುನ್ನಡೆಸಲಿ ಎಂದು ಆಶಿಸುತ್ತೇನೆ ಎಂದು ಶುಭ ಕೋರಿದ್ದಾರೆ.



ಪ್ರಮಾಣ ವಚನ ಸ್ವೀಕಾರ ಮಾಡುವ ಮುನ್ನ ಡಿ.ಕೆ.ಶಿವಕುಮಾರ್ ಅವರು ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಶೀರ್ವಾದ ಪಡೆದರು

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸಿದ್ದರಾಮಯ್ಯ; ಸುರ್ಜೇವಾಲ ಅಭಿನಂದನೆ



ಬೆಂಗಳೂರು, ಜೂ. 3(ಕೆಎಂಶಿ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರಾಗಿ ನೇಮಕ ಮಾಡಲಾಗಿದೆ.


ಸಿದ್ದರಾಮಯ್ಯರನ್ನು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅಭಿನಂದಿಸಿದ್ದಾರೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಾದ ಸಿದ್ದರಾಮಯ್ಯ ಅವರಿಗೆ ಹೃತ್ಪೂರ್ವಕ ಅಭಿನಂದನೆ, ಇವರ ನೇಮಕದಿಂದ ಪಕ್ಷ ಸಂಘಟನೆಗೆ ಮತ್ತಷ್ಟು ಬಲ ಬರಲಿದೆ ಎಂದಿದ್ದಾರೆ.

ಸಿದ್ದರಾಮಯ್ಯ ಸಾರ್ವಜನಿಕ ಜೀವನದಲ್ಲಿ ಗಳಿಸಿರುವ ಅಪಾರ ಅನುಭವ, ಸಾಮಾಜಿಕ ನ್ಯಾಯ ಪರ ಹಾಗೂ ಸಂವಿಧಾನದ ಮೌಲ್ಯಗಳ ಮೇಲೆ ಅಚಲ ನಂಬಿಕೆ ಮತ್ತು ಬದ್ಧತೆ ಹೊಂದಿದ್ದಾರೆ. ದೇಶದಲ್ಲಿ ಸಂವಿಧಾನಿಕ ಮೌಲ್ಯಗಳ ಮೇಲೆ ನಡೆಯುತ್ತಿರುವ ದಾಳಿ ಹಾಗೂ ಭಿನ್ನಮತದ ಧ್ವನಿಗಳನ್ನು ಹತ್ತಿಕ್ಕುವ ಪ್ರವೃತ್ತಿಯ ವಿರುದ್ಧ ಕಾಂಗ್ರೆಸ್ ಹೋರಾಟಕ್ಕೆ ಅವರ ಅನುಭವ, ಚಿಂತನೆಗಳು ಮತ್ತಷ್ಟು ಶಕ್ತಿ ತುಂಬಲಿವೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ನಾಯಕತ್ವದಲ್ಲಿ ಎಲ್ಲರೂ ಒಗ್ಗಟ್ಟಾಗಿ ಸಂವಿಧಾನ ರಕ್ಷಣೆ, ಸಾಮಾಜಿಕ ನ್ಯಾಯ ವಿಸ್ತರಣೆಗೆ ಹಾಗೂ ಬಿಜೆಪಿ ನೇತೃತ್ವದ ಕೇಂದ್ರದ ಎನ್‌ಡಿಎ ಸರ್ಕಾರದ ಬೆಲೆ ಏರಿಕೆ ಮತ್ತು ಜನವಿರೋಧಿ ನೀತಿಗಳಿಂದ ಸಂಕಷ್ಟಕ್ಕೆ ಸಿಲುಕಿರುವ ದೇಶದ ಸಾಮಾನ್ಯ ಜನರ ಹಿತಾಸಕ್ತಿ ಕಾಪಾಡುವ ಹೋರಾಟವನ್ನು ಇನ್ನಷ್ಟು ಬಲಿಷ್ಠಗೊಳಿಸಲಾಗುವುದು.

ಸಿದ್ದರಾಮಯ್ಯ ಕಾಂಗ್ರೆಸ್‌ಗೆ ಒಂದು ಶಕ್ತಿ ಎಂಟು ವರ್ಷಗಳು ಕರ್ನಾಟಕದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ ಅನುಭವದಿಂದ ಭಾರತದಲ್ಲಿ ಕಾಂಗ್ರೆಸ್ ಪ್ರಭಾವ ವಿಸ್ತರಿಸಲು ನೆರವಾಗಲಿದೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಹೊಸ ಜವಾಬ್ದಾರಿಯಲ್ಲಿ ಸಿದ್ದರಾಮಯ್ಯ ಮತ್ತಷ್ಟು ಯಶಸ್ಸು ಗಳಿಸಲಿ ಎಂದು ಹಾರೈಸಿದ್ದಾರೆ.

ಇಂದು ವಿವಿಧೆಡೆ ನಾಲ್ವಡಿ ಜಯಂತಿ; ಸಂಸದರು ಭಾಗಿ



ಮೈಸೂರು,ಜೂ.3(ಪಿಎಂ)– ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಜೂ.4 ರಂದು ವಿವಿಧೆಡೆ ನಡೆಯುವ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ಬೆಳಗ್ಗೆ 8ಕ್ಕೆ ಚಾಮುಂಡಿ ಬೆಟ್ಟದಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಪ್ರಯುಕ್ತ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ನಡೆಯುವ ಪೂಜಾ ಕಾರ್ಯಕ್ರಮ ಹಾಗೂ ಅನ್ನ ಸಂತರ್ಪಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಬೆಳಗ್ಗೆ 9.45ಕ್ಕೆ ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸೆಲೆನ್ಸ್ ಆವರಣದಲ್ಲಿ ಅರಸು ಮಂಡಳಿ ಸಂಘದ ವತಿಯಿಂದ ಹಮ್ಮಿಕೊಂಡಿರುವ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ.

ಬೆಳಗ್ಗೆ 10.30ಕ್ಕೆ ಕೆಆರ್ ವೃತ್ತದಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಿದ್ದಾರೆ. ಬೆಳಗ್ಗೆ 11ಕ್ಕೆ ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಮುಂಭಾಗ ನಾಲ್ವಡಿಯವರ ಜಯಂತಿ ಪ್ರಯುಕ್ತ ಹಮ್ಮಿಕೊಂಡಿರುವ ಅನ್ನ ಸಂತರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 12ಕ್ಕೆ ಕರ್ನಾಟಕ ಕಲಾಮಂದಿರದಲ್ಲಿ ಜಿಲ್ಲಾಡಳಿತದ ವತಿಯಿಂದ ಹಮ್ಮಿಕೊಂಡಿರುವ ನಾಲ್ವಡಿಯವರ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಮಧ್ಯಾಹ್ನ 12.30ಕ್ಕೆ ನಾಲ್ವಡಿಯವರ ಜಯಂತಿ ಪ್ರಯುಕ್ತ ವಿವಿಧೆಡೆ ಹಮ್ಮಿಕೊಂಡಿರುವ ಅನ್ನ ಸಂತರ್ಪಣೆ ಕಾರ್ಯಕ್ರದಲ್ಲಿ ಪಾಲ್ಗೊಳ್ಳಲಿದ್ದಾರೆ. ಸಂಜೆ 5.30ಕ್ಕೆ ಗೋಕುಲಂ 3ನೇ ಹಂತದಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ಪರಿವರ್ತನ ವತಿಯಿಂದ ಆಯೋಜಿಸಿರುವ ನಾಲ್ವಡಿಯವರ ಜಯಂತಿ ಹಾಗೂ ಎಸ್‌ಪಿಬಿ ಅವರ ಹುಟ್ಟುಹಬ್ಬ–ಹಾಡು ಹಬ್ಬ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಸಂಸದರ ಆಪ್ತ ಸಹಾಯಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಕೆಶಿ ಪ್ರಮಾಣವಚನ ಸ್ವೀಕರಿಸಿದ ಹಿನ್ನೆಲೆ ಸಂಭ್ರಮಾಚರಣೆ...



ಮೈಸೂರಿನ ಬಸವನಗುಡಿ ಸರ್ಕಲ್‌ನಲ್ಲಿ (ವಾರ್ಡ್ 4) ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಸಿಹಿ ಹಂಚಿ ಪಟಾಕಿ ಸಿಡಿಸಿ ಸಂಭ್ರಮಿಸಲಾಯಿತು. ಈ ವೇಳೆ ಮಹಾನಗರ ಪಾಲಿಕೆ ಮಾಜಿ ಸದಸ್ಯ ಪೈ.ಶ್ರೀನಿವಾಸ್, ಮುಖಂಡರಾದ ವಿಕ್ರಾಂತ್ ಕೃಷ್ಣಪ್ಪ, ಜೈರಾಮೇಗೌಡ, ರತ್ನಮ್ಮ, ವೆಂಕಟೇಶ್, ದಿನೇಶ್, ಬೋರೇಗೌಡ, ಗಣೇಶ್, ಅರವಿಂದ, ಶಿವಕುಮಾರ್, ಅನಿಲ್, ಮುಂತಾದವರು ಉಪಸ್ಥಿತರಿದ್ದರು.

ರೈತರ ಸಂಕಷ್ಟಕ್ಕೆ ಸ್ಪಂದಿಸುವಂತೆ ನೂತನ ಸಿಎಂ ಡಿ.ಕೆ.ಶಿವಕುಮಾರ್‌ಗೆ ಮನವಿ




ಸಿಎಂ ಪದಗ್ರಹಣ ಸಮಾರಂಭದಲ್ಲಿ ರೈತಮುಖಂಡ ಕುರುಬೂರು ಶಾಂತಕುಮಾರ್

ಮೈಸೂರು, ಜೂ.3(ಎಸ್‌ಪಿಎನ್)– ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಡಿ.ಕೆ.ಶಿವಕುಮಾರ್ ಅವರಿಗೆ ರಾಜ್ಯ ಕಬ್ಬು ಬೆಳೆಗಾರರ ಸಂಘ ಅಭಿನಂದನೆ ಸಲ್ಲಿಸಿ, ರೈತರ ಸಂಕಷ್ಟಕ್ಕೆ ಸ್ಪಂದಿಸುವಂತೆ ರೈತ ಮುಖಂಡ ಕುರುಬೂರು ಶಾಂತಕುಮಾರ್ ಮನವಿ ಮಾಡಿದ್ದಾರೆ.

ಮುಖ್ಯಮಂತ್ರಿಗಳ ನೆಚ್ಚಿನ ಮೇಕೆದಾಟು ಯೋಜನೆ ಆದಷ್ಟು ಬೇಗ ಕಾರ್ಯಗತವಾಗಬೇಕು. ಈ ಯೋಜನೆಗೆ ಭೂಮಿ ನೀಡಿದ ರೈತರಿಗೆ ಪರಿಹಾರ ಒದಗಿಸುವ ಹೊಣೆ ಮುಖ್ಯಮಂತ್ರಿಗಳದ್ದು. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕಿಸಾನ್ ಸಮ್ಮಾನ್ ಯೋಜನೆ ಜಾರಿಯಾಗಬೇಕು. 40 ಲಕ್ಷ ಕೃಷಿ ಪಂಪ್ ಸೆಟ್ ರೈತರಿಗೆ ಮಾರಕವಾಗುವ ವಿದ್ಯುತ್ ಖಾಸಗಿಕರಣ ನಿಲ್ಲಬೇಕು. ಒರಿಸ್ಸಾದಲ್ಲಿ ವಿದ್ಯುತ್ ಇಲಾಖೆಯನ್ನು ಖಾಸಗೀಕರಣ ಮಾಡಿ, ವಿಫಲರಾಗಿದ್ದಾರೆ.

ಚುನಾವಣೆಯಲ್ಲಿ ಭರವಸೆ ನೀಡಿದಂತೆ ಭೂಸುಧಾರಣಾ ತಿದ್ದುಪಡಿ ಕಾಯ್ದೆ ಹಾಗೂ ಎಪಿಎಂಸಿ ತಿದ್ದುಪಡಿ ಕಾಯ್ದೆ ರದ್ದಾಗಬೇಕು. ಮುಂಗಾರು ಆರಂಭವಾಗಿರುವುದರಿಂದ ರೈತರಿಗೆ ಬೇಕಾದ ರಸಗೊಬ್ಬರ ಬೀಜ ಸಮರ್ಪಕ ಪೂರೈಕೆಗೆ ಕ್ರಮ ಕೈಗೊಳ್ಳಬೇಕು. ರಾಜ್ಯದಲ್ಲಿ ಕಬ್ಬು ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆಗಳಿಂದ ಬರಬೇಕಾದ 1500 ಕೋಟಿ ಕಬ್ಬಿನ ಬಾಕಿ ಹಣ ನೀಡುವಂತೆ ಒತ್ತಾಯಿಸಿದ್ದು, ಸಿಎಂ ಪದಗ್ರಹಣ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಸಂಭ್ರಮಾಚರಣೆ



ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಸಂಭ್ರಮಾಚರಣೆ ನಡೆಸಲಾಯಿತು. ಚಾಮರಾಜ ಕ್ಷೇತ್ರದ ಮಹಿಳಾ ಮುಖಂಡರು ಪಾಲ್ಗೊಂಡಿದ್ದರು. ನಗರ ಘಟಕದ ಮಹಿಳಾ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಲತಾಮೋಹನ್, ಲಕ್ಷ್ಮಿ, ಸೌಭಾಗ್ಯ, ಆಶಾ, ಗಾಯಿತ್ರಿ, ಸೌಭಾಗ್ಯಮ್ಮ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು ಹಾಜರಿದ್ದರು.

ವಾಲ್ಮೀಕಿ ಹಗರಣ: ಮಾಜಿ ಸಚಿವ ಬಿ.ನಾಗೇಂದ್ರ ಸೇರಿ 30 ಮಂದಿ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಿದ ಸಿಬಿಐ

ಬೆಂಗಳೂರು: ವಾಲ್ಮೀಕಿ ನಿಗಮದ ಹಣ ದುರ್ಬಳಕೆ ಪ್ರಕರಣ ಸಂಬಂಧ ಮಾಜಿ ಸಚಿವ ಬಿ.ನಾಗೇಂದ್ರ ಸೇರಿ 30 ಜನರ ವಿರುದ್ಧ ಕೇಂದ್ರ ತನಿಖಾ ದಳ (ಸಿಬಿಐ) ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದೆ.

ಹಗರಣ ಸಂಬಂಧ ಮೂರು ಪ್ರತ್ಯೇಕ ಚಾರ್ಜ್‌ಶೀಟ್ ಸಲ್ಲಿಸಲಾಗಿದ್ದು, ಎಲ್ಲಾ ಪ್ರಕರಣದಲ್ಲೂ ಬಿ.ನಾಗೇಂದ್ರ ಅವರೇ ಪ್ರಮುಖ ಆರೋಪಿಯಾಗಿದ್ದು, ಇನ್ನುಳಿದಂತೆ ನಿಗಮದ ಅಧಿಕಾರಿಗಳು, ಬ್ಯಾಂಕ್ ಅಧಿಕಾರಿಗಳು ಮತ್ತು ಮಧ್ಯವರ್ತಿಗಳು ಇತರ ಆರೋಪಿಗಳಾಗಿದ್ದಾರೆ.

ಬಿ.ನಾಗೇಂದ್ರ, ಅವರ ಆಪ್ತ ನೆಕ್ಕುಂಟಿ ನಾಗರಾಜ್, ನಿಗಮದ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ.ಪದ್ಮನಾಭ ಮತ್ತು ಹೈದರಾಬಾದ್‌ನ ಸತ್ಯನಾರಾಯಣ ವರ್ಮಾ ವಂಚನೆ ಎಸಗಿದ್ದರು. ಸಿಬಿಐ ತನಿಖೆ ಬಳಿಕ ಒಟ್ಟು 30 ಜನರ ಹೆಸರು ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖವಾಗಿದೆ.

ನಕಲಿ ಚೆಕ್‌ಗಳ ಮೂಲಕ ಸುಮಾರು 89.63 ಕೋಟಿ ಹಣವನ್ನು 600 ಬ್ಯಾಂಕ್ ಖಾತೆಯ ಮೂಲಕ ವರ್ಗಾಯಿಸಿ, ಅದನ್ನು ನಗದು, ಚಿನ್ನ ಮತ್ತು ಐಷಾರಾಮಿ ವಾಹನಗಳಾಗಿ ಪರಿವರ್ತಿಸಲಾಗಿದ್ದು, ಬಿ.ನಾಗೇಂದ್ರ ಅವರು ತಮ್ಮ ಆಪ್ತರ ಮೂಲಕ ಅಕ್ರಮ ಹಣವನ್ನು ಪಡೆದಿರುವುದು ಮತ್ತು ಬೇನಾಮಿ ಆಸ್ತಿಗಳನ್ನು ಖರೀದಿಸಿರುವುದು ತನಿಖೆಯಲ್ಲಿ ಸಾಬೀತಾಗಿದೆ.

ಟೆಂಡರ್‌ನಲ್ಲಿ ಅಕ್ರಮ: ಸ್ಮಾರ್ಟ್ ಕಂಪ್ಯೂಟರ್ ಲ್ಯಾಬ್‌ಗಳು ಮತ್ತು ರೊಟ್ಟಿ ತಯಾರಿಸುವ ಯಂತ್ರಗಳ ಹೆಸರಿನಲ್ಲಿ 13.95 ಕೋಟಿ ಮೊತ್ತದ ಟೆಂಡರ್‌ಗಳನ್ನು ನಾಗರಾಜ್ ಅವರ ಆಪ್ತರಿಗೆ ಸೇರಿದ ಕಂಪನಿಗೆ ಅಕ್ರಮವಾಗಿ ನೀಡಲಾಗಿತ್ತು. ಇದರಲ್ಲಿ ಸಚಿವರಿಗೆ 1.20 ಕೋಟಿ ಲಂಚ ಸಿಕ್ಕಿರುವುದು ಖಚಿತವಾಗಿದೆ. ಮತ್ತು ಇತರೆ ಕಂಪೆನಿಗಳಿಂದ 5.72 ಕೋಟಿ ಹಣ ಪಡೆದಿರುವುದು ತಿಳಿದಿದೆ. ಈ ಹಣವು ಸಹೋದರಿ ಸೋದರ ಮಾವ ಮತ್ತು ಆಪ್ತರ ಖಾತೆಗಳ ಮೂಲಕ ಹಣ ಹರಿದಾಡಿರುವುದು ತನಿಖೆಯಲ್ಲಿ ತಿಳಿದುಬಂದಿದೆ.

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಬೆಂಗಳೂರಿನ ಎಂ.ಜಿ.ರಸ್ತೆ ಶಾಖೆಯ ಅಧಿಕಾರಿಗಳ ದೂರಿನ ಮೇರೆಗೆ ಸಿಬಿಐ ಪ್ರಕರಣ ದಾಖಲಿಸಿಕೊಂಡಿತ್ತು. ಹೈಕೋರ್ಟ್‌ನ ನಿರಂತರ ಮೇಲ್ವಿಚಾರಣೆಯಲ್ಲಿ ನಡೆದ ತನಿಖೆಯು ಹಣಕಾಸು ಅಕ್ರಮಗಳನ್ನು ಬಯಲಿಗೆಳೆದಿದೆ.

ರಾಗಿ ಲಕ್ಷ್ಮಣಯ್ಯರ ರೈತಪರ ಚಿಂತನೆ ಇಂದಿನ ಪೀಳಿಗೆಗೆ ಸ್ಫೂರ್ತಿ

ಮಂಡ್ಯ, ಜೂ.3– ಬಡವರ ಧಾನ್ಯ ವೆಂದೇ ಖ್ಯಾತಿ ಪಡೆದಿರುವ ರಾಗಿ ಬೆಳೆಯ ಅಭಿವೃದ್ಧಿಗೆ ತಮ್ಮ ಜೀವನವನ್ನೇ ಸಮರ್ಪಿಸಿದ ಮಹಾನ್ ಕೃಷಿ ವಿಜ್ಞಾನಿ ರಾಗಿ ಲಕ್ಷ್ಮಣಯ್ಯ ಅವರ ಸಂಶೋಧನೆ, ಸರಳ ವ್ಯಕ್ತಿತ್ವ, ಮಾನವೀಯತೆ ಹಾಗೂ ರೈತರ ಮೇಲಿನ ಅಪಾರ ಕಾಳಜಿ ಇಂದಿನ ಕೃಷಿ ವಿಜ್ಞಾನಿಗಳು, ವಿದ್ಯಾರ್ಥಿಗಳು ಮತ್ತು ರೈತರಿಗೆ ಶಾಶ್ವತ ಮಾರ್ಗದರ್ಶಿಯಾಗಿವೆ ಎಂದು ಮಂಡ್ಯ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಕೆ.ಸಿ.ನಾರಾಯಣಸ್ವಾಮಿ ಹೇಳಿದರು.



ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳು ಹಾಗೂ ಪ್ರಗತಿಪರ ರೈತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ತಾಲೂಕಿನ ವಿ.ಸಿ.ಫಾರಂನ ಕೃಷಿ ವಿವಿಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ರಾಗಿ ಲಕ್ಷ್ಮಣಯ್ಯ ಸ್ಮಾರಕ ಸಮಿತಿ ಹಾಗೂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಆಯೋಜಿಸಿದ್ದ 29 ಮತ್ತು 30ನೇ ವರ್ಷದ ರಾಗಿ ಲಕ್ಷ್ಮಣಯ್ಯ ಸ್ಮಾರಕ ಉಪನ್ಯಾಸ ಹಾಗೂ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ರಾಗಿ ಲಕ್ಷ್ಮಣಯ್ಯ ಅವರು ಸಾಮಾನ್ಯ ರೈತ ಕುಟುಂಬದಲ್ಲಿ ಜನಿಸಿ ತಮ್ಮ ಪರಿಶ್ರಮ, ಬದ್ಧತೆ ಮತ್ತು ವೈಜ್ಞಾನಿಕ ದೃಷ್ಟಿಕೋನದ ಮೂಲಕ ಕೃಷಿ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆ ಮಾಡಿದ್ದಾರೆ. ರಾಗಿ ಬೆಳೆಯಲ್ಲಿ ಉತ್ಪಾದಕತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅವರು ಅಭಿವೃದ್ಧಿಪಡಿಸಿದ ಇಂಡಾಫ್ ಸರಣಿಯ ತಳಿಗಳು ರಾಗಿ ಸಂಶೋಧನೆಯಲ್ಲಿ ಹೊಸ ಅಧ್ಯಾಯವನ್ನು ಬರೆದಿವೆ. ಹಿಂದೆ ಪ್ರತಿ ಎಕರೆಗೆ ಕೇವಲ 2 ರಿಂದ 3 ಕ್ವಿಂಟಾಲ್ ಉತ್ಪಾದನೆಯಷ್ಟೇ ದೊರೆಯುತ್ತಿದ್ದ ರಾಗಿ ಬೆಳೆಯನ್ನು 8 ರಿಂದ 12 ಕ್ವಿಂಟಾಲ್ ಉತ್ಪಾದನೆಯ ಮಟ್ಟಕ್ಕೆ ಏರಿಸುವಲ್ಲಿ ಅವರ ಸಂಶೋಧನೆ ಮಹತ್ತರ ಪಾತ್ರ ವಹಿಸಿದೆ ಎಂದು ತಿಳಿಸಿದರು.

ಭಾರತ ಮತ್ತು ಆಫ್ರಿಕಾದ ರಾಗಿ ತಳಿಗಳ ಸಂಯೋಜನೆಯಿಂದ ಅಭಿವೃದ್ಧಿಪಡಿಸಿದ ಇಂಡಾಫ್ ಸರಣಿಯ ತಳಿಗಳು ಕರ್ನಾಟಕ ಸೇರಿದಂತೆ ದೇಶದ ವಿವಿಧ ಭಾಗಗಳ ರೈತರಿಗೆ ಅಪಾರ ಪ್ರಯೋಜನ ತಂದಿದ್ದು, ರಾಗಿ ಬೆಳೆಯ ಅಭಿವೃದ್ಧಿಯಲ್ಲಿ ಕ್ರಾಂತಿಕಾರಕ ಬದಲಾವಣೆ ತಂದಿವೆ ಎಂದು ಹೇಳಿದರು. ವಿಶೇಷವಾಗಿ ಅವರ ಬಹುತೇಕ ಸಂಶೋಧನಾ ಕಾರ್ಯಗಳು ಮಂಡ್ಯದ ವಿ.ಸಿ. ಫಾರಂನಲ್ಲಿ ನಡೆದಿರುವುದು ವಿಶ್ವವಿದ್ಯಾಲಯಕ್ಕೆ ಹೆಮ್ಮೆಯ ಸಂಗತಿಯಾಗಿದೆ ಎಂದರು.

ಸಮಾರಂಭದಲ್ಲಿ ಸ್ಮಾರಕ ಉಪನ್ಯಾಸ ನೀಡಿದ ಖ್ಯಾತ ಸಸ್ಯ ತಳಿ ಕೃಷಿ ವಿಜ್ಞಾನಿ ಡಾ. ಶರಣ ಬಸವೇಶ್ವರ ಅಂಗಡಿ ಅವರು "ಬೆಳೆ ಸುಧಾರಣೆ ಮತ್ತು ರೈತ ಸಮೃದ್ಧಿ" ವಿಷಯದ ಕುರಿತು ಉಪನ್ಯಾಸ ನೀಡಿ, ಸುಧಾರಿತ ತಳಿಗಳು, ವೈಜ್ಞಾನಿಕ ಕೃಷಿ ಪದ್ಧತಿಗಳು ಹಾಗೂ ಹವಾಮಾನ ಸ್ನೇಹಿ ತಂತ್ರಜ್ಞಾನಗಳ ಅಳವಡಿಕೆಯಿಂದ ರೈತರ ಆದಾಯ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಬಹುದೆಂದು ಅಭಿಪ್ರಾಯಪಟ್ಟರು.

ಸಾಹಿತಿ ಪ್ರೊ.ಎಂ.ನಾರಾಯಣಸ್ವಾಮಿ ಮಾತನಾಡಿ, ರಾಗಿ ಲಕ್ಷ್ಮಣಯ್ಯ ಅವರ ವ್ಯಕ್ತಿತ್ವ, ಸರಳತೆ ಹಾಗೂ ಕೃಷಿ ಕ್ಷೇತ್ರಕ್ಕೆ ನೀಡಿದ ಅಪಾರ ಕೊಡುಗೆಗಳನ್ನು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳು ಹಾಗೂ ಪ್ರಗತಿಪರ ರೈತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಪರ್ಣ ಹಾಗೂ ಕು.ಸ್ಫೂರ್ತಿ ಆರ್.ಪ್ರಶಸ್ತಿ ಪ್ರದಾನ ಮಾಡಲಾಯಿತು. ರಾಗಿ ಬೆಳೆ, ಭತ್ತ ಬೆಳೆ, ಹೈನುಗಾರಿಕೆ ಮತ್ತು ಹಾಲು ಉತ್ಪಾದನೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಶ್ರೀ ಚಲುವಯ್ಯ, ಶ್ರೀಮತಿ ತನುಜಾ, ಶ್ರೀ ಎಂ.ಪುಟ್ಟಮಲ್ಲೇಗೌಡ, ಶ್ರೀ ಕೆ.ಎ.ಮಂಚೇಗೌಡ ಹಾಗೂ ಶ್ರೀ ಸಂತೋಷ್ ಕುಮಾರ್ ಆರ್. ಅವರಿಗೆ ರೈತ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.

ರಾಗಿ ಲಕ್ಷ್ಮಣಯ್ಯ ಸ್ಮಾರಕ ಸಮಿತಿಯ ಅಧ್ಯಕ್ಷರಾದ ಕೆ.ಬೋರಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಡೀನ್ (ಕೃಷಿ) ಡಾ.ಪಿ.ಎಸ್.ಫಾತಿಮಾ, ಸಹ ಸಂಶೋಧನಾ ನಿರ್ದೇಶಕ ಡಾ. ಬಿ.ಎಸ್. ಬಸವರಾಜು, ಸುನಂದ ಜಯರಾಮ್, ರೈತ ಮುಖಂಡರು, ಎಚ್.ಎಲ್.ವಸಂತ ಕುಮಾರ್ ನಿವೃತ್ತ ಸಹ ಪ್ರಾಧ್ಯಾಪಕರು, ಕೆ.ಆರ್.ಜೈರಾಮು, ಎಸ್ ಯೋಗಾನಂದ, ಮುರುಳಿಧರ್ ಎಸ್ ಬೆಳ್ಳೂರು, ಹಾಗೂ ಸೈಯದ್ ಗನಿ ಖಾನ್ ಸೇರಿದಂತೆ ಸ್ಮಾರಕ ಸಮಿತಿಯ ಪದಾಧಿಕಾರಿಗಳು, ವಿಜ್ಞಾನಿಗಳು, ರೈತ ಮುಖಂಡರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ರಾಗಿ ಲಕ್ಷ್ಮಣಯ್ಯ ಅವರು ದೈಹಿಕವಾಗಿ ನಮ್ಮೊಂದಿಗಿಲ್ಲದಿದ್ದರೂ, ಅವರ ಸಂಶೋಧನಾ ಸಾಧನೆಗಳು, ರೈತರ ಮೇಲಿನ ಕಾಳಜಿ, ಕೃಷಿ ಅಭಿವೃದ್ಧಿಯ ಬದ್ಧತೆ ಮತ್ತು ಮಾನವೀಯ ಮೌಲ್ಯಗಳು ಇಂದಿಗೂ ಜೀವಂತವಾಗಿದ್ದು, ಮುಂದಿನ ಪೀಳಿಗೆಗಳಿಗೆ ಸ್ಫೂರ್ತಿಯ ಚಿಲುಮೆಯಾಗಿವೆ ಎಂದು ಕಾರ್ಯಕ್ರಮದಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಗೌಡರ ಮನೆಯಲ್ಲಿ ಸೂತಕದ ಛಾಯೆ ಎಂಬ ಚಲುವರಾಯಸ್ವಾಮಿ ಹೇಳಿಕೆ ಅಕ್ಷಮ್ಯ

ಜೆಡಿಎಸ್ ಯುವಘಟಕದ ಅಧ್ಯಕ್ಷ ಕಂಸಾಗರ ರವಿ ಅಸಮಾಧಾನ



ಮಂಡ್ಯ, ಜೂ.3– ಮಂತ್ರಿಗಿರಿ ಗಿಟ್ಟಿಸಿಕೊಳ್ಳಲು, ಸಮುದಾಯದ ಪ್ರಾತಿನಿಧ್ಯತೆ ತೋರಿಸಿಕೊಳ್ಳಲು ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಮನೆಯಲ್ಲಿ ಸೂತಕದ ಛಾಯೆ ಎಂದು ಹೇಳಿಕೆ ನೀಡಿರುವುದು ಅಕ್ಷಮ್ಯ ಎಂದು ಯುವ ಜೆಡಿಎಸ್ ಅಧ್ಯಕ್ಷ ಕಂಸಾಗರ ರವಿ ಖಂಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುವ ಘೋಷಣೆ ಆದಾಗಿಂದಲೂ ರಾಜ್ಯದ ರಾಜಕೀಯದಲ್ಲಿ ಸ್ಫೋಟಕ ಬೆಳವಣಿಗೆಗಳು ಆಗುತ್ತಿವೆ. ಈ ವೇಳೆ ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಈ ರೀತಿಯ ಹೇಳಿಕೆ ನೀಡುವುದು ಸರಿಯಲ್ಲ ಎಂದು ಹೇಳಿದರು.

ಅವರು 1995ರಲ್ಲಿ ಮೊದಲ ಬಾರಿಗೆ ಜೆಡಿಎಸ್ ಪಕ್ಷದಿಂದ ಶಾಸಕ ಸ್ಥಾನಕ್ಕೆ ಸ್ಪರ್ಧಿಸಿದ ವೇಳೆ ಎಚ್.ಡಿ.ದೇವೇಗೌಡರ ಕುಟುಂಬದ ಕೊಡುಗೆಯನ್ನು ಸ್ಮರಿಸಬೇಕು. ಕ್ಷೇತ್ರದ ಪ್ರಭಾವಿಯಾಗಿದ್ದ ಎಲ್.ಆರ್.ಶಿವರಾಮೇಗೌಡ ವಿರುದ್ಧ ಗೆಲ್ಲಲು ವಹಿಸಿದ ಶ್ರಮವನ್ನು ನೆನೆಯಬೇಕು. ಧರ್ಮಸಿಂಗ್ ಸರಕಾರದಲ್ಲಿ ಇವರಿಗೆ ಸಚಿವ ಸ್ಥಾನ ಕೊಡಿಸಲು ಹೆಚ್.ಡಿ.ಕುಮಾರಸ್ವಾಮಿ ಶ್ರಮಿಸಿದ್ದನ್ನು ಕಡೆಗಣಿಸಿ ಇದೀಗ ಈ ರೀತಿಯ ಹೇಳಿಕೆ ನೀಡುವುದು ಸರಿಯಲ್ಲ ಎಂದು ಕಿಡಿಕಾರಿದರು. ಇವರ ವರ್ತನೆಗೆ ಕ್ಷೇತ್ರದ ಜನತೆ ತಕ್ಕ ಪಾಠ ಕಲಿಸುತ್ತಾರೆ. ಇನ್ನೂ ರಾಷ್ಟ್ರೀಯ ಪಕ್ಷದ ಜಿಲ್ಲಾಧ್ಯಕ್ಷರಾದ ಸಿ.ಡಿ. ಗಂಗಾಧರ್ ಬುಡುಬುಡಿಕೆಯವ ರಂತೆ ಜೆಡಿಎಸ್ ಜಿಲ್ಲಾಧ್ಯಕ್ಷರಿಗೆ ಅಗೌರವ ತೋರಿದ್ದಾರೆ. ಮಿಸ್ಟರ್ ಪದಬಳಕೆ ಆಕ್ಷೇಪಾರ್ಹವಲ್ಲ, ಅದೇನೋ ಅಸಂವಿಧಾನಿಕ ಪದ ಬಳಕೆ ಮಾಡಿದವರ ರೀತಿ ವರ್ತಿಸಿದ್ದಾರೆ ಎಂದು ಕೆಂಡಾಮಂಡಲವಾದರು.

ಮಾಜಿ ಶಾಸಕ ಕೆ.ಸುರೇಶ್‌ಗೌಡರು ಆಡು ಭಾಷೆಯಲ್ಲಿ ನಾಲಿಗೆಗೆ ಮಟ್ಟ ಹಾಕುವ ನಿಟ್ಟಿನಲ್ಲಿ ಪದ ಬಳಕೆ ಮಾಡಿದ್ದಾರೆ. ಅದರ ವಿರುದ್ಧ ದೂರು ನೀಡುವುದು. ಅದಕ್ಕಿಂತಲೂ ಅಕ್ಷಮ್ಯ ಪದಗಳನ್ನು ಗಂಗಾಧರ್ ಬಳಸಿದ್ದಾರೆ. ಒಬ್ಬ ರಾಷ್ಟ್ರೀಯ ಪಕ್ಷದ ಜಿಲ್ಲಾಧ್ಯಕ್ಷರಾಗಿ ನೋಡಿ ಮಾಡಿ ಪದಬಳಕೆ ಮಾಡಬೇಕು. ಎಂದರು.

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಪಟ್ಟಾಭಿಷೇಕ

ಪಾಂಡವಪುರ ತಾಲೂಕಿನಾದ್ಯಂತ ಸಂಭ್ರಮಾಚರಣೆ

ಪಾಂಡವಪುರ, ಜೂ.3– ರಾಜ್ಯದ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಪಾಂಡವಪುರ ಪಟ್ಟಣ ಸೇರಿದಂತೆ ತಾಲೂಕಿನ ವಿವಿಧೆಡೆ ಸಿಎಂ ಡಿಕೆಶಿ ಅಭಿಮಾನಿಗಳು ಹಾಗೂ ಕಾಂಗ್ರೆಸ್–ರೈತಸಂಘ ಕಾರ್ಯಕರ್ತರು ಸಂಭ್ರಮಾಚರಣೆ ಮಾಡಿದರು.



ಪಾಂಡವಪುರ ಪಟ್ಟಣದ ಬನ್ನಾರಿ ಮಾರಿಯಮ್ಮ ದೇವಸ್ಥಾನದಲ್ಲಿ ಡಿಕೆಶಿ ಅಭಿಮಾನಿಗಳು, ಕಾಂಗ್ರೆಸ್ ಕಾರ್ಯಕರ್ತರು ವಿಶೇಷ ಪೂಜೆ ಸಲ್ಲಿಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಚ್.ತ್ಯಾಗರಾಜು ಅವರ ನೇತೃತ್ವದಲ್ಲಿ ಡಿಕೆಶಿ ಅಭಿಮಾನಿಗಳು, ಕಾಂಗ್ರೆಸ್ ಕಾರ್ಯಕರ್ತರು ಪಟ್ಟಣದ ಬನ್ನಾರಿ ಮಾರಿಯಮ್ಮನ ದೇವಸ್ಥಾನದಲ್ಲಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಬಳಿಕ ಸಾರ್ವಜನಿಕರಿಗೆ ಸಿಹಿ ಹಾಗೂ ಪ್ರಸಾದ ಹಂಚಿ ಸಂಭ್ರಮಿಸಿದರು. ಪ್ರಮಾಣ ವಚನ ಸ್ವೀಕರಿಸುವ ಕಾರ್ಯಕ್ರಮವನ್ನು ವೀಕ್ಷಿಸಲು ಪಟ್ಟಣದ ಅನ್ನಪೂರ್ಣ ಹೋಟೆಲ್ ಬಳಿ ಎಲ್‌ಇಡಿ ಟಿವಿ ವ್ಯವಸ್ಥೆ ಕಲ್ಪಿಸಿ ಪ್ರಮಾಣ ವಚನ ವೀಕ್ಷಣೆ ಮಾಡಲು ಅನುಕೂಲ ಮಾಡಿಕೊಟ್ಟರು. ಡಿಕೆಶಿ ಪ್ರಮಾಣ ವಚನ ಸ್ವೀಕರಿಸುತ್ತಿದ್ದಂತೆಯೇ ಪಟಾಕಿ ಸಿಡಿಸಿ ಘೋಷಣೆ ಕೂಗಿ ಸಂಭ್ರಮಿಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಚ್. ತ್ಯಾಗರಾಜು ಮಾತನಾಡಿ, ನಮ್ಮ ನಾಯಕರಾದ ಡಿ.ಕೆ.ಶಿವಕುಮಾರ್ ಅವರು ನಾಡಿನ ಮುಖ್ಯಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸುತ್ತಿರುವ ಹಿನ್ನೆಲೆಯಲ್ಲಿ ದೇವಿಗೆ ವಿಶೇಷವಾದ ಪೂಜೆ ಸಲ್ಲಿಸಿ ಸಂಭ್ರಮಾಚರಣೆ ಮಾಡುತ್ತಿದ್ದೇವೆ. ಅಲ್ಲದೆ ತಾಲೂಕಿನ ಜಕ್ಕನಹಳ್ಳಿ, ನಾರಾಯಣಪುರ, ಪಟ್ಟಸೋಮನಹಳ್ಳಿ ಸೇರಿದಂತೆ ಹಲವೆಡೆ ಸಂಭ್ರಮಾಚರಣೆ ಮಾಡಲಾಗುತ್ತಿದೆ ಎಂದರು.

ಟಗರು ಬಲಿಕೊಟ್ಟು ಸಂಭ್ರಮಾಚರಣೆ: ತಾಲೂಕಿನ ದೇವೇಗೌಡನಕೊಪ್ಪಲು ಗೇಟ್ ಬಳಿ ರಾಮಬಾಣ ಕಾಲುವೆ ಬಳಿಯ ನಟರಾಜ್ ಅಂಗಡಿ ಬಳಿ ಚಿಕ್ಕಾಡೆ ಹಾಗೂ ದೇವೇಗೌಡನಕೊಪ್ಪಲು ಗ್ರಾಮದ ಸಿಎಂ ಡಿಕೆಶಿ ಅಭಿಮಾನಿಗಳು ಹಾಗೂ ಕಾಂಗ್ರೆಸ್–ರೈತಸಂಘದ ಕಾರ್ಯಕರ್ತರು ವಿಶೇಷವಾಗಿ ಟಗರು ಬಲಿಕೊಟ್ಟು, ಪಟಾಕಿ ಸಿಡಿಸಿ ಸಿಹಿಹಂಚಿ ಸಂಭ್ರಮಾಚರಣೆ ಮಾಡಿದರು.

ಸಿಎಂ ಡಿ.ಕೆ.ಶಿವಕುಮಾರ್ ಬೃಹತ್ ಭಾವಚಿತ್ರವುಳ್ಳ ಕಟೌಟ್ ಮುಂದೆ ಜಮಾಯಿಸಿದ ಅಭಿಮಾನಿಗಳು ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಬಳಿಕ ಅವರ ಭಾವಚಿತ್ರದ ಎದುರು ಟಗರು ಕತ್ತರಿಸಿ ಸಂಭ್ರಮಿಸಿದರು. ಬಳಿಕ ಸ್ಥಳದಲ್ಲಿಯೇ ಮಾಂಸದ ಊಟ ಅಡುಗೆ ತಯಾರಿಸಿ ಕಾರ್ಯಕರ್ತರಿಗೆ ವಿತರಣೆ ಮಾಡುವ ಮೂಲಕ ಶುಭಹಾರೈಸಿದರು.

ಈ ಸಂದರ್ಭದಲ್ಲಿ ಡಿಕೆಶಿ ಅಭಿಮಾನಿಗಳಾದ ರವೀಂದ್ರ, ಶ್ರೀಕಾಂತ್, ಶರತ್, ಕೃಷ್ಣೇಗೌಡ, ಮಹೇಶ್, ನಟರಾಜು, ಮೋಹನ್, ಎನ್.ಕೆ.ಸ್ವಾಮೀಗೌಡ, ಕೇಬಲ್ ಹರೀಶ್, ನಟರಾಜು, ಜಗದೀಶ್, ಧರ್ಮರಾಜು, ಕೃಷ್ಣೇಗೌಡ, ರಾಘು ಸೇರಿದಂತೆ ಕಾಂಗ್ರೆಸ್–ರೈತಸಂಘದ ಕಾರ್ಯಕರ್ತರು ಭಾಗವಹಿಸಿ ಸಂಭ್ರಮಾಚರಣೆ ಮಾಡಿದರು.

ಡಿಕೆಶಿ ಸಿಎಂ: ಕೆ.ಆರ್.ಪೇಟೆಯಲ್ಲಿ ಸಂಭ್ರಮಾಚರಣೆ



ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಅಘಲಯ ಎ.ಎಸ್.ರಮೇಶ್ ನೇತೃತ್ವದಲ್ಲಿ ಕೆ.ಆರ್.ಪೇಟೆ ಟೌನ್ ಕ್ಲಬ್ ವೃತ್ತದಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ಅವರ ಸುಮಾರು 25 ಅಡಿ ಎತ್ತರದ ಬೃಹತ್ ಕಟೌಟ್‌ಗೆ ಕ್ಷೀರಾಭಿಷೇಕ ಮಾಡಿ, ಸಾರ್ವಜನಿಕರಿಗೆ ಸಿಹಿ ವಿತರಿಸಿ, ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಲಾಯಿತು.

ಪಾಲಹಳ್ಳಿ ಪೈ. ವಿಜೇಂದ್ರ ನಿಧನ

ಶ್ರೀರಂಗಪಟ್ಟಣ: ತಾಲೂಕಿನ ಪಾಲಹಳ್ಳಿ ಗ್ರಾಮದ ಹೆಸರಾಂತ ಕುಸ್ತಿಪಟು ಪೈಲ್ವಾನ್ ವಿಜೇಂದ್ರ (65) ಬುಧವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ.



ದಿವಂಗತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರು ವಿಜಯ ಸಿಂಹ ಹಾಗೂ ದಸರಾ ಕುಮಾರ್ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡು ಹೆಸರಾಂತ ಕುಸ್ತಿ ಪಟು ಎಂದು ಹೆಸರು ಗಳಿಸಿದ್ದರು. ಬುಧವಾರ ಸಂಜೆ ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಪಾಲಹಳ್ಳಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೂರನೇ ಪುಟದಿಂದ

ಕರ್ನಾಟಕದ ಮುಖ್ಯಮಂತ್ರಿ




ಎಂ.ಬಿ.ಪಾಟೀಲ್ (ವೀರಶೈವ ಲಿಂಗಾಯತ), ರಾಮಲಿಂಗಾರೆಡ್ಡಿ (ರೆಡ್ಡಿ ಒಕ್ಕಲಿಗ), ಸತೀಶ್ ಜಾರಕಿಹೊಳಿ (ಎಸ್‌ಟಿ), ಕೃಷ್ಣಬೈರೇಗೌಡ (ಒಕ್ಕಲಿಗ). ಪ್ರಿಯಾಂಕ್ ಖರ್ಗೆ (ಎಸ್‌ಸಿ), ಯು.ಟಿ. ಖಾದರ್ (ಮುಸ್ಲಿಂ), ಈಶ್ವರ್ ಖಂಡ್ರೆ (ವೀರಶೈವ ಲಿಂಗಾಯತ), ಯತೀಂದ್ರ ಹಾಗೂ ಬೈರತಿ ಸುರೇಶ್ (ಕುರುಬ) ಅಲ್ಲದೆ, ಡಾ.ಶರಣಪ್ರಕಾಶ್ ಪಾಟೀಲ್ (ವೀರಶೈವ ಲಿಂಗಾಯತ) ಮಂತ್ರಿಗಳಾಗಿ ರಾಜ್ಯಪಾಲರಿಂದ ಪ್ರಮಾಣ ವಚನ ಸ್ವೀಕರಿಸಿದರು. ಯತೀಂದ್ರ ಹೊರತು ಪಡಿಸಿ ಉಳಿದ 12 ಮಂದಿ ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರುಗಳಾಗಿ ಕಾರ್ಯನಿರ್ವಹಿಸಿದವರು.

ವಿಧಾನಸಭಾ ಅಧ್ಯಕ್ಷ ಯು.ಟಿ. ಖಾದರ್ ತಮ್ಮ ಸ್ಪೀಕರ್ ಸ್ಥಾನಕ್ಕೆ ರಾಜೀನಾಮೆ ನೀಡಿ ನಂತರ ಶಿವಕುಮಾರ್ ಅವರ ಸಂಪುಟದಲ್ಲಿ ಮಂತ್ರಿಯಾದರು. ಯತೀಂದ್ರ ಇಂದು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದವರಲ್ಲಿ ಮೊದಲ ಬಾರಿಗೆ ಮಂತ್ರಿಯಾದವರು.

ಶಿವಕುಮಾರ್ ತಮ್ಮನ್ನೂ ಸೇರಿದಂತೆ 14 ಸಚಿವರ ಮಂತ್ರಿಮಂಡಲದ ಸರ್ಕಾರ ರಚಿಸಿಕೊಂಡಿದ್ದಾರೆ. ಇನ್ನು ಉಳಿದ 20 ಸ್ಥಾನಗಳನ್ನು ರಾಜ್ಯಸಭಾ ಮತ್ತು ವಿಧಾನ ಪರಿಷತ್ ಚುನಾವಣೆ ನಂತರ ಭರ್ತಿ ಮಾಡಿಕೊಳ್ಳಲು ತೀರ್ಮಾನಿಸಿದ್ದಾರೆ.

ಪ್ರಮಾಣವಚನ ಸಮಾರಂಭದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ, ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾಂಗ್ರೆಸ್ ಆಡಳಿತವಿರುವ ಕೇರಳಂ, ತೆಲಂಗಾಣ, ಹಿಮಾಚಲಪ್ರದೇಶದ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು.

ರಾಜ್ಯ ಕಾಂಗ್ರೆಸ್ ಸಂಸದರು, ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು, ಹಲವು ಸಮುದಾಯದ ಶ್ರೀಗಳು, ಕನಕಪುರ ದೊಡ್ಡ ಆಲಹಳ್ಳಿ ಸರ್ಕಾರಿ ಶಾಲೆ ವಿದ್ಯಾರ್ಥಿಗಳು, ಕೂಲಿ ಕಾರ್ಮಿಕರು, ಪೌರ ಕಾರ್ಮಿಕರು, ರೈತ ಮುಖಂಡರು, ದಲಿತ ಸಂಘಟನೆ ಮುಖಂಡರು, ಹಿಂದುಳಿದ ವರ್ಗಗಳ ಮುಖಂಡರು, ಸ್ತ್ರೀಶಕ್ತಿ ಸಂಘಗಳ ಪ್ರತಿನಿಧಿಗಳು. ಚಲನಚಿತ್ರ, ನ್ಯಾಯಾಂಗ, ಕ್ರೀಡಾಕ್ಷೇತ್ರ, ರಂಗಭೂಮಿ ಕಲಾವಿದರು, ಸಾಹಿತಿಗಳು, ಕೈಗಾರಿಕೋದ್ಯಮಿಗಳು, ವಾಣಿಜ್ಯೋದ್ಯಮಿಗಳು, ಹೋಟೆಲ್ ಉದ್ಯಮಿಗಳು, ಯುವ ಮುಖಂಡರು ಸೇರಿದಂತೆ ಸಮಾಜದ ಎಲ್ಲ ವರ್ಗಗಳ ಜನರು ಪಾಲ್ಗೊಂಡಿದ್ದರು.



ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಆಗಮಿಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ, ಸಂಘಟನಾ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾಂಗ್ರೆಸ್ ಆಡಳಿತವಿರುವ ಕೇರಳಂ, ತೆಲಂಗಾಣ, ಹಿಮಾಚಲ ಪ್ರದೇಶದ ಮುಖ್ಯಮಂತ್ರಿಗಳಿಗೆ ಡಿ.ಕೆ. ಶಿವಕುಮಾರ್ ವಿಮಾನ ನಿಲ್ದಾಣದಲ್ಲಿ ಆತ್ಮೀಯವಾಗಿ ಸ್ವಾಗತಿಸಿದರು.

ಕೆಪಿಸಿಸಿ ನೂತನ ಅಧ್ಯಕ್ಷರಾಗಿ ಬಿ.ಕೆ.ಹರಿಪ್ರಸಾದ್ ನೇಮಕ

ಸಂಸತ್ತಿನ ಮೇಲ್ಮನೆಯ ಸದಸ್ಯರಾಗಿ ದಿಲ್ಲಿಯ ರಾಜಕಾರಣದಲ್ಲಿ ಬಹಳ ಸಕ್ರಿಯರಾಗಿದ್ದರು. ರಾಜ್ಯಸಭೆಯ ಉಪಸಭಾಪತಿ ಸ್ಥಾನಕ್ಕೆ ವಿಪಕ್ಷ ಅಭ್ಯರ್ಥಿಯೂ ಆಗಿದ್ದರು. ಸಂಸತ್ತಿನಲ್ಲಿ ತಮ್ಮ ಭಾಷಣಗಳ ಮೂಲಕವೂ ಅವರು ಗಮನ ಸೆಳೆದಿದ್ದರು.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ದೀರ್ಘಕಾಲ ಸೇವೆ ಸಲ್ಲಿಸಿದರು. ಗೋವಾ, ಹರಿಯಾಣ, ಒಡಿಶಾ ಸೇರಿದಂತೆ ದೇಶದ ಹಲವು ರಾಜ್ಯಗಳ ಕಾಂಗ್ರೆಸ್ ಉಸ್ತುವಾರಿಯಾಗಿ ಪಕ್ಷವನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಆಗ ಆ ರಾಜ್ಯಗಳ ಸಿಎಂಗಳು, ಸಚಿವರನ್ನು ಆಯ್ಕೆ ಮಾಡುವಷ್ಟು ಪ್ರಭಾವಶಾಲಿಯಾಗಿದ್ದ ಹರಿಪ್ರಸಾದ್ ಅವರು ಈಗ ತವರು ರಾಜ್ಯ ಕರ್ನಾಟಕದ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದಾರೆ. ದಿಲ್ಲಿಯಿಂದ ರಾಜ್ಯ ರಾಜಕಾರಣಕ್ಕೆ ಮರಳಿದ ಅವರು 2020, ಜುಲೈ 1ರಿಂದ ಕರ್ನಾಟಕ ವಿಧಾನ ಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಶಾಸಕತ್ವದ ಅವಧಿ 2026 ಜೂ.30ರ ತನಕ ಇದೆ. ಜನವರಿ 2022 ರಿಂದ ಮೇ 2023 ರವರೆಗೆ ಕರ್ನಾಟಕ ವಿಧಾನ ಪರಿಷತ್ತಿನ ವಿಪಕ್ಷ ನಾಯಕರಾಗಿ ಜವಾಬ್ದಾರಿ ನಿರ್ವಹಿಸಿದ್ದರು. ಈಗ ಈ ತಿಂಗಳು ನಡೆಯುವ ವಿಧಾನ ಪರಿಷತ್ ಚುನಾವಣೆಯಲ್ಲಿ ಅವರು ಪಕ್ಷದ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್; ಉದ್ಯೋಗ ಸಮಸ್ಯೆಗೆ ಪರಿಹಾರ

ಸವಾಲುಗಳು ಎದುರಾ ಗಿವೆ ಎಂದು ಅನುಭವಿಸಿದ್ದೇನೆ. ಅದೇ ರೀತಿ ದೊಡ್ಡ ಸವಾಲು ಎದುರಿಸಬೇಕಾಗಿದೆ. ರೈತರ ಸಮಸ್ಯೆ ಬಗೆಹರಿಸುವುದು ನಮ್ಮ ಆದ್ಯತೆಯಾಗಿದೆ. ಉದ್ಯೋಗ, ಶಿಕ್ಷಣಕ್ಕಾಗಿ ಹಳ್ಳಿಯಿಂದ ನಗರಕ್ಕೆ ವಲಸೆ ಹೋಗುವುದನ್ನು ತಪ್ಪಿಸಬೇಕಿದೆ. ಕೃಷಿ, ತೋಟಗಾರಿಕೆ, ಹೈನುಗಾರಿಕೆ ಬಗ್ಗೆ ಸಂಕುಚಿತ ಮನೋಭಾವ ನಿರ್ಮೂಲನೆ ಮಾಡಬೇಕಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್: ನಮ್ಮ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ತೀರ್ಮಾನಗಳಲ್ಲಿ ಮೊದಲನೆಯದು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಣೆ. ನಾನು ಬೇರೆ ಭಾಗಗಳಿಗೆ ಹೋದಾಗೆಲ್ಲಾ ಕೇವಲ ಹೆಣ್ಣುಮಕ್ಕಳಿಗೆ ಮಾತ್ರ ಬಸ್ ನಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಿದ್ದೀರಿ ನಮಗೆ ಇಲ್ಲ ಎಂದು ಬಾಲಕರು ಕೇಳುತ್ತಿದ್ದರು. ಹೀಗಾಗಿ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಣೆ ಮಾಡಲು ತೀರ್ಮಾನಿಸಿದ್ದೇವೆ. ಈ ಸೌಲಭ್ಯ ಪಡೆಯಲು ಅರ್ಜಿ ಹಾಕಬೇಕಿದೆ ಎಂದು ತಿಳಿಸಿದರು.

ಸರ್ಕಾರಿ ಹುದ್ದೆ ಭರ್ತಿ ಜೊತೆಗೆ ಖಾಸಗಿ ಉದ್ಯೋಗ ವಿನಿಮಯ ವ್ಯವಸ್ಥೆ: ಎರಡನೆಯದಾಗಿ ಉದ್ಯೋಗದ ಸಮಸ್ಯೆಗೆ ನಿವಾರಣೆ ನೀಡಲು, ನಮ್ಮ ಸರ್ಕಾರ 56 ಸಾವಿರ ಹುದ್ದೆಗಳ ನೇಮಕಕ್ಕೆ ಮುಂದಾಗಿದೆ. ಈ ನೇಮಕಾತಿ ವೇಳಾಪಟ್ಟಿ ಬಿಡುಗಡೆಯನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು. ಈ ಮಧ್ಯೆ ಈ ರಾಜ್ಯ ಮಾನವ ಸಂಪನ್ಮೂಲದಲ್ಲಿ ಶಕ್ತಿಶಾಲಿ ರಾಜ್ಯ. ಇಡೀ ದೇಶದಲ್ಲೇ ನಮ್ಮಲ್ಲಿರುವ ಮಾನವ ಸಂಪನ್ಮೂಲ ಬೇರೆ ಎಲ್ಲೂ ಇಲ್ಲ. ಇಲ್ಲಿ ಸರ್ಕಾರವೇ ಖಾಸಗಿ ಉದ್ಯೋಗಾಕಾಂಕ್ಷಿಗಳಿಗೆ ಅನುಕೂಲವಾಗಲು ಉದ್ಯೋಗ ವಿನಿಮಯ ಸೌಲಭ್ಯ ಕಲ್ಪಿಸಲಾಗುವುದು. ಖಾಸಗಿ ಸಂಸ್ಥೆಗೆ ಯಾವ ರೀತಿ ಉದ್ಯೋಗಿಗಳು ಬೇಕು ಅದಕ್ಕೆ ತಕ್ಕಂತೆ ಯುವಕ ರನ್ನು ತರಬೇತಿ ನೀಡಿ ನೇಮಕಾತಿ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು. ಇಲ್ಲಿ ಕನ್ನಡಿಗರಿಗೆ ಹೆಚ್ಚಿನ ಪಾಲು ನೀಡಲಾಗುವುದು. ಈ ಕುರಿತ ಶೇಕಡಾವಾರು ಪ್ರಮಾಣವನ್ನು ಎಲ್ಲರ ಜೊತೆ ಚರ್ಚೆ ಮಾಡಿ ತೀರ್ಮಾನ ಮಾಡಲಾಗುವುದು. ಇದಕ್ಕೆ ಒಂದು ತಿಂಗಳ ಕಾಲಾವಧಿಯಲ್ಲಿ ರೂಪುರೇಷೆ ಸಿದ್ಧಪಡಿಸಲು ಸಂಪುಟ ಸಹೋದ್ಯೋಗಿಗಳಿಗೆ ಸೂಚಿಸಲಾಗುವುದು ಎಂದು ವಿವರಿಸಿದರು.

10 ಸಾವಿರ ಯುವಕರ ಸಂಘ ಸ್ಥಾಪನೆ: ಮೂರನೆಯದು ನನ್ನ ಕನಸಿನ ಚಿಂತನೆಯಾಗಿದೆ. 10 ಸಾವಿರ ಭಾರತ ಜೋಡೋ ಯುವಕರ ಸಂಘ ರಚಿಸಲು ತೀರ್ಮಾನ ಮಾಡಲಾಗಿದೆ. ಪ್ರತಿ ಪಂಚಾಯ್ತಿಯಲ್ಲಿ ಯುವಕರ ಸಂಘ ರಚಿಸಬೇಕು. ಈ ಸಂಘದಲ್ಲಿ ಕನಿಷ್ಠ 150–200 ಯುವಕರಿರುತ್ತಾರೆ. ನಗರ ಪ್ರದೇಶಗಳಲ್ಲಿ ವಾರ್ಡ್ ಮಟ್ಟದಲ್ಲಿ ಸಂಘ ರೂಪಿಸಲಾಗುವುದು. ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮ, ನಾಯಕತ್ವ ಬೆಳೆಸಿಕೊಳ್ಳಲು, ಸಾಮಾಜಿಕ ಸಾಮರಸ್ಯಕ್ಕೆ, ಯುವಕರ ಪ್ರತಿಭೆ ಅವರಣಕ್ಕೆ ವೇದಿಕೆ ಕಲ್ಪಿಸಲಾಗುವುದು. ಈ ಸಂಘಕ್ಕೆ ಸರ್ಕಾರ 10 ಲಕ್ಷ ಅನುದಾನ ನೀಡಲಿದೆ. ಇದನ್ನು ಯಾವ ರೀತಿ ಬಳಸಿಕೊಳ್ಳಬೇಕು ಎಂದು ಮುಂದಿನ ದಿನಗಳಲ್ಲಿ ರೂಪುರೇಷೆ ತೀರ್ಮಾನಿಸಲಾಗುವುದು ಎಂದು ಹೇಳಿದರು.

ಒಸಿ ಸಿಸಿ ಸಮಸ್ಯೆಗೆ ಪರಿಹಾರ: ನಾಲ್ಕನೆಯದಾಗಿ ಇನ್ನು ನಮ್ಮನ್ನು ಕಾಡುತ್ತಿರುವ ದೊಡ್ಡ ಸಮಸ್ಯೆ ಮನೆ ಕಟ್ಟುವ ವರಿಗೆ ಒಸಿ ಹಾಗೂ ಸಿಸಿ ನೀಡುವ ವಿಚಾರ. ಈ ಸಮಸ್ಯೆ ಬಗೆಹರಿಸಲು ಚರ್ಚೆ ಮಾಡಿ 2500 ಅಡಿವರೆಗೂ 20% ಹೆಚ್ಚುಕಮ್ಮಿ ಇದ್ದರೂ ಒನ್ ಟೈಮ್ ಕಳೆದ ತಿಂಗಳು 31ರವರೆಗೂ ಅರ್ಜಿ ಹಾಕಿ ಮನೆ ಕಟ್ಟಿರುವವರಿಗೆ ಅವಕಾಶ ನೀಡಲು ತೀರ್ಮಾನಿಸಿದ್ದೇವೆ. ಮನೆಕಟ್ಟುವವರಿಗೆ ನೀರು ನೀಡುವುದು ನಮ್ಮ ಕರ್ತವ್ಯ ಎಂದು ತಿಳಿಸಿದರು.

ರಾಜ್ಯದೆಲ್ಲೆಡೆ ಬಿ ಖಾತಾಯಿಂದ ಎ ಖಾತಾ ಪರಿವರ್ತನೆ: ಐದನೆಯದಾಗಿ ಬಿ ಖಾತಾಯಿಂದ ಎ ಖಾತಾ ಪರಿವರ್ತನೆಯನ್ನು ಬೆಂಗಳೂರು ಮಾತ್ರವಲ್ಲದೇ, ಇಡೀ ರಾಜ್ಯಕ್ಕೆ ವಿಸ್ತರಿಸಲು ತೀರ್ಮಾನಿಸಲಾಗಿದೆ. ನಮ್ಮ ಸರ್ಕಾರದ ಆರನೇ ಗ್ಯಾರಂಟಿ ಭೂ ಗ್ಯಾರಂಟಿ ಆಗಿದೆ. ಜನರ ಆಸ್ತಿಗೆ ಸರಿಯಾದ ದಾಖಲೆ ಮಾಡಿಕೊಡಲು ಮುಂದಾಗಿದ್ದೇವೆ ಎಂದು ತಿಳಿಸಿದರು.

ಬೆಂಗಳೂರು ನಗರದ ರಸ್ತೆಗಳ ಡಾಂಬರೀಕರಣ: ಆರನೇ ತೀರ್ಮಾನ ಬೆಂಗಳೂರಿಗೆ ಸಂಬಂಧಿಸಿದ್ದು, ಬೆಂಗಳೂರಿನ ನಗರಗಳ ರಸ್ತೆಗಳಲ್ಲಿ ಹಾಲಿ ಯೋಜನೆಗಳನ್ನು ಹೊರತುಪಡಿಸಿ ಎಲ್ಲಾ ರಸ್ತೆಗಳ ಡಾಂಬರೀಕರಣಕ್ಕೆ 2 ಸಾವಿರ ಕೋಟಿ ಅನುದಾನ ನೀಡಲು ತೀರ್ಮಾನಿಸಲಾಗಿದೆ. 3–4 ತಿಂಗಳಲ್ಲಿ ಡಾಂಬರೀಕರಣ ಮಾಡಲು ತೀರ್ಮಾನಿಸಿದ್ದೇವೆ. ಉಳಿದ ವಿಚಾರಗಳನ್ನು ಬೇರೆ ದಿನಗಳಲ್ಲಿ ಚರ್ಚೆ ಮಾಡುತ್ತೇವೆ ಎಂದು ಹೇಳಿದರು.

ಪ್ರಶ್ನೋತ್ತರ: ಉಚಿತ ಬಸ್ ಪಾಸ್‌ಗೆ ಎಷ್ಟು ವೆಚ್ಚವಾಗಲಿದೆ ಎಂದಾಗ, 'ವಿದ್ಯಾರ್ಥಿಗಳು ನಮ್ಮ ಮಕ್ಕಳು. ಅವರಿಗೆ ಉಚಿತ ಪ್ರಯಾಣಕ್ಕೆ ಎಷ್ಟು ಸಾವಿರ ಕೋಟಿ ಆದರೂ ನೀಡುತ್ತೇವೆ' ಎಂದರು. ಇನ್ನು ಯುವ ಸಂಘಗಳ ಅನುದಾನಕ್ಕೆ 1 ಸಾವಿರ ಕೋಟಿ ಆಗುತ್ತದೆ ಇದನ್ನು ಹೇಗೆ ನೀಡುತ್ತೀರಿ ಎಂದು ಕೇಳಿದಾಗ, 'ಇದು ಡಿ.ಕೆ. ಶಿವಕುಮಾರ್ ಅವರ ಸರ್ಕಾರ ಎಂದು ತಿಳಿಸಿದರು.

ಲವ್ ಯೂ ಅಪ್ಪಾ...

ದಿನಗಳಲ್ಲಿ ನಮ್ಮ ಅಪ್ಪ ಏನು ಮಾಡುತ್ತಾರೋ, ಏನೆಲ್ಲಾ ಬದಲಾವಣೆ ತರುತ್ತಾರೋ ಎಂದು ನಾವೆಲ್ಲಾ ಕುತೂಹಲದಿಂದ ಕಾಯುತ್ತಿದ್ದೇವೆ ಎಂದು ಅವರು ಹೇಳಿದ್ದಾರೆ. ನಮ್ಮ ಅಪ್ಪ ಯಾವಾಗಲೂ ಒಂದು ಮಾತು ಹೇಳುತ್ತಿರುತ್ತಾರೆ, ಮಗಳೇ ದೇವರು ವರನೂ ಕೊಡಲ್ಲ, ಶಾಪನೂ ಕೊಡಲ್ಲ. ಅವಕಾಶಗಳನ್ನು ಮಾತ್ರ ಕೊಡ್ತಾನೆ. ನಮ್ಮ ಅಪ್ಪ ದೊಡ್ಡ ಮಹತ್ವಾಕಾಂಕ್ಷೆಯ, ಧ್ಯೇಯ ಹೊಂದಿರುವ ವ್ಯಕ್ತಿ. ಜನಗಳಿಗಾಗಿ ಏನು ಮಾಡಬೇಕು ಎಂಬುದು ಅವರಿಗೆ ಗೊತ್ತು. ಅವರ ಮುಂದಿನ ಹಾದಿ ಸುಗಮವಾಗಿರಲಿ. ಲವ್ ಯು ಅಪ್ಪ ಎಂದು ಅವರು ಹೇಳಿದ್ದರು.

ಎಲ್.ಕೆ ಅತೀಕ್ ನೇಮಕ!

ಸಿಎಂ ಡಿಕೆ ಶಿವಕುಮಾರ್ ಅವರ ಆರ್ಥಿಕ ಸಲಹೆಗಾರರನ್ನಾಗಿ ನೇಮಕ ಮಾಡಲಾಗಿದೆ. ಮೂಲತಃ ತುಮಕೂರು ಜಿಲ್ಲೆಯ ಪಾವಗಡದವರಾದ ಅತೀಕ್ ಎಲ್.ಕೆ. ಅವರು ಕರ್ನಾಟಕ ಕೇಡರ್‌ನ 1991ನೇ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿದ್ದರು. ಅವರು ರಾಜ್ಯ, ಕೇಂದ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಲವು ಮಹತ್ವದ ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಅಲ್ಲದೇ ಅವರು ಪ್ರಧಾನ ಮಂತ್ರಿಗಳ ಕಚೇರಿಯಲ್ಲಿ ನಿರ್ದೇಶಕರಾಗಿ ಮತ್ತು ವಾಷಿಂಗ್ಟನ್ ಡಿಸಿಯಲ್ಲಿರುವ ವಿಶ್ವ ಬ್ಯಾಂಕ್ ಗ್ರೂಪ್‌ನಲ್ಲಿ ಭಾರತದ ಪ್ರತಿನಿಧಿಯಾಗಿ ಅತೀಕ್ ಅವರು ಕೆಲಸ ಮಾಡಿದ್ದಾರೆ.

ಅವರು ಕೊಟ್ಟ ಅಧಿಕಾರವನ್ನ ಸೇವೆಗೆ ಮುಡಿಪಾಗಿಡ್ತೇನೆ...!

ಎಂದು ತಿಳಿಸಿದರು. ಎಲ್ಲಾ ಗೊಂದಲಗಳಿಗೆ ಹೈಕಮಾಂಡ್ ನಾಯಕರು ತೆರೆ ಎಳೆದಿದ್ದಾರೆ. ಮಾಧ್ಯಮಗಳು ಇಷ್ಟು ದಿನ ಅಧಿಕಾರ ಹಸ್ತಾಂತರ, ನಾಯಕತ್ವ ಬದಲಾವಣೆ ವಿಚಾರವಾಗಿ ಅನೇಕ ಸುದ್ದಿ, ಹೇಳಿಕೆಗಳನ್ನು ಪ್ರಸಾರ ಮಾಡುತ್ತಿದ್ದವು. ಮಲಗಿದ್ದವರನ್ನು ಎಬ್ಬಿಸಿ, ಎದ್ದಿದ್ದವರನ್ನು ಮಲಗಿಸುತ್ತಿದ್ದರು. ನಮ್ಮ ಪಕ್ಷದ ವರಿಷ್ಠರು ಇದಕ್ಕೆಲ್ಲ ಈಗ ತೆರೆ ಎಳೆದಿದ್ದಾರೆ. ಶುಭ ಗಳಿಗೆ, ಶುಭ ಮುಹೂರ್ತ ಬರುತ್ತದೆ. ಸ್ವಲ್ಪ ತಾಳ್ಮೆಯಿಂದ ಕಾಯಿರಿ ಎಂದು ಹೇಳುತ್ತಲೇ ಇದ್ದೆ. ಇಂದು ಸಂಜೆ 4.15ಕ್ಕೆ ಶುಭ ಘಳಿಗೆ, ಶುಭ ಮುಹೂರ್ತಕ್ಕೆ ಮಾಧ್ಯಮಗಳು ಹಾಗೂ ರಾಜ್ಯದ ಜನತೆ ಸಾಕ್ಷಿಯಾಗಿದ್ದಾರೆ ಎಂದು ತಿಳಿಸಿದರು.

ಟೀಕೆಗಳು ಸಾಯುತ್ತವೆ ಕೆಲಸಗಳು ಉಳಿಯುತ್ತವೆ: ರಾಜ್ಯದ ಜನತೆಗೆ ನನ್ನ ಮೇಲೆ ಅಪಾರ ವಿಶ್ವಾಸ ಇದೆ. ಹಿಂದೆ ಅನೇಕ ಟೀಕೆ, ಹೊಗಳಿಕೆ ವ್ಯಕ್ತವಾಗಿರಬಹುದು. ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ ಎಂದು ನಾನು ಹೇಳಿದ್ದೆ. ರಾಜ್ಯದ ಆಡಳಿತದಲ್ಲಿ ಹೊಸ ಬೆಳಕು ಮೂಡಿಸಲು ನನ್ನ 40 ವರ್ಷಗಳ ರಾಜಕೀಯ ಅನುಭವದಲ್ಲಿ ಪ್ರಯತ್ನ ಮಾಡುತ್ತೇನೆ. 1985ರಿಂದ ಇಲ್ಲಿಯವರೆಗೂ ಕಷ್ಟ ನೋಡಿದ್ದೇನೆ, ಸುಖ ನೋಡಿದ್ದೇನೆ. ಚಿಕ್ಕ ವಯಸ್ಸಿನಲ್ಲೇ ಅಧಿಕಾರ ನೋಡಿದ್ದೇನೆ. ಅನೇಕ ರಾಜಕೀಯ ತಂತ್ರಗಳ ಬಲೆಗೆ ಬಿದ್ದಿದ್ದೇನೆ. ತಿಹಾರ್ ಜೈಲಿಗೆ ಹೋಗುವ ಪರಿಸ್ಥಿತಿ ಬಂತು. ನಾನು ಎಂದಿಗೂ ಎದೆಗುಂದಲಿಲ್ಲ. ನಾನು ಭರವಸೆಗಳ ಮೇಲೆ ಬದುಕಿದೆ. ಇದೇ ವಿಶ್ವಾಸ ಮತ್ತೆ ರಾಜ್ಯದ ಜನರ ಸೇವೆ ಮಾಡಿ, ಸಾಕ್ಷಿಗುಡ್ಡೆ ಬಿಟ್ಟು ಹೋಗಲು ಅವಕಾಶ ಸಿಕ್ಕಿದೆ ಎಂದು ತಿಳಿಸಿದರು.

ಸಿದ್ದರಾಮಯ್ಯ ಅವರು ಕೊಟ್ಟ ಮಾತಿನಂತೆ ನಡೆದಿದ್ದಾರೆ: ಕಾಂಗ್ರೆಸ್ ಕಾರ್ಯಕರ್ತರು, ಜನರು ಬಹಳ ನಂಬಿಕೆಯಿಂದ ಕೊಟ್ಟಿರುವ ಅವಕಾಶ. ಮಲ್ಲಿಕಾರ್ಜುನ ಖರ್ಗೆ ಅವರ ನಾಯಕತ್ವದಲ್ಲಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರು ಈ ತೀರ್ಮಾನ ಮಾಡಿದ್ದಾರೆ. ಇದು ಸ್ವಲ್ಪ ತಡವಾಗಿದೆ. ಆದರೂ ನಮ್ಮ ನಾಯಕರಾದ ಸಿದ್ದರಾಮಯ್ಯ ಅವರು ಕೊಟ್ಟ ಮಾತಿನಂತೆ ನಡೆದಿದ್ದಾರೆ. ಪಕ್ಷದ ಹೈಕಮಾಂಡ್ ತೀರ್ಮಾನಕ್ಕೆ ಬದ್ಧರಿರುವುದಾಗಿ ಅವರು ಹೇಳುತ್ತಲೇ ಇದ್ದರು. ನಮ್ಮ ವರಿಷ್ಠರು ನಮ್ಮಿಬ್ಬರನ್ನು ಕರೆಸಿ ಈ ತೀರ್ಮಾನ ಮಾಡಿದಾಗ, ಸಿದ್ದರಾಮಯ್ಯ ಅವರು ಬಹಳ ಸಂತೋಷದಿಂದ ನನಗೆ ಜಾಗ ಮಾಡಿಕೊಟ್ಟಿದ್ದಾರೆ. ನಮ್ಮ ಪಕ್ಷದ ಎಲ್ಲಾ ನಾಯಕರು ಒಗ್ಗಟ್ಟಿನಿಂದ ಬೆಂಬಲ ನೀಡಿ ಜವಾಬ್ದಾರಿ ನೀಡಿದ್ದಾರೆ.

ಮಾನವ ಧರ್ಮದ ಮೇಲೆ ನಂಬಿಕೆ ಇಟ್ಟುಕೊಂಡಿದ್ದೇನೆ: ಗ್ರಾಮೀಣ ಭಾಗದ ರೈತರ ಪರಿಸ್ಥಿತಿ ಹಾಗೂ ನಗರ ಪ್ರದೇಶ ಜನರ ಸಮಸ್ಯೆ ನಾನು ಅರಿತಿದ್ದೇನೆ. 42% ಜನ ನಗರದಲ್ಲಿದ್ದಾರೆ. ಜನ ಉದ್ಯೋಗಕ್ಕಾಗಿ ನಗರಗಳತ್ತ ವಲಸೆ ಬರುತ್ತಿದ್ದಾರೆ. ಬೀದಿ ವ್ಯಾಪಾರ ಮಾಡಿಕೊಂಡಾದರೂ ಒಳ್ಳೆಯ ಬದುಕು, ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಲು ವ್ಯವಸಾಯ ತೊರೆದು ನಗರಗಳತ್ತ ಬರುತ್ತಿದ್ದಾರೆ. ಈ ಸರ್ಕಾರದ ಪ್ರತಿ ತೀರ್ಮಾನ ಕೇವಲ ಶಿವಕುಮಾರ್ ತೀರ್ಮಾನ ಮಾತ್ರವಲ್ಲ. ಸಾಮೂಹಿಕ ತೀರ್ಮಾನವಾಗಿರುತ್ತದೆ. ನನಗೆ ಜಾತಿ ಮೇಲೆ, ಧರ್ಮದ ಮೇಲೆ ನಂಬಿಕೆ ಇಲ್ಲ. ನನಗೆ ನಮ್ಮದೇ ಆದ ನಂಬಿಕೆ ಇರಬಹುದು. ಆದರೆ ಮಾನವ ಧರ್ಮದ ಮೇಲೆ ನಂಬಿಕೆ ಇಟ್ಟುಕೊಂಡಿರುವವನು ಎಂದು ತಿಳಿಸಿದರು.

ನಾನು 7ನೇ ತರಗತಿಯಲ್ಲಿ ಶಾಲಾ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದೆ. ನಾನು ಪ್ರಜಾಸತಾತ್ಮಕ ವ್ಯವಸ್ಥೆ ಮೇಲೆ ನಂಬಿಕೆ ಇಟ್ಟಿದ್ದೇನೆ. ಈ ನಾಡು ಸರ್ವಜನಾಂಗದ ಶಾಂತಿಯ ತೋಟ ಎಂಬುದನ್ನು ನಮ್ಮ ಸಚಿವ ಸಂಪುಟ ಪ್ರತಿಬಿಂಬಿಸುತ್ತಿದೆ. ಮಾಧ್ಯಮಗಳು ಟೀಕೆ ಮಾಡಲಿ, ನಮ್ಮ ಸರ್ಕಾರದ ತಪ್ಪನ್ನು ತಿದ್ದಿ. ಆದರೆ ಇಲ್ಲಸಲ್ಲದ ರಾಜಕೀಯ ಸುದ್ದಿಗಳನ್ನು ಮಾಡಬೇಡಿ. ನೀವು ನನ್ನನ್ನು ಟೀಕೆ ಮಾಡಿದಾಗ ನಾನು ಪ್ರಶ್ನೆ ಮಾಡಿಲ್ಲ. ನಿಮ್ಮ ಕ್ಯಾಮೆರಾ ಕಣ್ಣಲ್ಲಿ ತೋರಿಸುವುದನ್ನು ಜನ ನೋಡುತ್ತಾರೆ. ನಿಮ್ಮ ಆತ್ಮಸಾಕ್ಷಿಗೆ ತಕ್ಕಂತೆ ನೀವು ವರದಿ ಮಾಡಿ ಎಂದರು.

ವಿಶ್ವ ಸೈಕಲ್ ದಿನಾಚರಣೆ

ಸೈಕಲ್ ಸವಾರಿಯ ವಿಶೇಷ ಅನುಭವ



ವಿಶ್ವ ಸೈಕಲ್ ದಿನದ ಅಂಗವಾಗಿ ಮೈಸೂರಲ್ಲಿ ಆಯೋಜಿಸಿದ್ದ ಸೈಕಲ್ ರ‍್ಯಾಲಿಗೆ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಉಪ ನಿರ್ದೇಶಕ ಮಂಜುನಾಥ್ ಚಾಲನೆ ನೀಡಿದರು.

ಮೈಸೂರು, ಜೂ.3(ಎಂಟಿವೈ)– ವಿಶ್ವ ಸೈಕಲ್ ದಿನದ ಅಂಗವಾಗಿ ಮೈಸೂರಲ್ಲಿ ಬುಧವಾರ ಆಯೋಜಿಸಿದ್ದ ಸೈಕಲ್ ಜಾಥದಲ್ಲಿ ಹಲವು ಮಂದಿ ಸೈಕಲ್ ಸವಾರಿ ಮಾಡುವ ಮೂಲಕ ಗಮನ ಸೆಳೆದರು.

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ಮೈ ಭಾರತ್ ಕೇಂದ್ರ, ಮೈಸೂರು ಅಥ್ಲೆಟ್ಸ್ ಕ್ಲಬ್, ರಾಯಲ್ ರೈಡರ್ಸ್, ಸೈಕ್ಲೋಪೀಡಿಯಾ ಹಾಗೂ ಮೈಸೂರು ಸೈಕ್ಲಿಂಗ್ ಟೀಮ್ ವತಿಯಿಂದ ಆಯೋಜಿಸಿದ್ದ 'ಸೈಕಲ್ ರ‍್ಯಾಲಿ'ಗೆ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಉಪ ನಿರ್ದೇಶಕ ಮಂಜುನಾಥ್ ಚಾಲನೆ ನೀಡಿದರು. ಬಳಿಕ ಬಿ. ಮಂಜುನಾಥ್ ಮಾತನಾಡಿ, ದೈನಂದಿನ ಜೀವನದಲ್ಲಿ ಆರೋಗ್ಯ ಕಾಪಾಡಿಕೊಳ್ಳಲು ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅರಮನೆ ಭದ್ರತಾ ವಿಭಾಗದ ಎಸಿಪಿ ಚಂದ್ರಶೇಖರ್ ಮಾತನಾಡಿ, ಪ್ರತಿದಿನ ಸೈಕ್ಲಿಂಗ್ ಮಾಡುವ ಹವ್ಯಾಸ ರೂಢಿಸಿಕೊಳ್ಳುವುದರಿಂದ ಆರೋಗ್ಯ ಕಾಪಾಡಿಕೊಳ್ಳುವುದರೊಂದಿಗೆ ಪರಿಸರ ಸಂರಕ್ಷಣೆಗೆ ಕೊಡುಗೆ ನೀಡಬೇಕು. ಸೈಕಲ್ ತುಳಿಯುವುದರಿಂದ ಪರಿಸರ ಮಾಲಿನ್ಯ ಪ್ರಮಾಣ ತಡೆಗಟ್ಟಲು ಸಾಧ್ಯವಾಗುತ್ತದೆ. ಸೈಕಲ್ ಬಳಸುವ ಮೂಲಕ ಸಾಮಾಜಿಕ ಜವಾಬ್ದಾರಿಯನ್ನು ಉತ್ತೇಜಿಸಲು ಪ್ರಯತ್ನಿಸುವುದಕ್ಕೆ ಸೈಕಲ್ ರ‍್ಯಾಲಿ ಆಯೋಜಿಸಿರುವುದು ಶ್ಲಾಘನೀಯ. ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಇಂತಹ ಕಾರ್ಯಕ್ರಮಗಳು ಹೆಚ್ಚಾಗಿ ನಡೆಸಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಉಪ ಆಯುಕ್ತ ರಮೇಶ್ ನರಸಯ್ಯ, ಪರಿಸರ ಸಂರಕ್ಷಣೆಯಲ್ಲಿ ಸೈಕ್ಲಿಂಗ್‌ನ ಮಹತ್ವ, ಬಾಲ್ಯ ಫೌಂಡೇಶನ್ ಅಧ್ಯಕ್ಷ ಅನಿಲ್ ಅವರು ಯುವಜನರಲ್ಲಿ ಆರೋಗ್ಯ ಹಾಗೂ ಪರಿಸರ ಜಾಗೃತಿ ಮೂಡಿಸಿದರು.

ಬಳಿಕ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗ ಆರಂಭವಾದ ಸೈಕಲ್ ರ‍್ಯಾಲಿ ಹಾರ್ಡಿಂಜ್ ವೃತ್ತ, ಬಿಎನ್ ರಸ್ತೆ, ಗನ್ ಹೌಸ್ ಸರ್ಕಲ್, ಬಸವೇಶ್ವರ ವೃತ್ತ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ಸರ್ಕಲ್, ಅಗ್ನಿಶಾಮಕ ಠಾಣಾ ವೃತ್ತ, ಕುಕ್ಕರಹಳ್ಳಿ, ಗದ್ದಿಗೆ ರಸ್ತೆ, ಯೂತ್ ಹಾಸ್ಟೆಲ್ ಮಾರ್ಗವಾಗಿ ಸಂಚರಿಸಿತು. 50ಕ್ಕೂ ಹೆಚ್ಚು ಸೈಕ್ಲಿಸ್ಟ್‌ಗಳು ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಮೈ ಭಾರತ್ ಮೈಸೂರು ಜಿಲ್ಲಾ ಯುವ ಅಧಿಕಾರಿ ಅಖಿಲ್ ಪಿ. ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಯಾದವಗಿರಿಯಲ್ಲಿ 2 ಸಾವಿರಕ್ಕೂ ಹೆಚ್ಚು ಸಸಿ ನೆಟ್ಟು ಪೋಷಿಸಲು ನಿರ್ಧಾರ

ಮೈಸೂರು,ಜೂ.3(ಪಿಎಂ)– ಮೈಸೂರಿನ ಯಾದವಗಿರಿಯಲ್ಲಿ 2 ಸಾವಿರಕ್ಕೂ ಹೆಚ್ಚು ಸಸಿಗಳನ್ನು ನೆಟ್ಟು ಪೋಷಿಸುವ ತೀರ್ಮಾನವನ್ನು ಇಲ್ಲಿನ ನಿವಾಸಿಗಳೇ ಕೈಗೊಂಡಿದ್ದಾರೆ.

ಇಲ್ಲಿನ ಪಾರ್ಕ್‌ವೊಂದರಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಯಾದವಗಿರಿ ನಿವಾಸಿಗಳ ಪ್ರದೇಶ ಸಭೆಯಲ್ಲಿ ಇದೂ ಸೇರಿದಂತೆ ಹಲವು ಯೋಜನೆಗಳನ್ನು ಹಾಕಿಕೊಳ್ಳಲಾಯಿತು. ಎಂಜಿಪಿ (ಮೈಸೂರು ಗ್ರಾಹಕರ ಪರಿಷತ್) ಕಾರ್ಯಾಧ್ಯಕ್ಷ ಎಸ್.ಕೆ.ದಿನೇಶ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 80ಕ್ಕೂ ಹೆಚ್ಚು ನಿವಾಸಿಗಳು ಭಾಗವಹಿಸಿದ್ದರು.

ಯಾದವಗಿರಿಯನ್ನು ಇನ್ನಷ್ಟು ಹಸಿರುಗೊಳಿಸಲು 2 ಸಾವಿರಕ್ಕೂ ಹೆಚ್ಚು ಸಸಿಗಳನ್ನು ಖಾಲಿ ಜಾಗಗಳಲ್ಲಿ ಹಾಗೂ ಮನೆಗಳ ಮುಂದೆ ನೆಡಬೇಕೆಂಬ ಪ್ರಸ್ತಾಪಕ್ಕೆ ನಿವಾಸಿಗಳು ಸಮ್ಮತಿಸಿದರು. ಈ ಹಿನ್ನೆಲೆಯಲ್ಲಿ ಸಂಜಯ್ ದತ್ತಾತ್ರಿ ಅವರನ್ನು ಸಸಿ ನೆಡುವ ಕಾರ್ಯಕ್ರಮದ ಸಮಿತಿಯ ಸಂಯೋಜಕರಾಗಿ ನೇಮಿಸಲಾಯಿತು. ಅವರಿಗೆ ಅಜಿತ್ ಮತ್ತು ತಮ್ಮಣ್ಣ ಅವರ ಸಹಕಾರಿಯಾಗಿ ಕಾರ್ಯನಿರ್ವಹಿಸಲು ಸಭೆ ಅನುಮೋದಿಸಿತು.

ಅಲ್ಲದೆ, ಮನೆಗಳ ಮುಂದಿರುವ ಅರಳಿ ಮರಗಳ ನಿರ್ವಹಣೆ ಬಗ್ಗೆ ಚರ್ಚಿಸಲಾಯಿತು. ದೊಡ್ಡ ಮರಗಳ ಬೇರುಗಳನ್ನು ಕಟ್ಟಡಗಳಿಗೆ ಹಾನಿ ಆಗದಂತೆ ಎಚ್ಚರಿಕೆಯಿಂದ ಕತ್ತರಿಸುವುದು ಸೂಕ್ತವೆಂಬ ಸಲಹೆ ವ್ಯಕ್ತವಾಯಿತು.



ಮೈಸೂರಿನ ಯಾದವಗಿರಿ ಪಾರ್ಕ್‌ನಲ್ಲಿ ಭಾನುವಾರ ನಿವಾಸಿಗಳ ಪ್ರದೇಶ ಸಭೆ ನಡೆಯಿತು.

ಸಭೆಯಲ್ಲಿ ಮೈಸೂರು ಮಹಾನಗರ ಪಾಲಿಕೆಯ ಆರೋಗ್ಯಾಧಿಕಾರಿ ಹರೀಶ್ ದೇವರಾಜ್ ಭಾಗವಹಿಸಿ ಹಲವು ಸಲಹೆಗಳನ್ನು ನೀಡಿದರು. ಅಲ್ಲದೆ, ಯಾದವಗಿರಿಯನ್ನು ಇನ್ನಷ್ಟು ಸ್ವಚ್ಛವಾಗಿಡಲು ನಿವಾಸಿಗಳ ಸಹಕಾರ ಕೋರಿದರು. ದಂಡ ವಿಧಿಸಿದ ನಂತರ ರಸ್ತೆ ಮೇಲೆ ಕಸ ಹಾಕುವುದು ನಿಯಂತ್ರಣಕ್ಕೆ ಬಂದಿದೆ ಎಂದು ಅವರು ತಿಳಿಸಿದರು.

ಆನಂದ್ ವಿಹಾರ್ ಬಳಿ ನಿರಂತರವಾಗಿ ಕಸ ಹಾಕುತ್ತಿರುವ ಬಗ್ಗೆ ನಿವಾಸಿಗಳು ಅವರ ಗಮನಕ್ಕೆ ತಂದಾಗ, ಸೂಕ್ತ ಕ್ರಮ ಜರುಗಿಸುವುದಾಗಿ ಅವರು ಹೇಳಿದರು. ಥರ್ಮೋಕಪಲ್‌ನಂತಹ ವಸ್ತುಗಳನ್ನು ಪ್ರತ್ಯೇಕವಾಗಿ ನೀಡುವ ಮೂಲಕ ಬೆಂಕಿ ಅನಾಹುತ ತಪ್ಪಿಸಲು ಸಹಕಾರ ನೀಡುವಂತೆ ಅವರು ಕೋರಿದರು. ಉದ್ಯಾನವನದ ಕಸವನ್ನು ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ, ಹಳೆಯ ಸೋಫಾ, ಹಾಸಿಗೆ, ಶೌಚಾಲಯದ ವಸ್ತುಗಳನ್ನು ಪಾದಚಾರಿ ಮಾರ್ಗದಲ್ಲಿ ಹಾಕುವ ಸಂಬಂಧ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಯಾದವಗಿರಿಯ ಸಹಾಯಕ ಆಯುಕ್ತರು ಸಭೆಗೆ ಹಾಜರಾಗದಿರುವ ಬಗ್ಗೆ ನಿವಾಸಿಗಳು ಆಕ್ಷೇಪ ವ್ಯಕ್ತಪಡಿಸಿದರು. ಸಾರ್ವಜನಿಕ ಸ್ಥಳಗಳಲ್ಲಿ ಜೋರಾಗಿ ಸಂಗೀತ ಹಾಕುವುದು, ಪಟಾಕಿ ಸಿಡಿಸಿ ಶಬ್ಧ ಮಾಲಿನ್ಯ ಉಂಟು ಮಾಡುವುದು ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವಂತೆ ಪೊಲೀಸ್ ಅಧಿಕಾರಿಗಳಿಗೆ ದೂರು ನೀಡಲು ನಿರ್ಧರಿಸಲಾಯಿತು. ಒಳಚರಂಡಿಯಿಂದ ಕೊಳಚೆ ನೀರು ಮಳೆ ಸಂದರ್ಭದಲ್ಲಿ ಉಕ್ಕಿ ಹರಿಯುವ ಸಮಸ್ಯೆ ಪರಿಹಾರಕ್ಕಾಗಿ ವಾಣಿವಿಲಾಸ ನೀರು ಸರಬರಾಜು ಕಾರ್ಯಾಗಾರದ ಇಂಜಿನಿಯರ್‌ಗಳಿಗೆ ದೂರು ಸಲ್ಲಿಸಲು ತೀರ್ಮಾನಿಸಲಾಯಿತು.

ಮುಂದಿನ ಸಭೆಗಳಲ್ಲಿ ಹೆಚ್ಚಿನ ನಿವಾಸಿಗಳ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಆಗಸ್ಟ್ 15ರಂದು ಭೋಜನ ಕಾರ್ಯಕ್ರಮ ಹಾಗೂ ನಿವಾಸಿ ಕಲಾವಿದರಿಂದ ಗಾಯನ ಕಾರ್ಯಕ್ರಮವನ್ನು ಆಯೋಜಿಸಲು ತೀರ್ಮಾನಿಸಲಾಯಿತು. ಡಾ.ರಾಜೇಶ್ವರ್ ಭೋಜನ ಸಮಿತಿಯನ್ನು ಮುನ್ನಡೆಸಲು ಒಪ್ಪಿಕೊಂಡರು.

ಇದೇ ವೇಳೆ ಸಂಜಯ್ ದತ್ತಾತ್ರಿಯವರು 'ಪರಿಸರ ಹಬ್ಬ ಮೈಸೂರು' ಕುರಿತು ವಿವರಿಸಿದರು. ಪರಿಸರ, ಜೀವ ವೈವಿಧ್ಯತೆ ಹಾಗೂ ನಾಗರಿಕರ ಭಾಗವಹಿಸುವಿಕೆಯನ್ನು ಆಚರಿಸುವ ಈ ನಗರ ಮಟ್ಟದ ಚಳವಳಿಯಲ್ಲಿ ಯಾದವಗಿರಿ ನಿವಾಸಿಗಳು ಜಾಗೃತಿ ಮೂಡಿಸಲು ಹಾಗೂ ತಮ್ಮ ಪ್ರದೇಶದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲು ಸ್ವಯಂ ಪ್ರೇರಿತರಾಗಿ ಮುಂದಾಗಬೇಕೆಂದು ಕೋರಿದರು. ಎಂಜಿಪಿ ಸ್ಥಾಪಕ ಸದಸ್ಯ ಡಾ.ಭಾಮಿ ವಿ.ಶೆಣೈ ಸೇರಿದಂತೆ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ದೆಹಲಿಯ ರೆಸ್ಟೋರೆಂಟ್‌ನಲ್ಲಿ ಭಾರೀ ಅಗ್ನಿ ಅನಾಹುತ

ವಿದೇಶಿಗರೂ ಸೇರಿ 21 ಮಂದಿ ಸಾವು!



ನವದೆಹಲಿ, ಜೂ.3– ದಕ್ಷಿಣ ದೆಹಲಿಯ ಮಾಲ್ವಿಯಾ ನಗರದ ರೆಸ್ಟೋರೆಂಟ್‌ವೊಂದರಲ್ಲಿ ಭಾರೀ ಅಗ್ನಿ ಅವಘಡ ಸಂಭವಿಸಿದ್ದು, 21 ಮಂದಿ ಸಾವನ್ನಪ್ಪಿದ್ದಾರೆ. ಸಾವಿಗೀಡಾದವರಲ್ಲಿ ಹೆಚ್ಚಿನವರು ವಿದೇಶಿ ಪ್ರಜೆಗಳು ಎಂದು ದೆಹಲಿ ಪೊಲೀಸರು ಮಾಹಿತಿ ನೀಡಿದ್ದಾರೆ.

ದೆಹಲಿ ದಕ್ಷಿಣ ವಿಭಾಗದ ಡಿಸಿಪಿ ಅನಂತ್ ಮಿತ್ತಲ್ ಅವರು ಪ್ರತಿಕ್ರಿಯಿಸಿ, ಬೆಳಿಗ್ಗೆ 8:48ಕ್ಕೆ ಮಾಲ್ವಿಯಾ ನಗರದ ಫ್ಲೋರಿಶ್ ಸ್ಟೇ ಬಿ&ಬಿಯಲ್ಲಿ ಬೆಂಕಿ ಕಾಣಿಸಿಕೊಂಡ ಬಗ್ಗೆ ನಮಗೆ ಮಾಹಿತಿ ಬಂತು. ಸ್ಥಳೀಯ ಪೊಲೀಸರು ತಕ್ಷಣವೇ ಸ್ಥಳ ತಲುಪಿ ರಕ್ಷಣಾ, ಸ್ಥಳಾಂತರ ಪ್ರಕ್ರಿಯೆ ಮತ್ತು ಪರಿಹಾರ ಕಾರ್ಯಾಚರಣೆ ಶುರು ಮಾಡಿದರು. 8 ಅಗ್ನಿಶಾಮಕ ದಳದವರ ಸಹಾಯದಿಂದ ಬೆಂಕಿಯನ್ನು ಯಶಸ್ವಿಯಾಗಿ ನಂದಿಸಲಾಯಿತು. ಪೊಲೀಸರು, ಅಗ್ನಿಶಾಮಕ ಸೇವೆಗಳು ಮತ್ತು ಇತರ ತುರ್ತು ಪ್ರತಿಕ್ರಿಯೆ ತಂಡಗಳ ಸಂಘಟಿತ ಪ್ರಯತ್ನಗಳಿಂದ 40ಕ್ಕೂ ಹೆಚ್ಚು ಜನರನ್ನು ರಕ್ಷಿಸಿ ಚಿಕಿತ್ಸೆಗಾಗಿ ಹತ್ತಿರದ ಆಸ್ಪತ್ರೆಗಳಿಗೆ ಸೇರಿಸಲಾಗಿದೆ. ಈ ದುರಂತದಲ್ಲಿ 21 ಜನರು ಸಾವನ್ನಪ್ಪಿದ್ದಾರೆ. ರಕ್ಷಣಾ ಮತ್ತು ಶೋಧ ಕಾರ್ಯಾಚರಣೆಗಳು ಇನ್ನೂ ನಡೆಯುತ್ತಿವೆ ಎಂದು ತಿಳಿಸಿದರು.

ಸ್ಥಳೀಯ ಬಿಜೆಪಿ ಶಾಸಕ ಸತೀಶ್ ಉಪಾಧ್ಯಾಯ ಅವರು ಪ್ರತಿಕ್ರಿಯಿಸಿ, ಬೆಂಕಿ ಅನಾಹುತ ಹೇಗೆ ಸಂಭವಿಸಿತು ಎಂಬುದು ತನಿಖೆಯ ವಿಷಯ. ಇದು ತುಂಬಾ ದುಃಖಕರ ಘಟನೆ. ಸರ್ಕಾರಿ ಸಂಸ್ಥೆಗಳು ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿವೆ. ರಕ್ಷಣಾ ತಂಡಗಳು ತಕ್ಷಣವೇ ಪ್ರತಿಕ್ರಿಯಿಸದೇ ಇರುತ್ತಿದ್ದರೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುತ್ತಿತ್ತು. ಬಾಂಗ್ಲಾದೇಶ ಮತ್ತು ಇತರೆ ಸಾರ್ಕ್ ದೇಶಗಳ ಜನರು ವೈದ್ಯಕೀಯ ಚಿಕಿತ್ಸೆಗಾಗಿ ಬಂದು ಇಲ್ಲಿ ಉಳಿದುಕೊಂಡಿದ್ದರು ಎಂದು ಮಾಹಿತಿ ನೀಡಿದರು.

ಪ್ರಧಾನಿ ಸಂತಾಪ, ಪರಿಹಾರ ಘೋಷಣೆ: ಮಾಳವೀಯ ನಗರ ಅಗ್ನಿ ಅವಘಡದಲ್ಲಿ ಮೃತಪಟ್ಟವರಿಗೆ ಪ್ರಧಾನಿ ಮೋದಿ ಸಂತಾಪ ಸೂಚಿಸಿದ್ದಾರೆ. ಮೃತರ ಸಂಬಂಧಿಕರಿಗೆ ತಲಾ 2 ಲಕ್ಷ ರೂಪಾಯಿ ಮತ್ತು ಗಾಯಾಳುಗಳಿಗೆ 50,000 ರೂಪಾಯಿ ಪರಿಹಾರ ಘೋಷಿಸಿದ್ದಾರೆ.

ಈಗ ದೇಶದ ನಂ.1 ಶ್ರೀಮಂತ ಮುಖ್ಯಮಂತ್ರಿ ಡಿಕೆ ಶಿವಕುಮಾರ್

2ನೇ ಸ್ಥಾನಕ್ಕೆ ಕುಸಿದ ಚಂದ್ರಬಾಬು ನಾಯ್ಡು



ಡಿ.ಕೆ. ಶಿವಕುಮಾರ್



ಚಂದ್ರಬಾಬು ನಾಯ್ಡು

ನವದೆಹಲಿ, ಜೂ.3– ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿರುವ ಡಿ.ಕೆ. ಶಿವಕುಮಾರ್ ದೇಶದ ಅತ್ಯಂತ ಶ್ರೀಮಂತ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದಾರೆ.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ವರದಿಗಳು ಹಾಗೂ ಚುನಾವಣಾ ಅಫಿಡವಿಟ್‌ಗಳ ಪ್ರಕಾರ, ಶ್ರೀಮಂತಿಕೆಯ ವಿಷಯದಲ್ಲಿ ದೇಶದ ಬೇರೆಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳನ್ನು ಹಿಂದಿಕ್ಕಿ ಡಿಕೆಶಿ ಮೊದಲ ಸ್ಥಾನದಲ್ಲಿದ್ದಾರೆ.

2023ರ ವಿಧಾನಸಭಾ ಚುನಾವಣೆಯ ಅಫಿಡವಿಟ್‌ನಲ್ಲಿ ಡಿಕೆಶಿ ಒಟ್ಟು 1,413 ಕೋಟಿ ರೂ. ಮೌಲ್ಯದ ಒಟ್ಟು ಆಸ್ತಿ ಘೋಷಿಸಿದ್ದರು. ಈ ಪೈಕಿ 273 ಕೋಟಿ ಮೌಲ್ಯದ ಚರ ಆಸ್ತಿ ಇದ್ದರೆ ರಿಯಲ್ ಎಸ್ಟೇಟ್ ಮತ್ತು ಜಮೀನು ಸೇರಿ ಸ್ಥಿರ ಆಸ್ತಿಯ ಮೌಲ್ಯ 1,140 ಕೋಟಿ ರೂ. ಇದೆ. 265 ಕೋಟಿ ರೂ.ಗಿಂತ ಹೆಚ್ಚು ಸಾಲವಿದೆ ಎಂದು ಆಯೋಗಕ್ಕೆ ಮಾಹಿತಿ ನೀಡಿದ್ದಾರೆ.

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುವವರೆಗೂ ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ದೇಶದ ಅತ್ಯಂತ ಶ್ರೀಮಂತ ಮುಖ್ಯಮಂತ್ರಿಗಳ ಸಾಲಿನಲ್ಲಿ ಅಗ್ರಸ್ಥಾನದಲ್ಲಿದ್ದರು. 2024ರ ವಿಧಾನಸಭೆ ಚುನಾವಣೆಗೂ ಮುನ್ನ ಚಂದ್ರಬಾಬು ನಾಯ್ಡು ಅವರು ಒಟ್ಟು 931 ಕೋಟಿ ರೂ. ಆಸ್ತಿ ಘೋಷಣೆ ಮಾಡಿದ್ದರು.

ಡಿ.ಕೆ.ಶಿವಕುಮಾರ್ ಸಿಎಂ ಆಗುವುದಕ್ಕೂ ಮೊದಲು ತಮಿಳುನಾಡಿನ ಮುಖ್ಯಮಂತ್ರಿ ಚಂದ್ರಶೇಖರ್ ಜೋಸೆಫ್ ವಿಜಯ್ 648 ಕೋಟಿ ರೂ. ಮೊತ್ತದ ಆಸ್ತಿಯೊಂದಿಗೆ ದೇಶದಲ್ಲೇ ಎರಡನೇ ಸ್ಥಾನದಲ್ಲಿದ್ದರು. ಈಗ ಚಂದ್ರಬಾಬು ನಾಯ್ಡು ಎರಡನೇ ಸ್ಥಾನಕ್ಕೆ ಕುಸಿದಿದ್ದು, ವಿಜಯ್ 3ನೇ ಸ್ಥಾನದಲ್ಲಿದ್ದಾರೆ.

ಬಸವಮಾರ್ಗದಲ್ಲಿ ವಿಶ್ವ ಧೂಮಪಾನರಹಿತ ದಿನದ ಪ್ರಯುಕ್ತ ಜಾಗೃತಿ

ತಂಬಾಕು ಸೇವನೆಯಿಂದ ಕ್ಯಾನ್ಸರ್, ಹೃದ್ರೋಗ, ವಿವಿಧ ಶ್ವಾಸಕೋಶ ಕಾಯಿಲೆಗಳಿಗೆ ತುತ್ತಾಗುವ ಸಾಧ್ಯತೆ ಹೆಚ್ಚು

ಶ್ವಾಸಕೋಶ ತಜ್ಞರಾದ ಡಾ.ಮಧು ಮಾಹಿತಿ



ಹೆಬ್ಬಾಳದ ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದಲ್ಲಿ ಆಯೋಜಿಸಿದ್ದ ವಿಶ್ವ ಧೂಮಪಾನ ರಹಿತ ದಿನದ ಜಾಗೃತಿ ಕಾರ್ಯಕ್ರಮದಲ್ಲಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಮೈಸೂರು,ಜೂ.3(ಪಿಎಂ)– ತಂಬಾಕು ಸೇವನೆ ಕನಿಷ್ಠ 15 ರೀತಿಯ ಕ್ಯಾನ್ಸರ್ ಜೊತೆಗೆ ಹೃದ್ರೋಗ ಮತ್ತು ವಿವಿಧ ಶ್ವಾಸಕೋಶದ ಕಾಯಿಲೆಗಳಿಗೆ ತುತ್ತಾಗುವ ಸಾಧ್ಯತೆ ಹೆಚ್ಚು ಎಂದು ಅಪೋಲೊ ಆಸ್ಪತ್ರೆಯ ಶ್ವಾಶಕೋಶ ತಜ್ಞ ಡಾ.ಮಧು ಹೇಳಿದರು.

ನಗರದ ಹೆಬ್ಬಾಳದಲ್ಲಿರುವ ಬಸವ ಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದಲ್ಲಿ ವಿಶ್ವ ಧೂಮಪಾನ ರಹಿತ ದಿನದ ಅಂಗವಾಗಿ ಬುಧವಾರ ಹಮ್ಮಿಕೊಂಡಿದ್ದ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ತಂಬಾಕನ್ನು ಹಲವಾರು ವಿಧಗಳಲ್ಲಿ ಸೇವಿಸಲಾಗುತ್ತದೆ. ಧೂಮಪಾನ, ತಂಬಾಕನ್ನು ಅಗಿಯುವುದು, ಹುಕ್ಕಾ ಮತ್ತು ಸಿಗಾರ್‌ಗಳಲ್ಲಿ ತಂಬಾಕು ಸೇವನೆ ಮಾಡಲಾಗುತ್ತದೆ. ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ, ಭಾರತವು ವಿಶ್ವದ ಶೇ.12ರಷ್ಟು ಧೂಮಪಾನಿಗಳಿಗೆ ನೆಲೆಯಾಗಿದೆ. ತಂಬಾಕು ಸಂಬಂಧಿತ ಕಾಯಿಲೆಗಳಿಂದಾಗಿ ಭಾರತದಲ್ಲಿ ಪ್ರತಿವರ್ಷ 1 ಮಿಲಿಯನ್‌ಗಿಂತಲೂ ಹೆಚ್ಚು ಜನರು ಸಾವನ್ನಪ್ಪುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

> ತಂಬಾಕು ಸೇವನೆಯು ಹೃದಯದ ಅಪಧಮನಿಗಳನ್ನು ಕಿರಿದಾಗಿಸುತ್ತದೆ. ರಕ್ತದ ಹರಿವು ಮತ್ತು ಮೆದುಳಿಗೆ ಆಮ್ಲಜನಕದ ಪೂರೈಕೆ ತಡೆಯುತ್ತದೆ. ಇದು ಪಾರ್ಶ್ವವಾಯುವಿಗೆ ಕಾರಣವಾಗಬಹುದು. ಪಾರ್ಶ್ವವಾಯುದಿಂದ ಮೆದುಳಿನ ಕೋಶಗಳು ಆಮ್ಲಜನಕದ ಕೊರತೆಯನ್ನು ಅನುಭವಿಸುತ್ತವೆ ಮತ್ತು ಅವು ಸಾಯಲು ಪ್ರಾರಂಭಿಸುತ್ತವೆ. ಈ ನಿಟ್ಟಿನಲ್ಲಿ ಧೂಮಪಾನವನ್ನು ತ್ಯಜಿಸಿ ಉತ್ತಮ ಜೀವನಶೈಲಿ ರೂಢಿಸಿಕೊಂಡರೆ ಆರೋಗ್ಯವಂತರಾಗಿರಬಹುದು.
>
> -ಎಸ್.ಬಸವರಾಜು, ಸಂಸ್ಥಾಪಕರು, ಬಸವಮಾರ್ಗ ಫೌಂಡೇಷನ್.

ಸಿಗರೇಟ್ ಸೇದುವುದು ಶ್ವಾಸಕೋಶದ ಕ್ಯಾನ್ಸರ್‌ಗೆ ಸಾಮಾನ್ಯ ಕಾರಣವಾಗಿದೆ. ಪ್ರಪಂಚದಲ್ಲಿ ಶ್ವಾಸಕೋಶದ ಕ್ಯಾನ್ಸರ್ ಸಂಬಂಧಿತ ಸಾವುಗಳಲ್ಲಿ ಶೇ.87ರಷ್ಟು ಧೂಮಪಾನದಿಂದ ಉಂಟಾಗುತ್ತಿದೆ. ಶ್ವಾಸಕೋಶದ ಕ್ಯಾನ್ಸರ್ ಅಪಾಯವನ್ನು ಕಡಿಮೆ ಮಾಡುವ ಅತ್ಯುತ್ತಮ ಮಾರ್ಗವೆಂದರೆ ತಂಬಾಕು ತ್ಯಜಿಸುವುದೇ ಆಗಿದೆ ಎಂದು ತಿಳಿಸಿದರು.

ಶೇ.90ರಷ್ಟು ಜನ ತಂಬಾಕು ಸೇವನೆಯಿಂದಲೇ ಬಾಯಿ ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದಾರೆ. ತಂಬಾಕನ್ನು ಜಗಿಯುವುದು ಬಾಯಿ ಕ್ಯಾನ್ಸರ್‌ಗೆ ಕಾರಣವಾಗುವ ಪ್ರಮುಖ ಅಂಶಗಳಲ್ಲಿ ಒಂದಾಗಿದೆ. ಇದು ಗಂಟಲು ಕ್ಯಾನ್ಸರ್ ಅಪಾಯವನ್ನು ಹೆಚ್ಚಿಸುತ್ತದೆ. ಧೂಮಪಾನಿಗಳಲ್ಲಿ ಹೃದಯಾಘಾತವಾಗುವ ಸಾಧ್ಯತೆ ಎರಡು ಪಟ್ಟು ಹೆಚ್ಚು ಇರುತ್ತದೆ. ಧೂಮಪಾನವು ಹೃದಯ ಸಂಬಂಧಿ ಕಾಯಿಲೆಗಳನ್ನು ಬೆಳೆಸುವ ಅಪಾಯವನ್ನು ಹೆಚ್ಚಿಸುತ್ತದೆ. ಇದರಲ್ಲಿ ಪರಿಧಮನಿಯ ಹೃದಯ ಕಾಯಿಲೆ ಮತ್ತು ಪಾರ್ಶ್ವವಾಯು ಸೇರಿವೆ. ಸಿಗರೇಟುಗಳು ನಿಕೋಟಿನ್ ಎಂಬ ವಸ್ತುವನ್ನು ಹೊಂದಿರುತ್ತವೆ. ಇದು ನಿಮ್ಮ ರಕ್ತದೊತ್ತಡವನ್ನು ಹೆಚ್ಚಿಸುತ್ತದೆ ಮತ್ತು ಹೃದಯ ಬಡಿತವನ್ನು ವೇಗಗೊಳಿಸುತ್ತದೆ ಎಂದು ಮಾಹಿತಿ ನೀಡಿದರು.

ಇದೇ ವೇಳೆ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಬಸವಮಾರ್ಗ ಫೌಂಡೇಷನ್ ಸಂಸ್ಥಾಪಕ ಎಸ್.ಬಸವರಾಜು, 92.7 ಬಿಗ್ ಎಫ್‌ಎಂನ ಆರ್‌ಜೆ ಆ್ಯಂಟೋ ಕ್ರಸ್ಟನ್, ನಿಖಿತಾಶ್ ಇತರರು ಹಾಜರಿದ್ದರು.

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಿ ಪ್ರಮಾಣ; ಮೈಸೂರಲ್ಲಿ ಸಂಭ್ರಮಾಚರಣೆ

ಸಾರ್ವಜನಿಕರಿಗೆ ಸಿಹಿ ವಿತರಿಸಿ, ಪಟಾಕಿ ಸಿಡಿಸಿ ಸಡಗರ



ಚಾಮುಂಡಿಪುರಂ ವೃತ್ತದಲ್ಲಿ ಸಿಹಿ ವಿತರಿಸಿ ಸಂಭ್ರಮಾಚರಣೆ ನಡೆಸಲಾಯಿತು.

ಮೈಸೂರು,ಜೂ.3(ಪಿಎಂ)– ರಾಜ್ಯದ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಹಾಗೂ ಅವರ ಜೊತೆ 13 ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಬುಧವಾರ ನಗರದ ವಿವಿಧೆಡೆ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಡಿ.ಕೆ.ಶಿವಕುಮಾರ್ ಅಭಿಮಾನಿಗಳು ಸಾರ್ವಜನಿಕರಿಗೆ ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಸಿದರು.

ನಗರದ ಚಾಮುಂಡಿಪುರಂ ವೃತ್ತದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ನೇತೃತ್ವದಲ್ಲಿ ಸಂಭ್ರಮಾಚರಣೆ ನಡೆಯಿತು. ಇದೇ ವೇಳೆ ಮಾತನಾಡಿದ ಹೆಚ್.ವಿ.ರಾಜೀವ್, ಸಿಎಂ ಸ್ಥಾನದ ಅಧಿಕಾರ ಹಸ್ತಾಂತರವನ್ನು ವಿರೋಧ ಪಕ್ಷಗಳು ಸೂಕ್ಷ್ಮವಾಗಿ ಗಮನಿಸುತ್ತಿದ್ದವು. ಭಿನ್ನಮತ ಸ್ಫೋಟಗೊಳ್ಳುತ್ತದೆ ಎಂದು ಕಾಯುತ್ತಿದ್ದವು. ಆದರೆ ಮುತ್ಸದ್ಧಿಯಾದ ಸಿದ್ದರಾಮಯ್ಯ ಅವರು ಸ್ವಯಂ ಆಗಿ ಯಾವುದೇ ಗೊಂದಲವಿಲ್ಲದೆ ಅಧಿಕಾರ ಹಸ್ತಾಂತರಿಸಿದ್ದಾರೆ. ರಾಜ್ಯದ ಅಭಿವೃದ್ಧಿ ಬಗ್ಗೆ ಚಿಂತನೆಗಳನ್ನು ಹೊಂದಿರುವ ಸಿದ್ದರಾಮಯ್ಯನವರು ಕಾಂಗ್ರೆಸ್ ಅನ್ನು ಮುಂದೆಯೂ ರಾಜ್ಯದಲ್ಲಿ ಅಧಿಕಾರಕ್ಕೆ ತರಬೇಕೆಂಬ ಸಂಕಲ್ಪ ಹೊಂದಿದ್ದಾರೆ ಎಂದು ಹೇಳಿದರು.

ಅತ್ಯಂತ ಸಹನೆ ಮತ್ತು ಗೌರವದಿಂದ ಸಿದ್ದರಾಮಯ್ಯನವರ ಜೊತೆ ನಡೆದುಕೊಂಡು ಡಿ.ಕೆ.ಶಿವಕುಮಾರ್ ಮುನ್ನಡೆದಿದ್ದಾರೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೇರಿದಂತೆ ಗಣ್ಯರ ಭೇಟಿ ಮಾಡಿ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪ್ರಬುದ್ಧ ಹೆಜ್ಜೆಯನ್ನಿಟ್ಟಿದ್ದಾರೆ. ರಾಜ್ಯದ ಅಭಿವೃದ್ಧಿಗೆ ಪೂರಕವಾಗಿ ಸಿದ್ದರಾಮಯ್ಯನವರು ರೂಪಿಸಿದ ಯೋಜನೆಗಳನ್ನು ಇನ್ನಷ್ಟು ತ್ವರಿತಗೊಳಿಸುವ ನಿಟ್ಟಿನಲ್ಲಿ ಡಿ.ಕೆ.ಶಿವಕುಮಾರ್ ಸಂಕಲ್ಪ ಮಾಡಿದ್ದಾರೆ.



ದೇವರಾಜ ಅರಸು ರಸ್ತೆಯಲ್ಲಿ ಸಿಹಿ ವಿತರಿಸಲಾಯಿತು.

ಈ ಜೋಡಿ ನೇತೃತ್ವದಲ್ಲಿ ಮುಂದೆಯೂ ಕಾಂಗ್ರೆಸ್ ಸರ್ಕಾರವೇ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬರಲಿದೆ ಎಂದರು.

ಕೆಆರ್ ಬ್ಯಾಂಕ್ ಅಧ್ಯಕ್ಷ ಬಸವರಾಜು ಬಸಪ್ಪ ಮಾತನಾಡಿ, ಡಿ.ಕೆ.ಶಿವಕುಮಾರ್ ಅವರು ಸಿದ್ದರಾಮಯ್ಯನವರ ಮಾರ್ಗದರ್ಶನದಲ್ಲಿ ಉತ್ತಮವಾಗಿ ಆಡಳಿತ ನಡೆಸಿ ರಾಜ್ಯವನ್ನು ಮತ್ತಷ್ಟು ಅಭಿವೃದ್ಧಿ ದಿಕ್ಕಿನಲ್ಲಿ ಕೊಂಡೊಯ್ಯಲಿ. ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೂ ಸಚಿವ ಸಂಪುಟದಲ್ಲಿ ಅವಕಾಶ ಕೊಟ್ಟಿದ್ದು, ಅವರು ಮೈಸೂರು ಜಿಲ್ಲಾ ಉಸ್ತುವಾರಿಯಾಗಲೆಂದು ತಾಯಿ ಚಾಮುಂಡೇಶ್ವರಿಯಲ್ಲಿ ಪ್ರಾರ್ಥಿಸುತ್ತೇನೆ ಎಂದು ಹೇಳಿದರು.

ಈ ವೇಳೆ ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಮಹಾನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಪ್ರಧಾನ ಕಾರ್ಯದರ್ಶಿ ಬ್ರಾಡ್‌ವೇ ಕಿರಣ್, ಪಕ್ಷದ ಮುಖಂಡರಾದ ಡಾ. ಸುಜಾತ, ನವೀನ್ ಕೆಂಪಿ, ಅಜಯ್‌ರಾಜ್, ಮದನ್ ಕುಮಾರ್, ಬೋರೇಗೌಡ ಮತ್ತಿತರರು ಹಾಜರಿದ್ದರು.

ದೇವರಾಜ ಬ್ಲಾಕ್: ಚಾಮರಾಜ ಕ್ಷೇತ್ರದ ದೇವರಾಜ ಬ್ಲಾಕ್ ಕಾಂಗ್ರೆಸ್‌ನಿಂದ ಮೈಸೂರಿನ ಡಿ.ದೇವರಾಜ ಅರಸು ರಸ್ತೆಯಲ್ಲಿ ಸಾರ್ವಜನಿಕರಿಗೆ ಸಿಹಿ ವಿತರಿಸಿ, ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಸಲಾಯಿತು. ದೇವರಾಜ ಬ್ಲಾಕ್ ಅಧ್ಯಕ್ಷ ಡಿ.ನಾಗಭೂಷಣ್, ಮಾಜಿ ಉಪಮೇಯರ್ ಪುಷ್ಪವಲ್ಲಿ ಮತ್ತಿತರರು ಪಾಲ್ಗೊಂಡಿದ್ದರು.

ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪ್ರಮಾಣ ವಚನ; ಅಭಿಮಾನಿಗಳಿಂದ ಸಿಹಿ ಹಂಚಿ ಸಂಭ್ರಮ



ಡಿ.ಕೆ.ಶಿವಕುಮಾರ್ ಅವರು ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಮೈಸೂರಲ್ಲಿ ಡಿ.ಕೆ.ಶಿವಕುಮಾರ್ ಅಭಿಮಾನಿ ಬಳಗದ ಕಾರ್ಯಕರ್ತರು ಸಿಹಿ ವಿತರಿಸಿ ಸಂಭ್ರಮಿಸಿದರು.

ಮೈಸೂರು, ಜೂ.3(ಎಂಟಿವೈ)– ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅಧಿಕಾರ ಸ್ವೀಕರಿಸಿದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಡಿಕೆಶಿ ಅಭಿಮಾನಿಗಳು ಮತ್ತು ಕಾಂಗ್ರೆಸ್ ಬೆಂಬಲಿಗರು ಸಿಹಿ ವಿತರಿಸಿ ಸಂಭ್ರಮಿಸಿದರು.

ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿ ಅಖಿಲ ಕರ್ನಾಟಕ ಡಿ.ಕೆ.ಶಿವಕುಮಾರ್ ಅಭಿಮಾನಿ ಬಳಗದ ಕಾರ್ಯಕರ್ತರು ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪರವಾಗಿ ಜೈಕಾರದ ಘೋಷಣೆ ಸಂಭ್ರಮಿಸಿದರಲ್ಲದೆ, ಸಾರ್ವಜನಿಕರಿಗೆ ಸಿಹಿ ಹಂಚುವ ಮೂಲಕ ವಿಜಯೋತ್ಸವ ಆಚರಿಸಿದರು. ಚಾಮರಾಜ ಜೋಡಿ ರಸ್ತೆಯಲ್ಲಿ ಸಂಚರಿಸುತ್ತಿದ್ದ ಸಾರಿಗೆ ಬಸ್‌ಗಳ ಪ್ರಯಾಣಿಕರಿಗೆ, ಚಾಲಕ, ನಿರ್ವಾಹಕರಿಗೆ, ದ್ವಿಚಕ್ರ ವಾಹನ ಸವಾರರು, ಆಟೋ ಚಾಲಕರು ಹಾಗೂ ಸಾರ್ವಜನಿಕರಿಗೆ ಸಿಹಿ ಹಂಚಿ ಸಂತಸಪಟ್ಟರು.

'ಕನಕಪುರ ಬಂಡೆ' ಎಂದೇ ಖ್ಯಾತರಾಗಿರುವ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಹುದ್ದೆ ಅಲಂಕರಿಸಿದ್ದು ಕೋಟ್ಯಾಂತರ ಕಾರ್ಯಕರ್ತರಿಗೆ ಆನೆ ಬಲ ಬಂದಂತಾಗಿದೆ. ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಅವರಿಗೆ ರಾಜ್ಯದ ಜನರ ಆಶೀರ್ವಾದ ಸದಾ ಇರಬೇಕು. ಸಾರ್ವಜನಿಕರು ಸಿಹಿ ತಿಂದು ನಮ್ಮ ನಾಯಕನನ್ನು ಆಶೀರ್ವದಿಸಬೇಕು ಎಂದು ಬೆಂಬಲಿಗರು ಘೋಷಣೆ ಕೂಗುತ್ತಿದ್ದರು.

ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಡಿಕೆ ಶಿವಕುಮಾರ್ ಅಭಿಮಾನಿ ಬಳಗದ ಮೈಸೂರು ಘಟಕದ ಅಧ್ಯಕ್ಷ ಜಿ.ರಾಘವೇಂದ್ರ, ಮುಖಂಡರಾದ ಶೇಖರ್, ಕಿರಣ್, ಎಸ್.ಎನ್.ರಾಜೇಶ್, ರವಿಚಂದ್ರ, ಚಂದ್ರು, ಲಕ್ಷ್ಮಣ, ನಾಗರಾಜು, ಮುಸಿರಾ, ಚಂದ್ರು, ಮಂಜುವಿನೋದ್, ಮಾಯಣ್ಣ, ಪೂಜಾ ನಟರಾಜ್ ಅನಿಲ್, ಯೋಗೇಶ್ ನಾಯ್ಡು, ಹರೀಶ್‌ರಾಕೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಗುರುವಾರ 4 ಜೂನ್ 2026

ಡಿಕೆಶಿ ಪ್ರಮಾಣ ವಚನ: ಕೊಡಗು ಜಿಲ್ಲೆಯಾದ್ಯಂತ ಸಂಭ್ರಮಾಚರಣೆ






ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಹಿನ್ನೆಲೆಯಲ್ಲಿ ಮಡಿಕೇರಿ, ಸುಂಟಿಕೊಪ್ಪ, ಕುಶಾಲನಗರ ಮತ್ತು ವಿರಾಜಪೇಟೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು.

ಮಡಿಕೇರಿ, ಜೂ. 3– ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಹಿನ್ನೆಲೆಯಲ್ಲಿ ಜಿಲ್ಲೆಯ ವಿವಿಧೆಡೆ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು.

ತುಂತುರು ಮಳೆಯ ನಡುವೆಯೇ ಇಂದಿರಾ ಗಾಂಧಿ ವೃತ್ತದಲ್ಲಿ ಸೇರಿದ ನಗರ ಕಾಂಗ್ರೆಸ್‌ನ ನಾಯಕರು ಮತ್ತು ಕಾರ್ಯಕರ್ತರು, ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಇದಕ್ಕೂ ಮುನ್ನ ಪಕ್ಷದ ಕಚೇರಿಯಲ್ಲಿ ಬೃಹತ್ ಎಲ್‌ಇಡಿ ಪರದೆಯ ಮೂಲಕ ಮುಖ್ಯಮಂತ್ರಿಗಳ ಪದಗ್ರಹಣ ಸಮಾರಂಭ ವೀಕ್ಷಿಸಲು ಅನುಕೂಲ ಮಾಡಿಕೊಡಲಾಗಿತ್ತು. ಈ ಸಂದರ್ಭ ಕಾಂಗ್ರೆಸ್ ನಗರಾಧ್ಯಕ್ಷ ಪ್ರಕಾಶ್ ಆಚಾರ್ಯ, ನಗರಸಭೆ ಸದಸ್ಯರಾದ ಮಂಡೀರ ಸದಾ ಮುದ್ದಪ್ಪ, ಜೆ.ಸಿ.ಜಗದೀಶ್, ಮುದ್ದುರಾಜ್, ಪಕ್ಷದ ಪ್ರಮುಖರಾದ ಮಂದ್ರೀರ ಮೋಹನ್ ದಾಸ್, ಪುಷ್ಪ ಪೂಣಚ್ಚ, ಖಲೀಲ್ ಬಾಷಾ, ರವೂಫ್, ಕೋಚನ ಚೇತನ್, ಫ್ಯಾನ್ಸಿ ಪಾರ್ವತಿ, ಲೀಲಾ ಶೇಷಮ್ಮ ಮತ್ತಿತರರು ಹಾಜರಿದ್ದರು.

ಸುಂಟಿಕೊಪ್ಪ: ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸುಂಟಿಕೊಪ್ಪದ ಕನ್ನಡ ವೃತ್ತದಲ್ಲಿ ಜಮಾವಣೆಗೊಂಡು ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅಧಿಕಾರ ಸ್ವೀಕರಿಸಿದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಮತ್ತು ರಾಜ್ಯ ನಾಯಕರುಗಳಿಗೆ ಘೋಷಣೆಗಳನ್ನು ಕೂಗಿ ಪಟಾಕಿ ಸಿಡಿಸಿ, ಸಿಹಿಹಂಚಿ ಸಂಭ್ರಮಾಚರಣೆಯನ್ನು ನಡೆಸಿದರು. ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ರಾಜ್ಯದ ನಾಯಕರಾದ ಸಿದ್ಧರಾಮಯ್ಯ ಹಾಗೂ ಶಾಸಕರಾದ ಡಾ. ಮಂತರ್‌ಗೌಡ, ಎ.ಎಸ್.ಪೊನ್ನಣ್ಣ ಪರ ಜೈಕಾರಗಳನ್ನು ಕೂಗಿದರು.

ಸುಂಟಿಕೊಪ್ಪ ಗ್ರಾಪಂ ಮಾಜಿ ಅಧ್ಯಕ್ಷ ಕೆ.ಇ.ಕರೀಂ, ಮಾಜಿ ಅಧ್ಯಕ್ಷೆ ಶಿವಮ್ಮ ಮಹೇಶ್, ಗ್ರಾಪಂ ಮಾಜಿ ಸದಸ್ಯ ಕೆ.ಎಂ.ಆಲಿಕುಟ್ಟಿ, ಹೋಬಳಿ ಅಧ್ಯಕ್ಷ ರಜಾಕ್, ಯುವ ಕಾಂಗ್ರೆಸ್ ಅಧ್ಯಕ್ಷ ಯಂಕನ ಶ್ರೀರಾಮ್, ನಗರ ಕಾಂಗ್ರೆಸ್ ಕಾರ್ಯದರ್ಶಿ ಯಂಕನ ಕೌಶಿಕ್, ನಗರ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಅಜೀಜ್, ಕಾನ್‌ಬೈಲ್ ವಿಭಾಗದ ಅಧ್ಯಕ್ಷ ಆದಂ, ಮಹಿಳಾ ಘಟಕದ ಅಧ್ಯಕ್ಷೆ ರಮಣಿ, ಜಿ.ಪಂ ಮಾಜಿ ಸದಸ್ಯೆ ಭಾನುಮತಿ ಹಾಗೂ ಕಾಂಗ್ರೆಸ್ ಕಾರ್ಯರ್ತರು ಹಾಜರಿದ್ದರು.

ಕುಶಾಲನಗರ : ನಗರ ಕಾಂಗ್ರೆಸ್ ವತಿಯಿಂದ ಇಲ್ಲಿನ ಕಾರ್ಯಪ್ಪ ವೃತ್ತದಲ್ಲಿ ಸಂಭ್ರಮಾಚರಣೆ ನಡೆಸಲಾಯಿತು. ನಗರ ಕಾಂಗ್ರೆಸ್ ಅಧ್ಯಕ್ಷ ಜೋಸೆಫ್ ವಿಕ್ಟರ್ ಸೋನ್ಸ್ ಅವರ ನೇತೃತ್ವದಲ್ಲಿ ಕಾರ್ಯಕರ್ತರು ಡಿ.ಕೆ. ಶಿವಕುಮಾರ್ ಪರವಾಗಿ ಘೋಷಣೆಗಳನ್ನು ಕೂಗಿ, ಸಿಹಿ ವಿತರಿಸಿ ಸಂಭ್ರಮಾಚರಣೆ ನಡೆಸಿದರು. ಪುರಸಭೆ ಮಾಜಿ ಸದಸ್ಯರಾದ ವಿ.ಎಸ್.ಆನಂದ್ ಕುಮಾರ್, ಖಲೀ ಮುಲ್ಲಾ, ಶಿವಶಂಕರ್, ಪದ್ಮ, ಪ್ರಕಾಶ್, ನವೀನ್, ಜಿ.ಬಿ.ಜಗದೀಶ್, ಕಾಂಗ್ರೆಸ್ ಮುಖಂಡರಾದ ಚಂದ್ರು, ರಶೀದ್, ಅನಿಲ್, ರವಿ, ಸಂಗೀತಾ, ಗೋವಿಂದಯ್ಯ, ಜಲೀಲ್ ಹಾಗೂ ಇನ್ನಿತರರು ಇದ್ದರು.

ವಿರಾಜಪೇಟೆ : ಮುಖ್ಯಮಂತ್ರಿ ಪ್ರಮಾಣ ವಚನದ ಕ್ಷಣವನ್ನು ಕಾಂಗ್ರೆಸ್ ಕಾರ್ಯಕರ್ತರು ಮತ್ತು ಅಭಿಮಾನಿಗಳು ಸಂಭ್ರಮಾಚರಣೆ ಮಾಡಿದರು.

ಬ್ಲಾಕ್ ಕಾಂಗ್ರೆಸ್ ಹಾಗೂ ನಗರ ಕಾಂಗ್ರೆಸ್ ಸಮಿತಿ ವತಿಯಿಂದ ಪಟ್ಟಣದ ಗಡಿಯಾರ ಕಂಬದ ಬಳಿ ನಗರ ಅಧ್ಯಕ್ಷ ಮಾಳೇಟಿರ ಬೋಪಣ್ಣ ನೇತೃತ್ವದಲ್ಲಿ ಡಿ.ಕೆ ಶಿವಕುಮಾರ್ ಪರವಾಗಿ ಘೋಷಣೆಗಳನ್ನು ಕೂಗಿ, ಸಿಹಿ ಹಂಚಿದರು. ನಗರ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಮಾಳೇಟಿರ ಬೋಪಣ್ಣ ಅವರಿಗೆ ಕಾಂಗ್ರೆಸ್ ಕಾರ್ಯಕರ್ತರು ಮಾಲಾರ್ಪಣೆ ಮಾಡಿ ಅಭಿನಂದಿಸಿದರು.

ಹಿರಿಯ ಕಾಂಗ್ರೆಸ್ ಮುಖಂಡ ಮಾದಂಡ ಎಸ್.ಪೂವಯ್ಯ, ಪುರಸಭಾ ಮಾಜಿ ಸದಸ್ಯ ಮಹಮ್ಮದ್ ರಾಫಿ, ನಗರ ಕಾಂಗ್ರೆಸ್ ನೂತನ ಅಧ್ಯಕ್ಷ ಮಾಳೇಟಿರ ಬೋಪಣ್ಣ, ಉಪಾಧ್ಯಕ್ಷ ಶಾಹುಲ್ ಹಮೀದ್, ಕಾರ್ಯದರ್ಶಿ ಶಶಿಧರನ್, ದಿನೇಶ್ ನಂಬಿಯಾರ್, ಜಿ.ಜಿ. ಮೋಹನ್, ಮಹದೇವ್, ಕಾಳಮಂಡ ಜಗತ್, ಆಥೀಫ್ ಮನ್ನಾ, ಎ.ವಿ. ಮಂಜುನಾಥ್, ಮೆಲ್ರಾಯ್ ಲೋಬೋ, ಸತೀಶ್‌ಕುಮಾರ್, ಶಭರಿಶ್ ಶೆಟ್ಟಿ, ನಯಾರ್ಘು, ಆಯುಬ್, ಸೋಮಣ್ಣ, ರಜನಿಕಾಂತ್, ಚೆಲ್ಲವಂಡ ಕಾವೇರಪ್ಪ ಸಂತೋಷ್, ಅಬ್ದುಲ್ ಜಲೀಲ್, ಸಿ.ಕೆ. ಪೃಥ್ವಿನಾಥ್, ಇಸ್ಮಾಯಿಲ್, ಜಿಲ್ಲಾ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ವಿನಿತಾ ಕಾವೇರಮ್ಮ, ಬ್ಲಾಕ್ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಕಾಳಮಂಡ ನಯನ ಜಗತ್ ಸೇರಿದಂತೆ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಜೈಕಾರ ಹಾಕಿ ಸಂಭ್ರಮಾಚರಣೆ ಮಾಡಿದರು.

ರಾಷ್ಟ್ರೀಯ ಜಾತಿ ಗಣತಿಯಲ್ಲಿ ಕೊಡವರಿಗೆ ಪ್ರತ್ಯೇಕ ಕೋಡ್, ಕಾಲಂಗೆ ಆಗ್ರಹಿಸಿ ಸಿಎನ್‌ಸಿ ಪ್ರತಿಭಟನೆ

ಮಡಿಕೇರಿ, ಜೂ.3– ಅಕ್ರಮ ಮತದಾರರ ಗುರುತಿನ ಚೀಟಿಗಳನ್ನು ರದ್ದು ಗೊಳಿಸಲು ವಿಶೇಷ ತೀವ್ರ ಪರಿಷ್ಕರಣೆ ಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಸ್ಥಳೀಯ ಕೊಡವರ ಚುನಾವಣಾ ಹಕ್ಕುಗಳ ರಕ್ಷಣೆ ಮಾಡಬೇಕು. 2027ರ ಜನಗಣತಿ ಹಾಗೂ ರಾಷ್ಟ್ರೀಯ ಜಾತಿ ಗಣತಿಯಲ್ಲಿ ಕೊಡವರಿಗಾಗಿ ಪ್ರತ್ಯೇಕ ಕೋಡ್ ಮತ್ತು ಕಾಲಂ ಒದಗಿಸಬೇಕೆಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ನಗರದಲ್ಲಿ ಶಾಂತಿಯುತ ಸತ್ಯಾಗ್ರಹ ನಡೆಸಿತು.



ಮಡಿಕೇರಿಯಲ್ಲಿ ಸಿಎನ್‌ಸಿ ಪ್ರತಿಭಟನೆ ನಡೆಸಿತು.

ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಸತ್ಯಾಗ್ರಹ ನಡೆಸಿ ಜಿಲ್ಲಾಡಳಿತದ ಮೂಲಕ ರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳು, ಗೃಹ ಸಚಿವರು, ಜನಗಣತಿ ಆಯುಕ್ತರು ಹಾಗೂ ಮುಖ್ಯ ಚುನಾವಣಾಧಿಕಾರಿಗಳಿಗೆ ಮನವಿ ಸಲ್ಲಿಸಿ, 1971ರ ಪೂರ್ವದ ಸಿಂಧು ಪೌರತ್ವ/ಪೂರ್ವಜರ ದಾಖಲೆಗಳನ್ನು ಸಲ್ಲಿಸಲು ವಿಫಲರಾಗುವ ಎಲ್ಲಾ ಅಕ್ರಮ ಮತದಾರರನ್ನು ತಕ್ಷಣವೇ ಪಟ್ಟಿಯಿಂದ ಕೈಬಿಡಬೇಕು. ಅಕ್ರಮ ಮತದಾರರನ್ನು ಸೇರಿಸಲು ನೆರವಾಗುವ ಅಧಿಕಾರಿಗಳು ಮತ್ತು ಮಧ್ಯ ವರ್ತಿಗಳ ವಿರುದ್ಧ ಕಠಿಣಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಕೊಡವರ ಹೆಸರುಗಳ ರದ್ದತಿಯನ್ನು ತಡೆಗಟ್ಟುವುದು ಮತ್ತು ಅವರ ಕಾನೂನು ಬದ್ಧತೆಯನ್ನು ದೃಢೀಕರಿಸಬೇಕು. ವಲಸೆ, ಉದ್ಯೋಗ ಮತ್ತು ಭೂ ದಾಖಲೆಗಳ ಕೊರತೆಯಿಂದಾಗಿ, ಮತದಾರರ ಪಟ್ಟಿ ಪರಿಷ್ಕರಣೆ ಸಮಯದಲ್ಲಿ ನೈಜ ಕೊಡವರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡುವ ಹುನ್ನಾರ ನಡೆಯುವ ಸಂಭವ ಹೆಚ್ಚಾಗಿದೆ. ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಅಡಿಯಲ್ಲಿ ವಿಶೇಷ ಕೊಡವ ಪರಿಶೀಲನಾ ಕೋಶವನ್ನು ಸ್ಥಾಪಿಸಬೇಕು. ಈ ಕೋಶವು ವಂಶಾವಳಿ, ಕುಟುಂಬ–ಒಕ್ಕ, ಮನೆ–ಪೆದ, ಕುಲದ ದಾಖಲೆಗಳು ಮತ್ತು ಸಮುದಾಯದ ದೃಢೀಕರಣದ ಆಧಾರದ ಮೇಲೆ ನೈಜ ಕೊಡವ ಮತದಾರರನ್ನು ಗುರುತಿಸಬೇಕು. ಸೂಕ್ತ ಭೌತಿಕ ಪರಿಶೀಲನೆ ಮತ್ತು ವಿಚಾರಣೆಗೆ ಅವಕಾಶ ನೀಡಬಾರದು. ಯಾವುದೇ ಕಾರಣಕ್ಕೂ ಮತದಾರನ ಹೆಸರನ್ನು ಪಟ್ಟಿಯಿಂದ ತೆಗೆದುಹಾಕಬಾರದು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಚೋಳಪಂಡ ಜ್ಯೋತಿ ನಂಜಪ್ಪ, ಲೆಫ್ಟಿನೆಂಟ್ ಕರ್ನಲ್ ಬಿ.ಎಂ ಪಾರ್ವತಿ, ಮುದ್ದಿಯಡ ಲೀಲಾವತಿ, ಅಳಮಂಡ ಜೈ ಗಣಪತಿ, ಪಟ್ಟಮಾಡ ಕುಶ, ನಂದೇಟಿರ ರವಿ ಸುಬ್ಬಯ್ಯ, ಮಂದಪಂಡ ಮನೋಜ್ ಮಂದಣ್ಣ, ಕಿರಿಯಮಾಡ ಶೆರಿನ್, ಅರೆಯಡ ಗಿರೀಶ್, ಅಪ್ಪಾರಂಡ ಪ್ರಸಾದ್ ಕುಶಾಲಪ್ಪ, ಪುದಿಯೊಕಡ ಕಾಶಿ ಕರುಂಬಯ್ಯ, ಮಣವಟ್ಟಿರ ಚಿಣ್ಣಪ್ಪ, ಪುಟ್ಟಿಚಂಡ ಡಾನ್ ದೇವಯ್ಯ, ಬೇಪಡಿಯಂಡ ಬಿದ್ದಪ್ಪ, ಸಾದೆರ ರಮೇಶ್, ಪಾಲೇಕಂಡ ಪ್ರಧಾನ್ ಪೂಣಚ್ಚ, ನಂದಿನೆರವಂಡ ಮಿಟ್ಟು ಅಪ್ಪಯ್ಯ, ನಂದಿ ನೆರವಂಡ ಅಯ್ಯಣ್ಣ, ಚೊಕ್ಕಂಡ ಕಟ್ಟಿ, ಅಚ್ಚಕಾಳೇರ ನವೀನ್ ಮೊಣ್ಣಪ್ಪ, ಕೂತಂಡ ರೋಷನ್ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಪೊನ್ನಣ್ಣಗೆ ಸಚಿವ ಸ್ಥಾನಕ್ಕೆ ಮಾಜಿ ಸೈನಿಕರ ಆಗ್ರಹ



ಸುದ್ದಿಗೋಷ್ಠಿಯಲ್ಲಿ ಮಾಜಿ ಸೈನಿಕರ ಸಹಕಾರ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮಾತನಾಡಿದರು.

ವಿರಾಜಪೇಟೆ: ಪ್ರತಿಬಾರಿ ಸಚಿವ ಸಂಪುಟ ಪುನರ್‌ರಚನೆ ಸಂದರ್ಭದಲ್ಲಿ ಜಿಲ್ಲೆಯನ್ನು ನಿರ್ಲಕ್ಷಿಸುತ್ತಿದ್ದು, ಈ ಬಾರಿ ಶಾಸಕ ಅಜ್ಜಿಕುಟ್ಟಿರ ಪೊನ್ನಣ್ಣಗೆ ಸಚಿವ ಸ್ಥಾನ ನೀಡಬೇಕು ಎಂದು ಮಾಜಿ ಸೈನಿಕರ ಸಹಕಾರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಆಗ್ರಹಿಸಿದ್ದಾರೆ.

ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ಉತ್ತಯ್ಯ ಮಾತನಾಡಿ, 2012ರಿಂದಲೂ ಸಂಪುಟದಲ್ಲಿ ಜಿಲ್ಲೆಗೆ ಯಾವುದೇ ಪ್ರಾತಿನಿಧ್ಯ ನೀಡಿಲ್ಲ. ಪ್ರತಿ ವರ್ಷ ಕೊಡಗು ಜಿಲ್ಲೆ ಅತಿವೃಷ್ಟಿ ಅಥವಾ ಅನಾವೃಷ್ಟಿಗೆ ಒಳಗಾಗುತ್ತಿದೆ. ಅತಿ ಹೆಚ್ಚು ಮಳೆ ಬೀಳುವ ಕಾವೇರಿ ನೀರನ್ನು ಹೊರಜಿಲ್ಲೆ, ರಾಜ್ಯಗಳಿಗೆ ನೀಡುತ್ತಿರುವುದರಿಂದ ನಮಗೆ ಏನೂ ಪ್ರಯೋಜನ ಆಗುತ್ತಿಲ್ಲ. ಪ್ರವಾಹದಿಂದ ನಮ್ಮ ಬೆಳೆಗಳು ಹಾಳಾಗುತ್ತಿದ್ದು, ಪ್ರತಿ ವರ್ಷ ಇಲ್ಲಿನ ಬೆಳೆಗಾರರು ನಷ್ಟ ಅನುಭವಿಸುತ್ತಿದ್ದಾರೆ. ಸಾರ್ವಜನಿಕ ಸೇವೆಗೆ ಸದಾ ತನ್ನನ್ನು ತೊಡಗಿಸಿಕೊಂಡಿರುವ ಶಾಸಕ ಪೊನ್ನಣ್ಣ ಅವರಿಗೆ ರಾಜ್ಯ ಸಂಪುಟದಲ್ಲಿ ಸಚಿವ ಸ್ಥಾನ ನೀಡಿದರೆ ಜಿಲ್ಲೆಯ ಅಭಿವೃದ್ಧಿಯಾಗುತ್ತದೆ ಎಂದು ಹೇಳಿದರು.

ಉಪಾಧ್ಯಕ್ಷ ಚಂದ್ರಶೇಖರ್ ರಾಜ, ಕಾರ್ಯದರ್ಶಿ ಪುಗ್ಗೆರ ನಂದಾ, ಖಜಾಂಚಿ ತೋರೆರ ಪೂವಯ್ಯ, ಮಾಜಿ ಸೈನಿಕರ ಕಾಂಗ್ರೆಸ್ ಸೆಲ್‌ನ ಜಿಲ್ಲಾಧ್ಯಕ್ಷ ಬಾಳೆಕುಟ್ಟಿರ ದಿನಿ ಬೋಪಯ್ಯ, ನಿರ್ದೇಶಕರಾದ ಚೇಂದ್ರಿಮಾಡ ನಂಜಪ್ಪ, ಪಟ್ರಪಂಡ ಕರುಂಬಯ್ಯ, ಎಂ.ಕೆ ಸಲಾಂ ಕಡಂಗ, ಕಬ್ಬಚಿರ ಬೋಪಣ್ಣ, ಹೆಚ್.ಕೆ ಅಪ್ಪಯ್ಯ ಉಪಸ್ಥಿತರಿದ್ದರು.

ಇಂದಿನಿಂದ ಜನಸಂಪರ್ಕ ಸಭೆ

ಮಡಿಕೇರಿ: ಗೋಣಿಕೊಪ್ಪ ಉಪ ವಿಭಾಗ ವ್ಯಾಪ್ತಿಯ ವಿದ್ಯುತ್ ಗ್ರಾಹಕರ ಕುಂದು ಕೊರತೆ ನಿವಾರಣಾ ಸಭೆಯು ಜೂ.4ರ ಬೆಳಗ್ಗೆ 11.30ರಿಂದ 12.30 ರವರೆಗೆ ಕಚೇರಿ ಆವರಣದಲ್ಲಿ ನಡೆಯಲಿದೆ. ವಿರಾಜಪೇಟೆ ಉಪ ವಿಭಾಗ ವ್ಯಾಪ್ತಿಯ ಸಭೆಯು ಅದೇ ದಿನ ಮಧ್ಯಾಹ್ನ 2.30 ರಿಂದ 3.30ರವರೆಗೆ ನಡೆಯಲಿದೆ.

ಸೋಮವಾರಪೇಟೆ: ಜೂ.5ರ ಬೆಳಗ್ಗೆ 11.30 ಗಂಟೆಯಿಂದ 12.30 ಗಂಟೆವರೆಗೆ ಉಪ ವಿಭಾಗ ಕಚೇರಿ ಆವರಣದಲ್ಲಿ ನಡೆಯಲಿದೆ. ಹಾಗೆಯೇ ಕುಶಾಲನಗರ ಉಪ ವಿಭಾಗ ವ್ಯಾಪ್ತಿಯ ಸಭೆಯು ಅದೇ ದಿನ ಮಧ್ಯಾಹ್ನ 2.30ರಿಂದ 3.30ರವರೆಗೆ ಉಪ ವಿಭಾಗ ಕಚೇರಿ ಆವರಣದಲ್ಲಿ ನಡೆಯಲಿದೆ.

ಮಡಿಕೇರಿ: ಜೂ.6 ರಂದು ಮಧ್ಯಾಹ್ನ 2.30 ಗಂಟೆಯಿಂದ 3.30 ಗಂಟೆವರೆಗೆ ಉಪವಿಭಾಗ ಕಚೇರಿ ಆವರಣದಲ್ಲಿ ನಡೆಯಲಿದೆ. ಈ ಎಲ್ಲಾ ಸಭೆಗಳು ಮಡಿಕೇರಿಯ ಸೆಸ್ಕಾಂ ವಿದ್ಯುತ್ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಗೋಣಿಕೊಪ್ಪ, ವಿರಾಜಪೇಟೆ, ಸೋಮವಾರಪೇಟೆ, ಕುಶಾಲನಗರ, ಮಡಿಕೇರಿ ವ್ಯಾಪ್ತಿಯ ಸಾರ್ವಜನಿಕರು ವಿದ್ಯುತ್ ಗ್ರಾಹಕರ ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಸಮಸ್ಯೆ ಅಥವಾ ದೂರುಗಳು ಇದ್ದಲ್ಲಿ, ಸಭೆಯಲ್ಲಿ ಚರ್ಚಿಸಿ ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸೆಸ್ಕಾಂನ ಪ್ರಕಟಣೆ ತಿಳಿಸಿದೆ.

ನೂತನ ಸಂಪುಟದಲ್ಲಿ ಗಡಿ ಜಿಲ್ಲೆಗಿಲ್ಲ ಪ್ರಾತಿನಿಧ್ಯ

ಎರಡನೇ ಪಟ್ಟಿಯಲ್ಲಿ ಅವಕಾಶ ದೊರೆಯುವ ಆಶಾಭಾವನೆ

> ಜಿಲ್ಲೆಯ ಮೂವರು ಶಾಸಕರ ಪೈಕಿ ಯಾರೇ ಸಚಿವರಾದರೂ ಸ್ವಾಗತಿಸುತ್ತೇನೆ. ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಸ್ಥಳೀಯರಿಗೆ ಅವಕಾಶ ದೊರೆಯಬೇಕು. ಪಕ್ಷದ ವರಿಷ್ಠರು ಮೊದಲ ಪಟ್ಟಿಯಲ್ಲಿ ಹಿರಿಯ ನಾಯಕರನ್ನು ಸಂಪುಟಕ್ಕೆ ಸೇರ್ಪಡೆ ಮಾಡಿಕೊಂಡಿದ್ದಾರೆ. ಎರಡನೇ ಪಟ್ಟಿಯಲ್ಲಿ ಜಿಲ್ಲೆಗೆ ಅವಕಾಶ ದೊರೆಯುವ ಆಶಾಭಾವನೆಯಿದೆ.
>
> –ಪಿ. ಮರಿಸ್ವಾಮಿ, ಅಧ್ಯಕ್ಷರು, ಜಿಲ್ಲಾ ಕಾಂಗ್ರೆಸ್.

ಚಾಮರಾಜನಗರ(ಸಿದ್ದಲಿಂಗಸ್ವಾಮಿ): ಡಿ.ಕೆ.ಶಿವಕುಮಾರ್ ನೇತೃತ್ವದ ನೂತನ ಸರ್ಕಾರದ ಸಚಿವ ಸಂಪುಟದ ಮೊದಲ ಪಟ್ಟಿಯಲ್ಲಿ ಗಡಿ ಜಿಲ್ಲೆ ಚಾಮರಾಜನಗರಕ್ಕೆ ಪ್ರಾತಿನಿಧ್ಯತೆ ದೊರೆತಿಲ್ಲ. ಹೀಗಾಗಿ ಜಿಲ್ಲೆಯ ರಾಜಕೀಯ ವಲಯದಲ್ಲಿ ಅಸಮಾಧಾನದ ಮಾತುಗಳು ಕೇಳಿ ಬರುತ್ತಿವೆ. ಆದರೆ, ಎರಡನೇ ಪಟ್ಟಿಯಲ್ಲಾದರೂ ಸಂಪುಟದಲ್ಲಿ ಜಿಲ್ಲೆಗೆ ಅವಕಾಶ ದೊರೆಯುವ ಸಾಧ್ಯತೆಯಿದೆ ಎಂಬ ಆಶಾಭಾವನೆ ವ್ಯಕ್ತವಾಗುತ್ತಿದೆ.

ಮುಂದುವರೆದ ಲಾಭಿ ಡಿ.ಕೆ. ಶಿವಕುಮಾರ್ ನೇತೃತ್ವದ ನೂತನ ಸರ್ಕಾರದ ಸಂಪುಟದಲ್ಲಿ ಅವಕಾಶ ಪಡೆಯಲು ಜಿಲ್ಲೆಯ ಶಾಸಕರು ನವದೆಹಲಿಯಲ್ಲಿ ಕಾಂಗ್ರೆಸ್‌ನ ಹೈಕಮಾಂಡ್ ಮಟ್ಟದಲ್ಲಿ ತೀವ್ರ ಲಾಭಿ ನಡೆಸುತ್ತಿದ್ದಾರೆ. ಈಗಾಗಲೇ ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ಕಳೆದೊಂದು ವಾರದಿಂದ ಬೆಂಗಳೂರು, ದೆಹಲಿಗೆ ನಿರಂತರವಾಗಿ ತೆರಳಿ ಪಕ್ಷದ ಹೈಕಮಾಂಡ್ ಭೇಟಿ ಮಾಡಿ ನೂತನ ಸಂಪುಟದಲ್ಲಿ ಅವಕಾಶ ನೀಡುವಂತೆ ಮನವಿ ಮಾಡಿಕೊಂಡಿದ್ದಾರೆ.

ಮತ್ತೊಂದೆಡೆ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರು ಕೂಡ ಕಳೆದ ನಾಲ್ಕೈದು ದಿನಗಳಿಂದ ಬೆಂಗಳೂರಿನಲ್ಲಿಯೇ ವಾಸ್ತವ್ಯ ಹೂಡಿ ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಪಕ್ಷದ ಹಿರಿಯ ನಾಯಕರ ಮನವೊಲಿಸುತ್ತಿದ್ದಾರೆ.

ಅಭಿಮಾನಿಗಳು, ಬೆಂಬಲಿಗರಿಂದ ಒತ್ತಾಯ: ಸಿದ್ದರಾಮಯ್ಯ ಅವರು ತಮ್ಮ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಜಿಲ್ಲೆಯ ರಾಜಕೀಯ ವಲಯದಲ್ಲಿ ಸಾಕಷ್ಟು ವಿದ್ಯಮಾನಗಳು ನಡೆಯುತ್ತಿದ್ದು, ಜಿಲ್ಲೆಯ ಹಿರಿಯ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಹಾಗೂ ಎ.ಆರ್. ಕೃಷ್ಣಮೂರ್ತಿ ಅವರ ಪರವಾಗಿ ಬೆಂಬಲಗರು ಪ್ರತ್ಯೇಕ ಸುದ್ದಿಗೋಷ್ಠಿಗಳನ್ನು ನಡೆಸುವುದು, ದೇವಸ್ಥಾನಗಳಲ್ಲಿ ತಮ್ಮ– ತಮ್ಮ ನಾಯಕರಿಗೆ ಸಚಿವ ಸ್ಥಾನ ಲಭಿಸಲೆಂದು ವಿಶೇಷ ಪೂಜೆ ಸಲ್ಲಿಸುವುದು, ಭಾವಚಿತ್ರಗಳ ಪ್ರದರ್ಶನ ಮಾಡುವ ಮೂಲಕ ರಾಜ್ಯದ ಕಾಂಗ್ರೆಸ್ ನಾಯಕರು ಹಾಗೂ ಪಕ್ಷದ ಹೈಕಮಾಂಡ್ ಗಮನ ಸೆಳೆಯುವ ಕೆಲಸ ಮಾಡುತ್ತಿದ್ದಾರೆ.

ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಸತತ 4 ಬಾರಿ ಗೆಲುವು ದಾಖಲಿಸಿರುವ ಪುಟ್ಟರಂಗಶೆಟ್ಟಿ ಅವರು ರಾಜ್ಯದಲ್ಲೇ ಉಪ್ಪಾರ ಸಮುದಾಯದ ಏಕೈಕ ಶಾಸಕರಾಗಿದ್ದಾರೆ. ಅಲ್ಲದೇ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅತ್ಯಾಪ್ತರ ಗುಂಪಿನಲ್ಲಿಯೂ ಗುರುತಿಸಿಕೊಂಡಿದ್ದಾರೆ. ಅಲ್ಲದೇ ಗ್ರಾಮ ಪಂಚಾಯಿತಿ, ತಾಲೂಕು ಬೋರ್ಡ್, ಜಿಲ್ಲಾ ಪಂಚಾಯಿತಿಯಿಂದಲೂ ಕಾಂಗ್ರೆಸ್‌ನಿಂದಲೇ ಬಂದವರಾಗಿದ್ದು, ಸಾಕಷ್ಟು ಹಿರಿತನ, ಅನುಭವವುಳ್ಳ ರಾಜಕಾರಣಿಯಾಗಿದ್ದಾರೆ ಎನ್ನುವುದು ಪುಟ್ಟರಂಗಶೆಟ್ಟಿ ಬೆಂಬಲಿಗರ ಅಭಿಪ್ರಾಯ.

ಇನ್ನೂ ಕೊಳ್ಳೇಗಾಲ ಮೀಸಲು ಕ್ಷೇತ್ರದ ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರು ಜಿಲ್ಲೆಯ ಏಕೈಕ ದಲಿತ ಸಮುದಾಯದ ಶಾಸಕರು. ತಂದೆ ಬಿ. ರಾಚಯ್ಯ ಅವರ ಕಾಲದಿಂದಲೂ ರಾಜಕೀಯ ಬಲ್ಲವರಾಗಿದ್ದು, ಜಿಲ್ಲೆಯ ನಾಡಿಮಿಡಿತವನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ ಎನ್ನುವುದು ಶಾಸಕ ಎ.ಆರ್. ಕೃಷ್ಣಮೂರ್ತಿ ಬೆಂಬಲಿಗರ ಅಭಿಪ್ರಾಯವಾಗಿದೆ.

ಇಬ್ಬರಲ್ಲೊಬ್ಬರಿಗೆ ಅವಕಾಶ ಸಾಧ್ಯತೆ! ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ 2023ರಲ್ಲಿ ಅಧಿಕಾರಕ್ಕೆ ಬಂದ ಸಂದರ್ಭದಲ್ಲೇ ಜಿಲ್ಲೆಯ ಶಾಸಕರಿಗೆ ಸಚಿವ ಸ್ಥಾನ ನೀಡುತ್ತದೆಂಬ ನಿರೀಕ್ಷೆ ಮಾಡಲಾಗಿತ್ತು. ಆದರೆ, ಕೆಲವೊಂದು ರಾಜಕೀಯ ವಿದ್ಯಮಾನಗಳಿಂದ ಕೊನೆ ಕ್ಷಣದಲ್ಲಿ ಸಚಿವ ಸ್ಥಾನ ಕೈ ತಪ್ಪಿತ್ತು. ಈ ವೇಳೆ ಪಕ್ಷದ ವರಿಷ್ಠರು ಎರಡನೇ ಅವಧಿಯಲ್ಲಿ ಜಿಲ್ಲೆಗೆ ಅವಕಾಶ ನೀಡುವ ಭರವಸೆ ನೀಡಿದ್ದರು. ಅದರಂತೆ ಈ ಬಾರಿ ಜಿಲ್ಲೆಯ ಇಬ್ಬರು ಹಿರಿಯ ಶಾಸಕರ ಪೈಕಿ ಒಬ್ಬರಿಗಾದರೂ ಅವಕಾಶ ದೊರೆಯುವ ಸಾಧ್ಯತೆಯಿದೆ.

ಡಿಕೆಶಿ ಸಿಎಂ: ಚಾ.ನಗರದಲ್ಲಿ ಸಂಭ್ರಮಾಚರಣೆ



ಅಭಿಮಾನಿಗಳ ಬಳಗದ ವತಿಯಿಂದ ನಗರದಲ್ಲಿ ಸಂಭ್ರಮಾಚರಣೆ ಮಾಡಲಾಯಿತು.

ಚಾಮರಾಜನಗರ: ರಾಜ್ಯದ 25ನೇ ನೂತನ ಮುಖ್ಯಮಂತ್ರಿ ಆಗಿ ಡಿ.ಕೆ.ಶಿವಕುಮಾರ್ ಪದಗ್ರಹಣ ಸ್ವೀಕರಿಸಿದ ಹಿನ್ನೆಲೆಯಲ್ಲಿ ಅಭಿಮಾನಿಗಳ ಬಳಗದ ವತಿಯಿಂದ ನಗರದಲ್ಲಿ ಸಂಭ್ರಮಾಚರಣೆ ಮಾಡಲಾಯಿತು.

ಬೆಂಗಳೂರಿನ ವಿಧಾನಸೌಧದಲ್ಲಿ ನೂತನ ಮುಖ್ಯಮಂತ್ರಿ ಯಾಗಿ ಡಿ.ಕೆ.ಶಿವಕುಮಾರ್ ಪದಗ್ರಹಣ ಸ್ವೀಕರಿಸುತ್ತಿದ್ದಂತೆ ನಗರದ ಭುವನೇಶ್ವರಿ ವೃತ್ತದಲ್ಲಿ ಸಮಾವೇಶಗೊಂಡ ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿ ಹಂಚಿ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪರ ಜೈಕಾರ ಕೂಗಿ ಸಂಭ್ರಮಿಸಿದರು.

ಬಳಗದ ಪುಟ್ಟಸ್ವಾಮಿಗೌಡ ಮಾತನಾಡಿ, ರಾಜ್ಯದ 25ನೇ ಮುಖ್ಯಮಂತ್ರಿ ಆಗಿ ಡಿ.ಕೆ. ಶಿವಕುಮಾರ್ ಪದಗ್ರಹಣ ಸ್ವೀಕರಿಸಿದ ಹಿನ್ನಲೆಯಲ್ಲಿ ಅವರ ಅಭಿಮಾನಿಗಳಾದ ನಾವೆಲ್ಲರೂ ಪಟಾಕಿ ಸಿಡಿಸಿ, ಸಿಹಿಹಂಚಿ ಸಂಭ್ರಮಾಚರಣೆ ಮಾಡಲಾಗಿದೆ. ಅವರು ಎರಡು ವರ್ಷವೂ ಸಂಪೂರ್ಣವಾಗಿ ಆಡಳಿತ ನಡೆಸಿ, ಮುಂದಿನ ಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷ ಹೆಚ್ಚಿನ ಸ್ಥಾನಗಳೊಂದಿಗೆ ಅಧಿಕಾರ ಬರಲಿ, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಮತ್ತಷ್ಟು ಗಟ್ಟಿಯಾಗಲಿ ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಚಾ.ರಂ.ಶ್ರೀನಿವಾಸ ಗೌಡ, ಪಣ್ಯದಹುಂಡಿ ರಾಜು, ಅರುಣ್ ಕುಮಾರ್ ಗೌಡ, ಪುಟ್ಟಸ್ವಾಮಿ ಗೌಡ, ಸೋಮಶೇಖರ, ರವಿಗೌಡ, ಚಿನ್ನುಮುತ್ತು, ಚಿನ್ನಸ್ವಾಮಿ, ರಘು, ಜಯಪ್ರಕಾಶ್, ಸ್ವಾಮಿ, ಮರಿಸ್ವಾಮಿ, ಲೋಕೇಶ್, ಮಹೇಶ್ ಗೌಡ, ರಾಚಪ್ಪ, ಮಾದೇಶ್, ಕೃಷ್ಣಗೌಡ, ನಾಗರಾಜು ಇತರರು ಹಾಜರಿದ್ದರು.

ಇಂದಿನಿಂದ ಜೂ.6ರವರೆಗೆ ನಮ್ಮ ಚಾಮರಾಜನಗರ ಸಾಂಸ್ಕೃತಿಕ ಹಬ್ಬ

ಚಾಮರಾಜನಗರ, ಜೂ.3– ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂ ಗಾನಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಹಯೋಗದಲ್ಲಿ ಸಂಸ್ಥೆಯ 5ನೇ ವಾರ್ಷಿಕೋತ್ಸವ ಮತ್ತು ಡಾ. ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ಹುಟ್ಟುಹಬ್ಬದ ಅಂಗವಾಗಿ ಜೂ. 4 ರಿಂದ ಜೂ.6 ರವರಗೆ ನಗರದ ಡಾ.ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ನಮ್ಮ ಚಾಮರಾಜನಗರ ಸಾಂಸ್ಕೃತಿಕ ಹಬ್ಬ ವಿವಿಧ ಕ್ಷೇತವ ಸಾಧಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಕಾರ್ಯಕಮ ಹಮ್ಮಿಕೊಳ್ಳಲಾಗಿದೆ ಎಂದು ಎಸ್.ಪಿ.ಬಾಲಸುಬಹ್ಮಣ್ಯಂ ಗಾನಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ ಅಧ್ಯಕ್ಷ ಎಚ್.ಎಂ.ಶಿವಣ್ಣಹೇಳಿದರು.

ನಗರದ ಜಿಲ್ಲಾ ಕಾರ್ಯ ನಿರತ ಪತ್ರಕರ್ತರ ಸಂಘದ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜೂ. 4 ರಂದು ಬೆಳಗ್ಗೆ 8.30ಕ್ಕೆ ಗಿಡ ನೆಡುವ ಕಾರ್ಯಕ್ರಮ, ಜೂ.5ರಂದು ಉತ್ತುವಳ್ಳಿಯ ಆಶ್ರಯ ಸೇವಾ ಟ್ರಸ್ಟ್‌ನ ವೃದ್ಧರಿಗೆ ಊಟದ ವ್ಯವಸ್ಥೆ ಮತ್ತು ಜೂ.6 ರಂದು ಮಧ್ಯಾಹ್ನಕ್ಕೆ ನಡೆಯುವ ನಮ್ಮ ಚಾಮರಾಜನಗರ ಸಾಂಸ್ಕೃತಿಕ ಹಬ್ಬ ಕಾರ್ಯಕ್ರಮವನ್ನು ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಉದ್ಘಾಟಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಇದೇ ವೇಳೆ ಜಿಲ್ಲೆಯ ಜಾನಪದ ಕಲಾವಿದರಿಂದ ಜಾನಪದ ಗೀತಗಾಯನ, ರಂಗಗೀತ, ಸೋಬಾನೆ ಪದ, ಕನ್ನಡ ಗೀತಾಗಾಯನ ಕಾರ್ಯಕ್ರಮ ನಡೆಯಲಿದೆ. ಯಳಂದೂರು ಅಶ್ವಿನಿ ಆಸ್ಪತ್ರೆಯ ಡಾ.ರಮೇಶ್ ಉಡುಪ, ಡಾ.ಶಶಿಕಲಾ ರಮೇಶ್ ಅವರಿಗೆ ಗಡಿನಾಡ ವೈದ್ಯರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ ಎಂದರು.

ಮೂರು ದಿನಗಳ ಕಾಲ ನಡೆಯುವ ನಮ್ಮ ಚಾಮರಾಜನಗರ ಸಾಂಸ್ಕೃತಿಕ ಹಬ್ಬ ಕಾರ್ಯಕ್ರಮಕ್ಕೆ ಜಿಲ್ಲೆಯ ಸಾರ್ವಜನಿಕರು, ಕಲಾವಿದರು ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ಗೋಷ್ಠಿಯಲ್ಲಿ ಎಸ್.ಪಿ.ಬಾಲ ಸುಬ್ರಹ್ಮಣ್ಯಂ ಗಾನಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ ಉಪಾಧ್ಯಕ್ಷ ವಸಂತ ಬಂಗಾರು ಕಲಾವಿದ ಶಿವಶಂಕರ್, ಲಿಂಗರಾಜು, ಕಲೆನಟರಾಜು ಹಾಜರಿದ್ದರು.

ಶಾಲಾ ಮಕ್ಕಳಿಗೆ ನೋಟ್‌ಬುಕ್, ಲೇಖನಿ ನೀಡಿ ಆರ್‌ಸಿಬಿ ಗೆಲುವಿನ ಸಂಭ್ರಮಾಚರಣೆ



ಚಾಮರಾಜನಗರ: ಐಪಿಎಲ್ ಟೂರ್ನಿಯಲ್ಲಿ ಬೆಂಗಳೂರು ರಾಯಲ್ ಚಾಲೆಂಜರ್ ಸತತ ಎರಡನೇ ಬಾರಿಗೆ ಟ್ರೋಫಿ ಮುಡಿಗೇರಿಸಿಕೊಂಡ ಹಿನ್ನೆಲೆಯಲ್ಲಿ ಅರ್‌ಸಿಬಿ ಅಭಿಮಾನಿಗಳು, ತಾಲೂಕಿನ ಕೋಡಿಮೋಳೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ನೋಟ್ ಬುಕ್, ಲೇಖನ ಸಾಮಾಗ್ರಿ ವಿತರಣೆ ಮಾಡುವ ಮೂಲಕ ಬೆಂಗಳೂರು ರಾಯಲ್ ಚಾಲೆಂಜರ್ ಗೆಲುವನ್ನು ಸಂಭ್ರಮಿಸಿದರು.

ಇದೇ ವೇಳೆ ಶಾಲಾ ಮುಖ್ಯ ಶಿಕ್ಷಕಿ ರತ್ನಮ್ಮ ಮಾತನಾಡಿ. ವಿದ್ಯಾರ್ಥಿಗಳು ಓದಿನ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ, ಸಾಧನೆ ಮಾಡುವ ಮೂಲಕ ನಮ್ಮ ಜಿಲ್ಲೆಗೆ ಕೀರ್ತಿ ತರಬೇಕು ಎಂದರು

ಈ ಸಂಧರ್ಭದಲ್ಲಿ ಸಿಆರ್ ಪಿ ಹೇಮಾ, ಸಹಶಿಕ್ಷಕರು, ಭಗತ್ ಸಿಂಗ್ ಯುವಸೇನೆ ಅಧ್ಯಕ್ಷ ಕಾಂತರಾಜ್, ಮಣಿ. ರಂಗಸ್ವಾಮಿ, ಮಹೇಶ್, ದೊರೆಸ್ವಾಮಿ. ರವಿ. ವಿಕುಂಠ ಪ್ರಸಾದ್ ಸೇರಿದಂತೆ ವಿದ್ಯಾರ್ಥಿಗಳು ಹಾಜರಿದ್ದರು.

ನೂತನ ಸಿಎಂ ಡಿ.ಕೆ.ಶಿವಕುಮಾರ್ ಪದಗ್ರಹಣ ಅಭಿಮಾನಿಗಳ ಸಂಭ್ರಮಾಚರಣೆ

ಚಾಮರಾಜನಗರ: ರಾಜ್ಯದ 25ನೇ ನೂತನ ಮುಖ್ಯಮಂತ್ರಿ ಆಗಿ ಡಿ.ಕೆ.ಶಿವಕುಮಾರ್ ಪದಗ್ರಹಣ ಸ್ವೀಕರಿಸಿದ ಹಿನ್ನೆಲೆಯಲ್ಲಿ ಅಖಿಲ ಕರ್ನಾಟಕ ಡಿ.ಕೆ.ಶಿವಕುಮಾರ್ ಅಭಿಮಾನಿಗಳ ಸಂಘದ ವತಿಯಿಂದ ನಗರದಲ್ಲಿ ಸಂಭ್ರಮಾಚರಣೆ ಮಾಡಲಾಯಿತು.



ಅಖಿಲ ಕರ್ನಾಟಕ ಡಿ.ಕೆ.ಶಿವಕುಮಾರ್ ಅಭಿಮಾನಿಗಳ ಸಂಘದ ವತಿಯಿಂದ ನಗರದಲ್ಲಿ ಸಂಭ್ರಮಾಚರಣೆ.

ಬೆಂಗಳೂರಿನ ವಿಧಾನಸೌಧದಲ್ಲಿ ನೂತನ ಮುಖ್ಯಮಂತ್ರಿ ಆಗಿ ಡಿ.ಕೆ.ಶಿವಕುಮಾರ್ ಪದಗ್ರಹಣ ಸ್ವೀಕರಿಸುತ್ತಿದ್ದಂತೆ ನಗರದ ಭುವನೇಶ್ವರಿ ವೃತ್ತದಲ್ಲಿ ಅಖಿಲ ಕರ್ನಾಟಕ ಡಿ.ಕೆ.ಶಿವಕುಮಾರ್ ಅಭಿಮಾನಿಗಳ ಸಂಘದ ಜಿಲ್ಲಾಧ್ಯಕ್ಷ ದಿಲೀಪ್ ಕುದರ್, ತಾಲೂಕು ಅಧ್ಯಕ್ಷ ಸಿದ್ದರಾಜು ದೊಡ್ಡರಾಯಪೇಟೆ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಅಭಿಮಾನಿಗಳು ಡಿ.ಕೆ.ಶಿವಕುಮಾರ್ ಭಾವಚಿತ್ರ ಹಿಡಿದು ಪಟಾಕಿ ಸಿಡಿಸಿ, ಸಿಹಿಹಂಚಿ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪರ ಜೈಕಾರ ಕೂಗಿ ಸಂಭ್ರಮಿಸಿದರು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಅಖಿಲ ಕರ್ನಾಟಕ ಡಿ.ಕೆ.ಶಿವಕುಮಾರ್ ಅಭಿಮಾನಿಗಳ ಸಂಘ ಜಿಲ್ಲಾಧ್ಯಕ್ಷ ದಿಲೀಪ್ ಕುದರ್, ತಾಲೂಕು ಅಧ್ಯಕ್ಷ ಸಿದ್ದರಾಜು ಮಾತನಾಡಿ, ರಾಜ್ಯದ 25ನೇ ಮುಖ್ಯಮಂತ್ರಿ ಆಗಿ ಡಿ.ಕೆ.ಶಿವಕುಮಾರ್ ಪದಗ್ರಹಣ ಸ್ವೀಕರಿಸಿದ ಹಿನ್ನಲೆಯಲ್ಲಿ ಅವರ ಅಭಿಮಾನಿಗಳಾದ ನಾವೆಲ್ಲರೂ ಪಟಾಕಿ ಸಿಡಿಸಿ, ಸಿಹಿ ಸಂಭ್ರಮಾಚರಣೆ ಮಾಡಲಾಗಿದೆ. ಇತ್ತೀಚೆಗೆ ಡಿ.ಕೆ.ಶಿವಕುಮಾರ್ ಅವರ ಹುಟ್ಟುಹಬ್ಬದ ಅಂಗವಾಗಿ ನಗರದ ಶ್ರೀಚಾಮರಾಜೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ಅವರಿಗೆ ಹೆಚ್ಚಿನ ಆರೋಗ್ಯ, ಆಯಸ್ಸು ಕರುಣಿಸಿ ಮುಂದಿನ ಮುಖ್ಯಮಂತ್ರಿಯಾಗಲಿ ಎಂದು ಪ್ರಾರ್ಥನೆ ಸಲ್ಲಿಸಲಾಗಿತ್ತು. ಅವರ ಅಧಿಕಾರ ಅವಧಿ ಯಶಸ್ವಿಯಾಗಲಿ. ರಾಜ್ಯ ದಲ್ಲಿ ಉತ್ತಮ ಆಡಳಿತ ನಡೆಸಿ ಜನಪರ ಕಾರ್ಯಕ್ರಮ ಗಳನ್ನು ಜಾರಿಗೆ ತಂದು ದೇಶಕ್ಕೆ ಮಾದು ಮುಖ್ಯಮಂತ್ರಿಆಗಲಿ ಎಂದು ಆಶಿಸಿದು.

ಮುಂದಿನ ಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷ ಹೆಚ್ಚಿನ ಸ್ಥಾನಗಳೊಂದಿಗೆ ಅಧಿಕಾರ ಬರಲಿ, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಮತ್ತಷ್ಟು ಗಟ್ಟಿಯಾಗಲಿ ಎಂದು ಆಶಿಸಿದರು. ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಡಿ.ಕೆ.ಶಿವಕುಮಾರ್ ಅಭಿಮಾನಿಗಳ ಸಂಘದ ಪ್ರಶಾಂತ್, ಲೋಹಿತ್ ಅಪ್ಪು, ಉಮಾಪತಿ, ನವೀನ್ ಕ್ವಾಲಿಟಿ, ಪುರುಷೋತ್ತಮ, ಶಿವಶಂಕರ್, ನವೀನ್, ಉಮ್ಮತ್ತೂರು ಚಂದ್ರು, ಜಗದೀಶ್ ಉತ್ತುವಳ್ಳಿ, ಗೋವಿಂದ ಗೌಡ, ನಲ್ಲೂರು, ಹರೀಶ್, ಮಹೇಶ್ ಮಂಜು, ಮನೋಜ್, ನಾಗರಾಜು, ರಮೇಶ್ ಆನಂತ್ ಕುಮಾರ್, ಉಮೇಶ್, ಮಂಜು, ಮಣಿಕಂಠ ಮಾಸ್ಟರ್, ಸುನೀಲ್, ಮನೋಜ್, ಪುಟ್ಟಸ್ವಾಮಿ, ಇಂದ್ರೇಶ್ ಇತರರು ಭಾಗವಹಿಸಿದ್ದರು.

ಹರದನಹಳ್ಳಿ ಡೈರಿ ಅಧ್ಯಕ್ಷರಾಗಿ ರಾಚನಾಯಕ, ಉಪಾಧ್ಯಕ್ಷರಾಗಿ ವೆಂಕಟೇಶ್ ಆಯ್ಕೆ

ಚಾಮರಾಜನಗರ: ತಾಲೂಕಿನ ಹರದನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ರಾಚನಾಯಕ, ಉಪಾಧ್ಯಕ್ಷರಾಗಿ ವೆಂಕಟೇಶ್ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಕಚೇರಿಯಲ್ಲಿ ಬುಧವಾರ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ರಾಚನಾಯಕ, ಉಪಾಧ್ಯಕ್ಷ ಸ್ಥಾನಕ್ಕೆ ವೆಂಕಟೇಶ್ ನಾಮಪತ್ರ ಸಲ್ಲಿಸಿದರು. ಈ ಸ್ಥಾನಗಳಿಗೆ ಬೇರೆ ಯಾರು ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಚುನಾ ವಣಾಧಿಕಾರಿಯಾಗಿದ್ದ ಎಸ್.ನಾಗೇಶ್ ನೂತನ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆ ಘೋಷಿಸಿದರು.



ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

ಸಂಕಲ್ಪ ಟೂರ್ಸ್ ಅಂಡ್ ಟ್ರಾವೆಲ್ಸ್, ಮೈಸೂರು.
ತಿರುಪತಿ, ತಿರುಮಲ, ಕಾಳಹಸ್ತಿ ಪ್ಯಾಕೇಜ್ 12th June ಹೊರಡುವುದು. ಎರಡು ದಿನದ ಪ್ರವಾಸ
ಕೆ.ಡಿ.ಸರ್ಕಲ್, ವಿಜಯನಗರ, 2ನೇ ಹಂತ
ಸಂಪರ್ಕಿಸಿ : 8197998916/ 9036960777/9844403259

ವಿಮಾನದಲ್ಲಿ ಚಾರ್‌ಧಾಮ್ ಯಾತ್ರೆ
ದಿನಾಂಕ: 16.09.2026 ರಿಂದ 12 ದಿನಗಳ ಪ್ರವಾಸ, ಊಟ, ವಸತಿ, ವಿಮಾನದ ಟಿಕೆಟ್ ಎಲ್ಲಾ ಸೇರಿ ಒಂದು ಸೀಟಿಗೆ 52,000 /– ರೂ. ಮಾತ್ರ
ಸ್ಥಳಗಳು:ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದ್ರಿನಾಥ್ ಇತ್ಯಾದಿ ಕರ್ನಾಟಕ ಸರ್ಕಾರದ ಅನುದಾನ 20,000 ದೊರೆಯಲಿದೆ.
ಸಂಪರ್ಕಿಸಿ: ಮಾರ್ವೆಲ್ ಟ್ರಾವೆಲ್ಸ್, ನಜರ್‌ಬಾದ್, ಮೈಸೂರು
9449128682

SITE FOR SALE
ವಿಜಯನಗರ 4ನೇ ಹಂತ ಪಕ್ಕದ "ಶೌರ್ಯ ಲೇಔಟ್" 30x36 North Face ಸೈಟ್. ಬೆಲೆ: 46 ಲಕ್ಷ
Mob: 9886048471

HOUSE FOR SALE
MDA APPROVED 3 BHK UNDER CONSTRUCTION 30x50 (odd) East facing. Near Christ Public School
Mob: 7349124433

Arokah Designs Studio -ARCHITECTS-
ನಿಮ್ಮ ಕನಸಿನ ಮನೆ ಕಟ್ಟಲು ಆರ್ಕಿಟೆಕ್ಟ್ ಡಿಸೈನರ್ ಹುಡುಕುತ್ತಿದ್ದರೆ. ಇಂದೇ ನಮ್ಮನ್ನು ಸಂಪರ್ಕಿಸಿ. & ಕಡಿಮೆ ಶುಲ್ಕದಲ್ಲಿ ಆರ್ಕಿಟೆಕ್ಟ್ ಡಿಸೈನ್ ಸೇವೆಗಳನ್ನು ಪಡೆಯಿರಿ.
Architectural Designs Fees = Architectural Floor Plans = 2999/- Elevations & 3D Designs = 7999/-
Kuvempunagar, Mysore
9187046167

ಪ್ರವಾಸ
ಪ್ರತಿ 4ನೇ ಶನಿವಾರ – 1 ದಿನದ ಪ್ರವಾಸ ರೈಲು ಮತ್ತು ಬಸ್‌ನಲ್ಲಿ ಸಿಗಂದೂರ್ – ಕೊಲ್ಲೂರು – ಕಮಲಶಿಲೆ ದುರ್ಗಾ ಪರಮೇಶ್ವರಿ. ಟ್ರೈನ್ / ಬಸ್ / ಊಟ / ಎಲ್ಲಾ ಸೇರಿ ಒಬ್ಬರಿಗೆ 2300/–.
ಸಂಪರ್ಕಿಸಿ: ಗ್ಲೋಬಲ್ ಟೂರ್ಸ್
Mob: 96867 43337

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

ರೈಲಿನಲ್ಲಿ ಕಾಶಿ ಯಾತ್ರೆ
ದಿನಾಂಕ: 28.06.2026 ರಿಂದ 10 ದಿನಗಳ ಪ್ರವಾಸ, ಊಟ / ತಿಂಡಿ, ಎ.ಸಿ. ಬಸ್, ಎ.ಸಿ. ರೂಂ ಎಲ್ಲಾ ಸೇರಿ 13,000 /_ ರೂ. ಮಾತ್ರ
ಪ್ರಯಾಗ್ ರಾಜ್, ಕಾಶಿ, ಸಾರಾನಾಥ್, ಗಯಾ, ಬೋದ್‌ಗಯಾ, ಅಯೋಧ್ಯೆ, ಇತ್ಯಾದಿ
ಸಂಪರ್ಕಿಸಿ: ಮಾರ್ವೆಲ್ ಟ್ರಾವೆಲ್ಸ್, ನಜರ್‌ಬಾದ್, ಮೈಸೂರು
9449128682

ಶಿಕ್ಷಕಿಯರು ಬೇಕಾಗಿದ್ದಾರೆ
NST = 02
D.Ed/B.Ed = 02
PET = 01
8147472526

ಸೈಟು ಮಾರಾಟಕ್ಕಿದೆ
20x30 E/F, 37 ಲಕ್ಷ ರೂಪನಗರ ಪಕ್ಕ, ಪುಷ್ಪ ಲೇಔಟ್
30x40 E/F, 38 ಲಕ್ಷ ಸುವರ್ಣನಗರ ಪಕ್ಕ, ಬೋಗಾದಿ
9845765573

ಜಮೀನು ಬೇಕಾಗಿದೆ
ಹಳೇ ಮೈಸೂರು ಪ್ರಾಂತ್ಯದಲ್ಲಿ ಜಮೀನು ಬೇಕಾಗಿದೆ
98453 95000
98451 04048
ಭೂಮಿಪುತ್ರ

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ಬೇಕಾಗಿದ್ದಾರೆ
ಆಶ್ರಮದಲ್ಲಿ ಉಳಿದುಕೊಂಡು ಕೆಲಸ ಮಾಡುವಂಥವರು , ಮಹಿಳೆಯರು ಬೇಕಾಗಿದ್ದಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಫೇಲ್ /ಪಾಸ್ ಊಟ ವಸತಿ ದೊರೆಯುತ್ತದೆ
9110455297

HOUSE FOR SALE
40x40 South East Corner Ground Floor 2 BHK, 1st Floor Single BHK (3 BHK) Dattagalli, 3rd Stage Near Rotary west school or Ring road, Mysore. Door. No 3773/A, 1 Cr 70 Lakhs
9845146364

ವೃದ್ಧಾಶ್ರಮ
ಪಾರ್ಶ್ವವಾಯು ಪೀಡಿತರು, ಹಾಸಿಗೆ ಹಿಡಿದವರು ಮತ್ತು ವಯಸ್ಸಾದ ವೃದ್ಧರನ್ನು ಸುಸಜ್ಜಿತವಾದ ಸ್ಥಳದಲ್ಲಿ ಇರಿಸಿಕೊಂಡು ನೋಡಿಕೊಳ್ಳುತ್ತೇವೆ. ಶುದ್ಧತೆ, ಶುದ್ಧ ಆಹಾರ ಮತ್ತು ಮೆಡಿಕಲ್ ಸೌಲಭ್ಯ ನಮ್ಮ ಮೊದಲ ಆದ್ಯತೆ. ಸ್ಥಳ: ಮೈಸೂರು
9916905188

ಬೇಕಾಗಿದ್ದಾರೆ
PGಯಲ್ಲಿ ಅಡುಗೆ ಮಾಡುವವರು (SOUTH INDIAN COOK) ಮತ್ತು ಅಡುಗೆ ಸಹಾಯಕಿ 2 MEMBERS ಹಾಗೂ ವಾರ್ಡನ್ 2 ಕೆಲಸಕ್ಕೆ ಮತ್ತು HOUSEKEEPING 3 ಮಹಿಳೆಯರು ಬೇಕಾಗಿದ್ದಾರೆ. ಕಡ್ಡಾಯವಾಗಿ PG ಯಲ್ಲೇ ಉಳಿಯಬೇಕು. ಊಟ ವಸತಿ ಇರುತ್ತದೆ.
9986622769
9900944982

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಮತ್ತು ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಹಾಗೂ ಎಲೆಕ್ಟ್ರಿಷಿಯನ್ ಬೇಕಾಗಿದ್ದಾರೆ. ವಿಜಯನಗರ, ಬೋಗಾದಿ, ಮೇಟಗಳ್ಳಿ, ಕೆ.ಡಿ. ರೋಡ್ ಹಾಗೂ ಮೈಸೂರು ಸುತ್ತಮುತ್ತ.
9538886328
7795104543

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೋಮ ಇನ್ ಹೆಲ್ತ್ ಕೇರ್ ತರಬೇತಿ (DMLT) ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರಿಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಪಕ್ಕ, ಮೈಸೂರು
9916908454

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Anikethana Road, kuvempunagar, Mysuru
MYSURU 9591311161 MANGALORE 9901910161

9 ದಿನಗಳ ಅಯೋಧ್ಯಾ, ನೇಪಾಳ ಮುಕ್ತಿನಾಥ ಪ್ರವಾಸ 12/6/26 * 7 ದಿನಗಳ ಕಾಶಿ ಗಯಾ ಅಯೋಧ್ಯಾ ಬಾಬಾ ಬೈದ್ಯನಾಥ ಪ್ರವಾಸ 15/6/26 * 9 ದಿನಗಳ 3 ಸಿಸ್ಟರ್ ಅಸ್ಸಾಂ ಮೇಘಾಲಯ ಅರುಣಾಚಲ್ ಪ್ರದೇಶ 1/7/26 * 13 ದಿನಗಳ ಚಾರ್‌ಧಾಮ್ ಪ್ರವಾಸ 26/8/26 * 7 ದಿನಗಳ ಕೇರಳ ಪ್ರವಾಸ 18/9/26 * 7 ದಿನಗಳ ಅಂಡಮಾನ್ ಪ್ರವಾಸ 2/9/26 * 7 ದಿನಗಳ ತಮಿಳುನಾಡು ಪ್ರವಾಸ 17/8/26 * 8 ದಿನಗಳ ಗುಜರಾತ್ ಪ್ರವಾಸ 5/8/26 * 9 ದಿನಗಳ ರಾಜಸ್ಥಾನ್ 24/8/26
ಸುವರ್ಣ ಯಾತ್ರಾ
6360146483, 9008381022

ಬೇಕಾಗಿದ್ದಾರೆ
ಮೈಸೂರಿನ ಕುವೆಂಪುನಗರದ ಮನೆಯೊಂದರಲ್ಲಿ ರುಚಿ ಮತ್ತು ಶುಚಿಯಾಗಿ ವೆಜ್ ಮತ್ತು ನಾನ್‌ವೆಜ್ ಅಡುಗೆಯನ್ನು ಸಾಂಪ್ರದಾಯಕ ಶೈಲಿಯಲ್ಲಿ ಮಾಡಿಕೊಡಲು ನುರಿತ, ತಾಳ್ಮೆಯ ಮಹಿಳಾ ಕುಕ್ ಬೇಕಾಗಿದ್ದಾರೆ. ಸಂಪರ್ಕಿಸಿ
9972187247
ಆಕರ್ಷಕ ಸಂಬಳದೊಂದಿಗೆ, ಆದ್ಯತೆ : ಹತ್ತಿರದವರು ಮತ್ತು ದ್ವಿಚಕ್ರ ವಾಹನ ಇರುವವರಿಗೆ

ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. (For 8 Hours Male candidates only) ಉತ್ತಮ ವೇತನ, ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿರುತ್ತದೆ. ವಯಸ್ಸಿನ ಮಿತಿ–50ರ ಒಳಗೆ. ಸ್ಥಳ: ಕಡಕೋಳ ಕೈಗಾರಿಕ ನಗರ ಮತ್ತು ಹೆಬ್ಬಾಳು ಕೈಗಾರಿಕ ನಗರ ಮೈಸೂರು.
9986748497
9886200104

475 ACRES LAND FOR SALE – BELTANGADY
Premium agricultural & commercial estate near Dharmasthala, Gandibagilu. Rubber, arecanut, coconut, teak, cashew plantations with river surroundings. Suitable for resorts, schools, hospitals, eco projects & investments. Price: Rs.85 Cr.
Contact: BR.SHYAM.B@GMAIL.COM

HOUSE FOR RENT
ಮನೆ ಬಾಡಿಗೆಗೆ ಮತ್ತು ಭೋಗ್ಯಕ್ಕೆ ವಿದ್ಯಾರಣ್ಯಪುರಂ, ಜೆ.ಪಿ ನಗರ ಸರಸ್ವತಿಪುರಂ, ಕುವೆಂಪುನಗರ ರಾಮಕೃಷ್ಣನಗರ ಸುತ್ತಮುತ್ತ
9902506368

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 91080 48064

ಗ್ರಾವೆಲ್, ಕೆಮ್ಮಣ್ಣು ದೊರೆಯುತ್ತದೆ
ಜಮೀನು 10 ಗುಂಟೆ, 5 ಗುಂಟೆ, 20 ಗುಂಟೆ, ಬೇಕಾದವರು ಸಂಪರ್ಕಿಸಿ:
Mob: 7259407518

ಬೇಕಾಗಿದ್ದಾರೆ
ನಗರದ ಪ್ರತಿಷ್ಠಿತ ಹೋಟೆಲ್‌ಗೆ ರೂಮ್‌ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಊಟ, ವಸತಿ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಿ.
9945330505
0821-4260252

ಮನೆಯಿಂದಲೇ ಕೆಲಸ
ಗೃಹಿಣಿಯರು, ವಿದ್ಯಾರ್ಥಿಗಳು, ವಯಸ್ಕರು, ನಿವೃತ್ತಿ ಹೊಂದಿರುವವರು, ವಯಸ್ಸಿನ ಮಿತಿ ಇಲ್ಲ ನಿಮ್ಮ ಬಿಡುವಿನ ವೇಳೆಯಲ್ಲಿ ಕುಳಿತು ಬುಕ್, ರೈಟಿಂಗ್, ಫಾರಂ ಫಿಲ್ಲಿಂಗ್, ಡಾಟಾ ಎಂಟ್ರಿ, ವಾಟ್ಸಾಪ್ ಟೈಪಿಂಗ್, ಪೆನ್ಸಿಲ್ ಪ್ಯಾಕಿಂಗ್, ಪ್ಲವರ್ ಪ್ಯಾಕಿಂಗ್, ಜ್ಯುವೆಲರಿ ಪ್ಯಾಕಿಂಗ್ ಹಾಗೂ ಇನ್ನಿತರ ಪ್ಯಾಕಿಂಗ್ ಕೆಲಸಗಳು ಲಭ್ಯ, ಬಿಡುವಿನ ವೇಳೆಯಲ್ಲಿ ಕುಳಿತು ಗಳಿಸಿ ತಿಂಗಳಿಗೆ 25,000/- ದಿಂದ 30,000/- ವರೆಗೆ
7899827459

WANTED TEACHING STAFF
for reputed institution (Experience Preferred) for ENGLISH, MATHS, subjects. Transport facilities available. Drop your resume through WhatsApp
8971577685
9980631121

ಬೇಕಾಗಿದ್ದಾರೆ
ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್.
ಪಯೋನೀರ್ ಸ್ಪೋರ್ಟ್ಸ್, ಮೈಸೂರು
9980151488
9886324288

ಬೇಕಾಗಿದ್ದಾರೆ
ಕಛೇರಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: ಪಿ.ಯು.ಸಿ., ಡಿಗ್ರಿ. ಸಂಪರ್ಕಿಸಿ:
Mob: 8861042449

ಹೊಸ ಮನೆ ಮಾರಾಟಕ್ಕಿದೆ
40x60 ಅಳತೆಯ, ಪೂರ್ವ ಬಾಗಿಲು, 3 ಬೆಡ್‌ರೂಂ, 3 ಬಾತ್ ರೂಂಗಳು, ನ್ಯಾಯಾಂಗ ಬಡಾವಣೆ, ದಟ್ಟಗಳ್ಳಿ ಹತ್ತಿರ,
9448572367

WANTED OFFICE ASSISTANT
with Tally knowledge.
Call: 94496 79744

SITE FOR SALE
30x46 South face
60 feet road, Tripuramba Railway Layout, Nagarthalli, Mysore
Mob: 8123840928

ಬೇಕಾಗಿದ್ದಾರೆ
ಇಂಡಸ್ಟ್ರಿಯಲ್ ಕ್ಯಾಂಟೀನ್‌ನಲ್ಲಿ ಕೆಲಸ ಮಾಡಲು ಹೆಂಗಸರು ಮತ್ತು ಗಂಡಸರು, ಸಹಾಯಕರು/ ಸ್ವಚ್ಛತಾ ಕೆಲಸ, ಸಹಾಯಕರು, ಮ್ಯಾನೇಜರ್, ಸೂಪರ್‌ವೈಸರ್ ಅನುಭವ ಹೊಂದಿರುವ ವ್ಯಕ್ತಿಗಳು ಅಗತ್ಯವಿದ್ದಾರೆ. ESI / PF ಸೌಲಭ್ಯ ಲಭ್ಯ ವಯಸ್ಸು– 18– 45 ವರ್ಷ ಸ್ಥಳ : ಮೈಸೂರು
9611829884
8296818881

Arokah Designs Studio -ARCHITECTS-
ನಿಮ್ಮ ಕನಸಿನ ಮನೆ ಕಟ್ಟಲು ಆರ್ಕಿಟೆಕ್ಟ್ ಡಿಸೈನರ್ ಹುಡುಕುತ್ತಿದ್ದರೆ. ಇಂದೇ ನಮ್ಮನ್ನು ಸಂಪರ್ಕಿಸಿ. & ಕಡಿಮೆ ಶುಲ್ಕದಲ್ಲಿ ಆರ್ಕಿಟೆಕ್ಟ್ ಡಿಸೈನ್ ಸೇವೆಗಳನ್ನು ಪಡೆಯಿರಿ. ಆರ್ಕಿಟೆಕ್ಚರಲ್ ಫ್ಲೋರ್ ಪ್ಲಾನ್, ಎಲಿವೇಷನ್ / 3D ಡಿಸೈನ್, ಇಂಟೀರಿಯರ್ ಡಿಸೈನ್, ಸ್ಟ್ರಕ್ಚರ್ ಡ್ರಾಯಿಂಗ್, ಎಲೆಕ್ಟ್ರಿಕಲ್ & ಪ್ಲಂಬಿಂಗ್ ಲೇಔಟ್, ವಾಲ್ಕ್ ಥ್ರೂ ವಿಡಿಯೋಸ್, ಬಿಲ್ಡಿಂಗ್ ರಿನೋವೇಷನ್ ಡಿಸೈನ್,
Architectural Designs Fees = Architectural Floor Plans = 2999/-, Elevations & 3D Designs = 7999/-
Kuvempunagar, Mysore-
9187046167

ಬೇಕಾಗಿದ್ದಾರೆ
ಡ್ರೈವರ್ (ವಾಹನ ಚಾಲಕರು) 25 ರಿಂದ 35 ವರ್ಷ ವಯಸ್ಸು. 5 ರಿಂದ 10 ವರ್ಷ ಅನುಭವವಿರಬೇಕು. ಗೋಕುಲಂ, ಹೆಬ್ಬಾಳು, ಮೇಟಗಳ್ಳಿ, ವಿಜಯನಗರ ಸುತ್ತಮುತ್ತ. ಆಕರ್ಷಕ ಸಂಬಳವಿರುತ್ತದೆ. ಸಂಪರ್ಕಿಸಿ:
Mob: 94481 50408

ಸೈಟ್ ಮಾರಾಟಕ್ಕಿದೆ
15x40 ಸೈಟ್ (MUDA APPROVED) ಹೊಳಾಳು (ಆಚಾರ್ಯ ವಿದ್ಯಾಕುಲ ಹತ್ತಿರ), ತ್ರಿಮೂರ್ತಿ ನಗರ
9448150408
9945419648

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ಬನ್ನೂರು ಸಮೀಪದ ಕಲ್ಯಾಣ ಮಂಟಪಕ್ಕೆ ವಾಚ್‌ಮನ್ / ಸೂಪರ್‌ವೈಸರ್ ಬೇಕಾಗಿದ್ದಾರೆ. ಸಂಬಳ ಮತ್ತು ಮನೆ ಸೌಕರ್ಯ ಕೊಡಲಾಗುತ್ತದೆ.
9880902733
9620524329

ಟಿ.ಎ.ಪಿ.ಸಿ.ಎಂ.ಎಸ್.ಲಿ., ಶ್ರೀರಂಗಪಟ್ಟಣ
43 X 60 ಅಡಿ(2580 ಚದರ ಮೀಟರ್) ಅಳತೆಯ ವಿಸ್ತೀರ್ಣವುಳ್ಳ ಮೊದಲ ಹಂತಸ್ತಿನ ವಾಣಿಜ್ಯ ಕಟ್ಟಡ ಬಾಡಿಗೆಗೆ ಖಾಲಿ ಇದೆ. 15 X 15 ಅಡಿ (225 ಚದರ ಮೀಟರ್) ಗಂಜಾಂ ರಸ್ತೆಯಲ್ಲಿರುವ ವಾಣಿಜ್ಯ ಮಳಿಗೆ ಬಾಡಿಗೆಗೆ ಖಾಲಿ ಇದೆ.
ಎಸ್. ಎಂ. ನಾಗರಾಜು, ಅಧ್ಯಕ್ಷರು, ಟಿ.ಎ.ಪಿ.ಸಿ.ಎಂ.ಎಸ್.ಲಿ., ಶ್ರೀರಂಗಪಟ್ಟಣ ಮೊ: 9844373101
ಸಿ. ಪ್ರಸಾದ್, ಮುಖ್ಯಕಾರ್ಯನಿರ್ವಹಣಾಧಿಕಾರಿ, ಟಿ.ಎ.ಪಿ.ಸಿ.ಎಂ.ಎಸ್.ಲಿ., ಶ್ರೀರಂಗಪಟ್ಟಣ ಮೊ: 9972244986

CHANGE OF NAME
I, Advait M, son of Mahesh K.N. residing at No 709/1, Chitra Banu Road, Kuvempunagar, MYSURU 570023 do hereby solemnly affirm and swear on oath as under: I swear that I am residing at the above address. I further swear that I have changed my name from Advait Mahesh Naik to Advait Mahesh for the purpose of Passport Correction on my own free will and desire in front of Notary Public Mr. K.V.Vasu at MYSURU on 03.06.2026. Henceforth, I shall be called, known and referred to as Advait Mahesh.
Sd/- Advait Mahesh

ಬೇಕಾಗಿದ್ದಾರೆ
ಕಾಲೇಜಿಗೆ ನುರಿತ ಬಸ್ ಚಾಲಕ ಬೇಕಾಗಿದ್ದಾರೆ. ಊಟ ಮತ್ತು ವಸತಿ ಸೌಲಭ್ಯವಿದೆ. ಸಂಬಳ ಸುಮಾರು 15000 ರಿಂದ 20000 ವರೆಗೆ, ಸ್ಥಳ : ಮೈಸೂರು
7676106733
9353548339

FOR SALE
3 BHK, 45x50, East Facing house at Belavatha, Mysore. & 3 MUDA approved site 30×40, 35×40, 40×45 at. Uttanahalli, Mysore.
8296702377
9900122432

ಡಿಟರ್ಜೆಂಟ್ ಪೌಡರ್ DETERGENT POWDER
For Cleaning Laundry, Hotels, Hospitals, Industrials, Temples Function and Marriage halls. 3kg For 100 RS, For bulk orders Door delivery (COD) (Only for Wholesale)
MOB: 8884455552

SITE FOR SALE
20x30 East Face Aravinda nagar, Mysore
8970607835

TEACHERS VACANCY
Our growing Academy located near Sidharth Nagar, Mysuru, requires two part-time teachers to teach classes 1 to 6 (All subjects).
Calligraphy experts preferred.
Office maid also Required
WhatsApp your resume to
8105025999

HOUSE FOR LEASE
3 BHK House Kuvempunagara M Block, Mysore
9972118999

CHANGE OF NAME
I, Dr. ANIL S. S/o P.R. Shesha murthy, No.4, 1st cross, Aishwarya Royal Residential Layout, Mysore-570026. Changed my minor son's name from Amogh. A. Bhardawaj to Amogh. S. A. on my own free will, sworn in before notary Venkatesha Patawardhana, Mysore, Vide Affidavit dated 20/05/2026
Sd/- Dr. Anil. S.

ಬೇಕಾಗಿದ್ದಾರೆ
ಮೈಸೂರು ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡಲು ಪುರುಷರು ಮತ್ತು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. ವಯಸ್ಸು : 18 ರಿಂದ 40 ವಿದ್ಯಾಭ್ಯಾಸ : 9th, 10th, PUC and ITI, ಸಂಬಳ : 14800 For ITI 18000 (Metagalli industrial area)
8971460235
7892725603

ಮಾರಾಟಕ್ಕಿದೆ
ಕಾಫಿ ಬೀಜ ರೋಸ್ಟರ್ ಹಾಗೂ ಕಾಫಿ ಪೌಡರ್ ಮಿಲ್ ಸಹಿತ ಅಂಗಡಿ ಮಾರಾಟಕ್ಕಿದೆ. ಗೌರಿ ಶಂಕರ್ ಕಾಂಪ್ಲೆಕ್ಸ್, ಜೆ.ಪಿ.ನಗರ, ಮೈಸೂರು.
7353930410

ಮಹಿಳೆಯರಿಗೆ
ಆಫೀಸ್ ಕೆಲಸಕ್ಕೆ ಮತ್ತು ಮ್ಯಾನೇಜೆಂಟ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. (ಕಂಪ್ಯೂಟರ್ ಅನುಭವವುಳ್ಳ)
9901080314

HOUSE FOR RENT
Vijayanagar, 1st Stage, Near Union Bank, Single Bed Room for a Small family(Vegetarian only)
9902843908
9606276345

ಕಳೆದು ಹೋಗಿದೆ
ಮಾಲಿಕ: ಡಾ|| ಕೆ. ಆರ್. ಉನ್ನಿಕೃಷ್ಣನ್, GPA Holder : ಡಾ|| ವಾಸುದೇವ ಸಿಂಗ್, ಕಳೆದು ಹೋಗಿರುವುದು : ಮುಡ ಸೈಟ್ ಅಲಾಟ್‌ಮೆಂಟ್ ಲೆಟರ್ ಸ್ಥಳ : 267, 18ನೇ ಮುಖ್ಯ ರಸ್ತೆ, 1ನೇ ಹಂತ, ಡಿ. ಬ್ಲಾಕ್, ಜೆ.ಪಿ.ನಗರ, ನಾಚನಹಳ್ಳಿ, ಮೈಸೂರು–570031, ಯಾರಿಗಾದರೂ ಈ ದಾಖಲೆ ಸಿಕ್ಕಿದರೆ ಕೆಳಗಿನ ಮೊಬೈಲ್‌ಗೆ ತಿಳಿಸಿ : 9901992971 ಅಥವಾ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಗೆ ತಲುಪಿಸಬೇಕೆಂದು ಕೋರಿಕೊಳ್ಳುತ್ತೇವೆ.
ಡಾ|| ವಾಸುದೇವಸಿಂಗ್

ಬಾಡಿಗೆಗೆ ದೊರೆಯುತ್ತವೆ
12x16 ಅಳತೆಯ ಅಂಗಡಿ ಮಳಿಗೆಗಳು ಹಾಗೂ ಎಲ್ಲ ಸೌಲಭ್ಯವುಳ್ಳ ರೂಮ್‌ಗಳು ಬಾಡಿಗೆಗೆ ದೊರೆಯುತ್ತವೆ. ಪಿ.ಪಿ. ರಾಜಣ್ಣ, ಸೋಮಣ್ಣ ಲೇಔಟ್, ಬಿ. ರಾಚಯ್ಯ ಜೋಡಿ ರಸ್ತೆ, ಚಾಮರಾಜನಗರ–571313, ಸಂಪರ್ಕಿಸಿ
9740068833
9845037789

ಟೈಲರಿಂಗ್ ತರಬೇತಿ
ಟೈಲರಿಂಗ್ ತರಬೇತಿಯನ್ನು ನೀಡಲಾಗುವುದು. ಹ್ಯಾಂಡ್ ಎಂಬ್ರಾಡರಿ, ಮಷಿನ್ ಎಂಬ್ರಾಡರಿ, ಕಡಿಮೆ ಸಮಯದಲ್ಲಿ ಮಾಡಿಕೊಡಲಾಗುವುದು. ಎಲ್ಲಾ ವಿಧವಾದ ಬಟ್ಟೆಗಳನ್ನು ಸ್ಟಿಚ್ ಮಾಡಲಾಗುವುದು. ಶಾರದಾದೇವಿನಗರ,
9964768793

WAREHOUSE FOR RENT
7000 SQ. FT. KADAKOLA INDUSTRIAL AREA, NEAR HECTOR BEVERAGES
PH: 9482072315

ಅಡುಗೆಯವರು ಬೇಕಾಗಿದ್ದಾರೆ
ನ್ಯೂ ಸಿದ್ದೇಶ್ವರ ಹೋಟೆಲ್ ಬಿರಿಯಾನಿ ಪ್ಯಾರಡೈಸ್ ಬನ್ನೂರ್ ಮಾಂಸಾಹಾರಿ ಹೋಟೆಲ್‌ಗೆ ನಾಟಿಸ್ಟೈಲ್ ಅಡುಗೆ ಮಾಡುವ ಪುರುಷ ಭಟ್ಟರು ಬೇಕಾಗಿದ್ದಾರೆ.
63645 48607
97402 79617

FOR SALE
30x40 Site Before SBM Layout, Bogadi
40x60 Commercial Sites Near Madhuvana Lyt, Srirampura
2 BHK House Near MMG Layout, Near Infosys
40x60 Site @ Sharadha Layout, JP Nagar
Duplex House & Sites @ Dattagalli & Vidyaranya Puram
95386 90359, 90359 90359

FOR SALE
2 & 3 BHK New Apartments @ Ramakrishna Nagar.
30x50, 50x80 Sites @ 40Ft & 50Ft Road Approach Next to RT Nagar, Near Defence Apartments
20x30, 30x40, 30x50 Sites Near Rainbow School, Bogadi
PRAKRUTHI PROPERTIES
95386 90359, 90359 90359

MUDA / DTCP SITES
ತಕ್ಷಣ ಮನೆ ಕಟ್ಟಲು ನಮ್ಮ ಲೇಔಟ್‌ನಲ್ಲಿ
ಟಿ.ಎನ್. ಪುರ ಹೈವೆ ಚಿಕ್ಕಳ್ಳಿ ಹತ್ತಿರ, 22.3 ಲಕ್ಷ ವಸಂತನಗರ ಪೊಲೀಸ್ ಲೇಔಟ್ ಪಕ್ಕ 32 ಲಕ್ಷ ಮಾನಸಿನಗರ ಪಕ್ಕ ವಿದ್ಯಾವಿಕಾಸ 34 ಲಕ್ಷ ಬೋಗಾದಿ ಟ್ರೆಂಡ್ ಫ್ಲಾಟ್ ಹತ್ತಿರ 30 ಲಕ್ಷ ವಿಜಯನಗರ 4ನೇ ಸ್ಟೇಜ್ ಪಕ್ಕ 64 ಲಕ್ಷ ಜೆ.ಪಿ. ನಗರ ರಿಂಗ್ ರಸ್ತೆ ಹತ್ತಿರ 24 ಲಕ್ಷ.
Mob: 8123075038
Brokers Excuse. 0% commission.

ಶ್ರೀ ಬಾಲಾಜಿ ಟೂರಿಸ್ಟ್
3–7–26: 9 ದಿನ: ಅಮರ್‌ನಾಥ್, ವೈಷ್ಣೋದೇವಿ
ಜುಲೈ 20: 3 ದಿನ: ಗೌಹಾಟಿ, ಕಾಮಾಕ್ಯದೇವಿ ಇತ್ಯಾದಿ.
ಜುಲೈ 24: 7 ದಿನ: ದೆಹಲಿ, ಆಗ್ರಾ, ಅಯೋಧ್ಯ, ಮಥುರಾ, ಪ್ರಯಾಗ್‌ರಾಜ್, ಕಾಶಿ, ಗಯಾ ಇತ್ಯಾದಿ.
ಆಗಸ್ಟ್ 23: 7 ದಿನ: ರಾಮೇಶ್ವರ, ಕನ್ಯಾಕುಮಾರಿ.
ಸೆಪ್ಟೆಂಬರ್ 18: 14 ದಿನ: ಚಾರ್‌ಧಾಮ್ ಯಾತ್ರೆ
ಅಕ್ಟೋಬರ್ 23: 8 ದಿನ: ಕೊಲ್ಹಾಪುರ, ಪಂಡಾಪುರ, ಶಿರಡಿ, ಭೀಮಾಶಂಕರ್, ತ್ರೈಂಬಕೇಶ್ವರ್, ಎಲ್ಲೋರ.
9945770486

Sites for Sale
Near Vajmangala, T.Narasipura Road & Near KSRTC Bus Depot, Hunsur
8123387555
7259348777

WANTED
Videographer Cum Video Editor for Full-Time Work in Mysore. Attractive salary.
Call/WhatsApp:
7022222224

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಮ್ಯಾನೇಜರ್ ಸೆಕ್ಯೂರಿಟಿ ಸೂಪರ್ ವೈಸರ್ ಹೌಸ್ ಕೀಪಿಂಗ್ ಸೂಪರ್ ವೈಸರ್
9353046663
9632606663



Solar Water Heater SALES & SERVICE BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಉತ್ತಮ ಆರೋಗ್ಯ ಹಾಗೂ ಮಾನಸಿಕ ಶಾಂತಿ ಪಡೆಯಲು ಸಿದ್ಧ ಸಮಾಧಿ ಯೋಗ ಶಿಬಿರ
ಪರಿಚಯ ದಿನಾಂಕ: 7-6-2026 ಭಾನುವಾರ ಸಂಜೆ 6 ಗಂಟೆಗೆ ಸರ್ವರಿಗೂ ಸ್ವಾಗತ. ಶಿಬಿರ ಪ್ರಾರಂಭ 8-6-2026 ಸೋಮವಾರ ಸಂಜೆ 6ಕ್ಕೆ (14 ದಿನಗಳು). ನೋಂದಣಿಗೆ ಸಂಪರ್ಕಿಸಿ:
9448458050, 8618762110

ಋಷಿ ಸಂಸ್ಕೃತಿ ವಿದ್ಯಾಕೇಂದ್ರ, ಮೈಸೂರು
ಕನಕಪುರ ಬಳಿ ಇರುವ ದೊಡ್ಡಮರುಳವಾಡಿ ನಮ್ಮ ಆಶ್ರಮಕ್ಕೆ ಸ್ಕೂಲ್ ಬಸ್‌ಗೆ ಡ್ರೈವರ್ ಬೇಕಾಗಿದ್ದಾರೆ. ಊಟ ಮತ್ತು ವಸತಿ ಸೌಕರ್ಯ ಇರುತ್ತದೆ. ಸಂಪರ್ಕಿಸಿ:
Mob: 9448458050

ಮನೆ ಮಾರಾಟಕ್ಕಿದೆ
20x30 sq.ft. #1207, East facing, Lal Bahaddur Shastri Nagar, Mysuru.
6363185131
9740516938

WANTED TEACHERS
ENGLISH, EVS, MATHS KANNADA, Drawing for 1 to 5th
A qualified teacher with fluency in English is a must.
Jnana Gangothri Convent
Rajendra Nagara Mysore 570007
WhatsApp Resume to
9113980741

ಬೇಕಾಗಿದ್ದಾರೆ
ಶಾಲೆಯಲ್ಲಿ ಕಸಗುಡಿಸಲು ಮತ್ತು ಇತರೆ ಕೆಲಸಗಳಿಗೆ 40 ವಯಸ್ಸು ಒಳಪಟ್ಟ ಆರೋಗ್ಯವಂತ ಮಹಿಳೆಯರು ಮತ್ತು ವಾಚ್ ಮ್ಯಾನ್ ಕೆಲಸಕ್ಕೆ ಗಂಡಸು ಅಭ್ಯರ್ಥಿ ತಕ್ಷಣ ಸೇರಬೇಕು
ಕೆಲಸದ ಸಮಯ ಬೆಳಿಗ್ಗೆ 9 ರಿಂದ ಸಂಜೆ 5–30 ಸಂಬಳ ಪ್ರತಿ ದಿನಕ್ಕೆ 400/– ಜ್ಞಾನ ಗಂಗೋತ್ರಿ ಕಾನ್ವೆಂಟ್ ರಾಜೇಂದ್ರ ನಗರ ಮೈಸೂರು
8762205021

ಬೇಕಾಗಿದ್ದಾರೆ
PEST CONTROL SERVICE ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಸತಿ ಮತ್ತು ಊಟ ನೀಡಲಾಗುತ್ತದೆ.
Mob: 9343550005

ಬೇಕಾಗಿದ್ದಾರೆ
ಮೈಸೂರಿನ ಕಂಪನಿಗಳಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಯೋಮಿತಿ 50 ವರ್ಷದ ಒಳಗೆ. ಸ್ಥಳ: ರಾಜೀವ್ ನಗರ, ಸಾತಗಳ್ಳಿ, ಆರ್.ಗೇಟ್ ಹಾಗು ಬೇಗೂರು (ಗುಂಡ್ಲುಪೇಟೆ) ನಗುನಹಳ್ಳಿ, ಗೌರಿಪುರ (ಮೈಸೂರು ಶ್ರೀರಂಗಪಟ್ಟಣ ಹೈವೇ) ಸಂಪರ್ಕಿಸಿ:
9035050656
9900212487

ಕೋರ್ ಕಟಿಂಗ್ ಪ್ಲಮಿಂಗ್ ವರ್ಕ್ ಗ್ಯಾಸ್ ಲೈನ್ ಸ್ಲಾಬ್ ವಾಲ್ ಕಟಿಂಗ್
6362150462
7795749881

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮುಂದುವರೆದ ವರ್ಗೀಕೃತ ಜಾಹೀರಾತಿಗಾಗಿ 11ನೇ ಪುಟ ನೋಡಿ

ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪದಗ್ರಹಣ ಹಿನ್ನೆಲೆ

ತಿ.ನರಸೀಪುರ, ಹೆಚ್.ಡಿ.ಕೋಟೆ, ಪಿ.ಪಟ್ಟಣದಲ್ಲಿ ಸಂಭ್ರಮಾಚರಣೆ

●ಡಿಕೆಶಿ ಪರ 'ಕೈ' ಮುಖಂಡರು, ಕಾರ್ಯಕರ್ತರ ಘೋಷಣೆ ●ಸಾರ್ವಜನಿಕರಿಗೆ ಸಿಹಿ ವಿತರಣೆ ●ದೇವಾಲಯದಲ್ಲಿ ವಿಶೇಷ ಪೂಜೆ







ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್, ಸಚಿವರಾಗಿ ಡಾ.ಯತೀಂದ್ರ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಕೆಂಪಯ್ಯನಹುಂಡಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು. ಮತ್ತೊಂದು ಚಿತ್ರದಲ್ಲಿ ಹೆಚ್.ಡಿ.ಕೋಟೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು.

ಮೈಸೂರು, ಜೂ.3– ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ತಿ.ನರಸೀಪುರ, ಹೆಚ್.ಡಿ.ಕೋಟೆ ಹಾಗೂ ಪಿರಿಯಾಪಟ್ಟಣದಲ್ಲಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಡಿ.ಕೆ.ಶಿವಕುಮಾರ್ ಪರ ಘೋಷಣೆ ಕೂಗಿ ಸಂಭ್ರಮಾಚರಣೆ ನಡೆಸಿದರು.

ತಿ.ನರಸೀಪುರ: ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಹಾಗೂ ಸಚಿವರಾಗಿ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಹಳೇ ಕೆಂಪಯ್ಯನಹುಂಡಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು ಹಾಗೂ ಗ್ರಾಮಸ್ಥರು ಅದ್ಧೂರಿಯಾಗಿ ಸಂಭ್ರಮಾಚರಣೆ ನಡೆಸಿದರು.

ಗ್ರಾಮದ ಬಸ್ ನಿಲ್ದಾಣದ ಬಳಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಡಿ.ಕೆ.ಶಿವಕುಮಾರ್ ಹಾಗೂ ಡಾ.ಯತೀಂದ್ರ ಅವರ ಬೃಹತ್ ಕಟೌಟ್ ಅನ್ನು ಮುಖ್ಯ ರಸ್ತೆಯಲ್ಲಿ ಅಳವಡಿಸಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಡಿ.ಕೆ.ಶಿವಕುಮಾರ್ ಪರ ಘೋಷಣೆ ಕೂಗಿ ಸಂಭ್ರಮಿಸಿದರು. ಈ ವೇಳೆ ಡಿ.ಕೆ.ಶಿವಕುಮಾರ್ ಅವರ ಕಟೌಟ್ ಮೇಲೆ 'ಸಂಪೂರ್ಣ ಬಹುಮತದ ಮುಖ್ಯಮಂತ್ರಿ', 'ಶ್ರಮಕ್ಕೆ ತಕ್ಕ ಫಲ, ಪಕ್ಷ ನಿಷ್ಠೆಗೆ ಸಂದ ಗೌರವ' ಹಾಗೂ ಡಾ.ಯತೀಂದ್ರ ಅವರ ಕಟೌಟ್ ಮೇಲೆ 'ವರುಣಾಧಿಪತಿ' ಎಂದು ಬರೆಯಲಾಗಿದ್ದ ಸಾಲುಗಳು ಗಮನ ಸೆಳೆಯುತ್ತಿತ್ತು.

ಹೊಸಕೋಟೆ(ಕೆಂಪಯ್ಯನಹುಂಡಿ) ಗ್ರಾಪಂ ಮಾಜಿ ಅಧ್ಯಕ್ಷ ಎಂ.ಆನಂದ್ ಮಾತನಾಡಿ, ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪಕ್ಷ ಸಂಘಟನೆ ಹಾಗೂ ಜನಸೇವೆ ಮೂಲಕ ರಾಜ್ಯದ ಜನರ ವಿಶ್ವಾಸ ಗಳಿಸಿರುವ ನಾಯಕರು. ಅವರ ನೇತೃತ್ವದಲ್ಲಿ ರಾಜ್ಯ ಅಭಿವೃದ್ಧಿಯ ಪಥದಲ್ಲಿ ಸಾಗಲಿದೆ. ಅದೇ ರೀತಿ ಡಾ.ಯತೀಂದ್ರ ಅವರು ಯುವ ನಾಯಕತ್ವದ ಪ್ರತೀಕವಾಗಿದ್ದು, ಸಚಿವ ಸಂಪುಟದಲ್ಲಿ ಅವರಿಗೆ ಸ್ಥಾನ ದೊರೆತಿರುವುದು ಯುವ ಸಮುದಾಯಕ್ಕೆ ಹೆಚ್ಚಿನ ಪ್ರೇರಣೆ ನೀಡಲಿದೆ ಎಂದು ಅಭಿಪ್ರಾಯಪಟ್ಟರು.

ರಾಜ್ಯದ ಅಭಿವೃದ್ಧಿ, ರೈತರ ಕಲ್ಯಾಣ, ಸಾಮಾಜಿಕ ನ್ಯಾಯ, ಶಿಕ್ಷಣ, ಆರೋಗ್ಯ ಮತ್ತು ಮೂಲ ಸೌಕರ್ಯ ಅಭಿವೃದ್ಧಿಗೆ ನೂತನ ಸರ್ಕಾರ ಹೆಚ್ಚಿನ ಆದ್ಯತೆ ನೀಡಲಿದೆ ಎಂಬ ನಿರೀಕ್ಷೆ ಇದ್ದು, ವಿಶೇಷವಾಗಿ ಗ್ರಾಮೀಣ ಪ್ರದೇಶಗಳ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರೆಯಲಿದೆ ಎಂದರು.

ಪ್ರಥಮ ದರ್ಜೆ ಗುತ್ತಿಗೆದಾರ ಮಾಧು ಮಾತನಾಡಿ, ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪಂಚ ಗ್ಯಾರಂಟಿ ಯೋಜನೆಗಳನ್ನು ಮುಂದುವರೆಸುವ ಮೂಲಕ ಜನಪರ ಆಡಳಿತ ನೀಡಲಿದ್ದಾರೆ. ಕಾಂಗ್ರೆಸ್ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಬಡವರು, ಮಹಿಳೆಯರು, ರೈತರು, ಕಾರ್ಮಿಕರು ಹಾಗೂ ಯುವ ಜನರ ಬದುಕಿನಲ್ಲಿ ಮಹತ್ತರ ಬದಲಾವಣೆ ತಂದಿವೆ. ಈ ಯೋಜನೆಗಳ ಮುಂದುವರಿಕೆಯಿಂದ ಸಮಾಜದ ಎಲ್ಲಾ ವರ್ಗದ ಜನರಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ದೊರೆಯಲಿದ್ದು, ಜನರ ಕಲ್ಯಾಣವೇ ಸರ್ಕಾರದ ಮುಖ್ಯ ಉದ್ದೇಶ ಎಂದರು.

ಸಂಭ್ರಮಾಚರಣೆಯಲ್ಲಿ ಗ್ರಾಪಂ ಮಾಜಿ ಸದಸ್ಯ ಮಹದೇವಸ್ವಾಮಿ, ಗಂಗಾಧರ್, ಇಂಡವಾಳು ಲೋಕೇಶ್, ಡೈರಿ ಮಾಜಿ ನಿರ್ದೇಶಕ ಸಿದ್ದಪ್ಪ ಗಿರೀಶ್, ರವಿ, ಮೂರ್ತಿ, ಕೃಷ್ಣಮೂರ್ತಿ, ಹರೀಶ್, ಸಂದೀಪ್ ಕುಮಾರ್, ಕೆಎಸ್ಐಸಿ ರಾಕೇಶ್, ಯೋಗಾನಂದ, ರಾಮ, ಎನ್.ಗಿರಿ, ನಾಗೇಶ್, ನಾಗೇಗೌಡ, ಮಲ್ಲೇಶ್, ನಾಯಕ ಜನಾಂಗದ ಯಜಮಾನರಾದ ನಾಗನಾಯ್ಕ, ಪುಟ್ಟಣ್ಣ ನಾಯ್ಕ, ನಾಗೇಗೌಡ, ಶಿವಕುಮಾರ್ ಸೇರಿದಂತೆ ಹಳೇ ಕೆಂಪಯ್ಯನಹುಂಡಿ ಗ್ರಾಮಸ್ಥರು ಇದ್ದರು.

ಹೆಚ್.ಡಿ.ಕೋಟೆ: ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪ್ರಮಾಣ ವಚನ ಸ್ವೀಕರಿಸುತ್ತಿದ್ದಂತೆ ಪಟ್ಟಣದ ಮುಖ್ಯ ರಸ್ತೆಯಲ್ಲಿ ಜಮಾಯಿಸಿದ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಟೌನ್ ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷ ವೀರೇಂದ್ರ ಕುಮಾರ್ ಮಾತನಾಡಿ, ಡಿ.ಕೆ.ಶಿವಕುಮಾರ್ ಅವರು ಪಕ್ಷಕ್ಕೆ ನಿಷ್ಠಾವಂತರಾಗಿ ಸೇವೆ ಸಲ್ಲಿಸಿದ್ದು, ಪಕ್ಷವು ಅವರನ್ನು ಗುರುತಿಸಿ ಮುಖ್ಯಮಂತ್ರಿ ಮಾಡಿದೆ. ಕಳೆದ 40 ವರ್ಷಗಳಿಂದ ಕಾಂಗ್ರೆಸ್‌ನಲ್ಲಿರುವ ಅವರು 6 ವರ್ಷಗಳಿಂದ ಕೆಪಿಸಿಸಿ ಅಧ್ಯಕ್ಷರಾಗಿ ಪಕ್ಷ ಸಂಘಟಿಸಿ, ವಿಧಾನಸಭಾ ಚುನಾವಣೆಯಲ್ಲಿ ಅತೀ ಹೆಚ್ಚು ಸ್ಥಾನ ಗೆಲ್ಲುವ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಇದೀಗ ಮುಖ್ಯಮಂತ್ರಿಯಾಗಿರುವ ಅವರು ಮುಂದಿನ 2 ವರ್ಷಗಳಲ್ಲಿ ಜನಪರ ಆಡಳಿತ ನೀಡಿ ಮತ್ತೊಮ್ಮೆ ರಾಜ್ಯ ದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಕೆಲಸ ಮಾಡಲಿ ಎಂದು ಶುಭ ಕೋರಿದರು.

ಈ ವೇಳೆ ಪಟ್ಟಣದ ಹ್ಯಾಂಡ್‌ಪೋಸ್ಟ್ ಸರ್ಕಲ್‌ನಲ್ಲಿ ಡಿಕೆಶಿ ಪ್ರಮಾಣ ವಚನ ಸಮಾರಂಭವನ್ನು ಸಾರ್ವಜನಿಕರು ದೊಡ್ಡ ಎಲ್ಇಡಿ ಪರದೆಯಲ್ಲಿ ವೀಕ್ಷಿಸಲು ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೇ ದಾರಿಯುದ್ದಕ್ಕೂ ಡಿ.ಕೆ.ಶಿವಕುಮಾರ್ ಅವರಿಗೆ ಶುಭ ಕೋರುವ ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿತ್ತು.

ಸಂಭ್ರಮಾಚರಣೆಯಲ್ಲಿ ಟೌನ್ ಒಕ್ಕಲಿಗ ಸಂಘದ ಅಧ್ಯಕ್ಷ ಅಂಗಡಿ ಸತೀಶ್, ಕಾಂಗ್ರೆಸ್ ಮುಖಂಡರಾದ ಶಶಿಕುಮಾರ್, ಗಣೇಶ್ ಆಚಾರ್, ಸೂರ್ಯಕುಮಾರ್ ಗೌಡ, ನಾಗೇಶ್, ಸ್ವಾಮಿ, ರಾಜಣ್ಣ, ರಾಮಕೃಷ್ಣ, ರವಿ, ರಂಗೇಗೌಡ, ವೆಂಕಿ, ದೀಪು, ಲಕ್ಷ್ಮಣ ಇನ್ನಿತರರಿದ್ದರು.

ಪಿರಿಯಾಪಟ್ಟಣ: ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪ್ರಮಾಣ ವಚನ ಸ್ವೀಕರಿಸುತ್ತಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರು ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಪಟಾಕಿ ಸಿಡಿಸಿ, ಸಿಹಿ ವಿತರಿಸುವ ಮೂಲಕ ಸಂಭ್ರಮಾಚರಣೆ ನಡೆಸಿದರು.

ಕಾಂಗ್ರೆಸ್ ನಗರ ಘಟಕದ ಅಧ್ಯಕ್ಷ ಪಿ.ಕೆ.ಅಶೋಕ್ ಕುಮಾರ್ ಗೌಡ ಮಾತನಾಡಿ, ಮಾಜಿ ಸಿಎಂ ಸಿದ್ದರಾಮಯ್ಯ ಅವರು ಅಧಿಕಾರ ತ್ಯಾಗ ಮಾಡುವ ಮೂಲಕ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟು ಕೊಟ್ಟು ಪಕ್ಷದ ಹೈಕಮಾಂಡ್ ನಿಲುವಿಗೆ ತಲೆ ಬಾಗಿದ್ದಾರೆ ಎಂದರು. ನೂತನ ಸಂಪುಟದಲ್ಲಿ ಮಾಜಿ ಸಚಿವ ಕೆ.ವೆಂಕಟೇಶ್ ಅವರಿಗೆ 2ನೇ ಹಂತದಲ್ಲಿ ಸಚಿವ ಸ್ಥಾನ ನೀಡುವಂತೆ ಇದೇ ವೇಳೆ ಆಗ್ರಹಿಸಿದರು.

ವಿಶೇಷ ಪೂಜೆ: ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುತ್ತಿದ್ದಂತೆ ಪಿರಿಯಾಪಟ್ಟಣ ಕಾಂಗ್ರೆಸ್ ಘಟಕ ಹಾಗೂ ತಾಲೂಕು ಒಕ್ಕಲಿಗರ ಸಂಘದಿಂದ ಶ್ರೀಮಸಣಿಕಮ್ಮ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಈ ವೇಳೆ ಕಾಂಗ್ರೆಸ್ ತಾಲೂಕು ಕಾನೂನು ಘಟಕದ ಅಧ್ಯಕ್ಷ ಸುಧೀಶ್‌ಗೌಡ, ಪುರಸಭಾ ಮಾಜಿ ಸದಸ್ಯರಾದ ಸಿ.ತಮ್ಮಣ್ಣಯ್ಯ, ಪಿ.ವಿ.ರವಿ, ಮುಖಂಡರಾದ ಮಹೇಶ್, ಕುಮಾರ್, ಮಲ್ಲೇಗೌಡ, ಪಿ.ಪಿ.ಪುಟ್ಟಯ್ಯ, ಮೆಡಿಕಲ್ ಮಹದೇವ್, ಕೃಷ್ಣೇಗೌಡ, ಗೋವಿಂದರಾಜು, ಬಿ.ಪಿ.ರಾಜೇಶ್, ಪ್ರಮೋದ್, ನಾಗರಾಜ್, ಪುರುಷೋತ್ತಮ್, ರಘು, ಗಿರೀಶ್, ತಾಲೂಕು ಒಕ್ಕಲಿಗರ ಸಂಘದ ಪದಾಧಿಕಾರಿಗಳಾದ ಆನಂದ್, ಚಂದ್ರೇಗೌಡ, ಮೋಹನ್, ನಿರ್ದೇಶಕರಾದ ಪದ್ಮನಾಭ್, ರಾಜು, ಸುರೇಶ್ ಸೇರಿದಂತೆ ಮತ್ತಿತರರಿದ್ದರು.



ಪಿರಿಯಾಪಟ್ಟಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು.

ಡಿಕೆಶಿ ಸಿಎಂ: ಸಾರ್ವಜನಿಕರಿಗೆ ಅನ್ನದಾನ



ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಬುಧವಾರ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಕಂಪಲಾಪುರದ ವಿನಾಯಕ ಸರ್ಕಲ್‌ನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಂಭ್ರಮಾಚರಣೆ ನಡೆಸಿ, ಸಾರ್ವಜನಿಕರಿಗೆ ಅನ್ನದಾನ ಮಾಡಿದರು. ಕಾಂಗ್ರೆಸ್ ಹಿರಿಯ ಮುಖಂಡ ಪ್ರಕಾಶ್‌ಗೌಡ, ಮಾಜಿ ಗ್ರಾಪಂ ಉಪಾಧ್ಯಕ್ಷ ರಾಮಲಿಂಗಂ, ರಾಜೇಗೌಡ, ಲೋಕೇಶ್, ಮಾಜಿ ಸದಸ್ಯರಾದ ಮಂಜು, ಶ್ರೀಪತಿ, ಚಂದ್ರು, ಐ.ಎಸ್.ಗೋಪಿ, ಸಿದ್ದಪ್ಪ, ತಮ್ಮಯ್ಯ ಇತರರಿದ್ದರು.

ನಂಜನಗೂಡಿನಲ್ಲೂ 'ಕೈ' ಕಾರ್ಯಕರ್ತರ ಸಂಭ್ರಮಾಚರಣೆ



ನಂ.ಗೂಡಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು.

ನಂಜನಗೂಡು: ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿಯಾಗಿ ಡಾ.ಜಿ.ಪರಮೇಶ್ವರ್ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಿಹಿ ಹಂಚುವ ಮೂಲಕ ಸಂಭ್ರಮಾಚರಣೆ ನಡೆಸಿದರು.

ನಗರದ ಗೀತಾ ಮೆಡಿಕಲ್ ವೃತ್ತದ ಬಳಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಿ ಮಾತನಾಡಿದ ಎಸ್‌ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಣ್ಣ ಮಾತನಾಡಿ, ಮಾಜಿ ಸಿಎಂ ಸಿದ್ದರಾಮಯ್ಯ ಅವರು 8 ವರ್ಷಗಳ ಕಾಲ ಆಡಳಿತ ನಡೆಸಿ ಯಾವುದೇ ಪ್ರತಿಫಲಾಪೇಕ್ಷೆ, ಅಹಿತಕರ ಘಟನೆಗಳಿಗೆ ಆಸ್ಪದ ನೀಡದೆ, ಹೈಕಮಾಂಡ್ ಮಾತಿಗೆ ಮಣಿದು ಅಧಿಕಾರ ಹಸ್ತಾಂತರಿಸಿದ್ದಾರೆ. ಇದೀಗ ಮುಖ್ಯ ಮಂತ್ರಿಯಾಗಿ ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿಯಾಗಿ ಡಾ.ಜಿ. ಪರಮೇಶ್ವರ್ ಪ್ರಮಾಣ ವಚನ ಸ್ವೀಕರಿಸಿರುವ ಹಿನ್ನೆಲೆಯಲ್ಲಿ ಸಂಭ್ರಮಾಚರಣೆ ನಡೆಸುತ್ತಿದ್ದೇವೆ. ಎಲ್ಲಾ ವರ್ಗಗಳ ಅಭಿವೃದ್ಧಿ ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ ಎಂದರು.

ಈ ವೇಳೆ ಎನ್.ಎಂ.ಮಂಜುನಾಥ್, ನಂಜುಂಡಸ್ವಾಮಿ, ಮುದ್ದುಮಾದಶೆಟ್ಟಿ, ರಘು, ರಾಜು, ಮಹದೇವಯ್ಯ ಸೇರಿದಂತೆ ಕಾರ್ಯಕರ್ತರು ಉಪಸ್ಥಿತರಿದ್ದರು.

ವಿಧಾನಪರಿಷತ್ ಸದಸ್ಯರಾಗಿ ಎಸ್.ಸಿ.ಬಸವರಾಜು ಆಯ್ಕೆಗೆ ಆಗ್ರಹ



ತಾಲೂಕು ನಾಯಕ ಸಮುದಾಯದ ಅಧ್ಯಕ್ಷ ನಾಗರಾಜು ಮಾತನಾಡಿದರು.


ನಂಜನಗೂಡು, ಜೂ.3– ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಹಾಗೂ ಕೆಪಿಸಿಸಿ ಕಾರ್ಯದರ್ಶಿ ಎಸ್.ಸಿ.ಬಸವರಾಜು ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡುವಂತೆ ತಾಲೂಕು ನಾಯಕ ಸಮುದಾಯದ ಅಧ್ಯಕ್ಷ ನಾಗರಾಜು ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್.ಸಿ.ಬಸವರಾಜು ಅವರು ಕಳೆದ 4 ದಶಕಗಳಿಂದ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಪಕ್ಷ ಸಂಘಟಿಸಿ, ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರಲು ಶ್ರಮಿಸಿದ್ದಾರೆ. ಜೊತೆಗೆ ಸಿದ್ಧರಾಮಯ್ಯ ಅವರ ಆಪ್ತರಾಗಿ ಅವರ ಗೆಲುವಿಗೆ ಸಹಕಾರ ನೀಡಿದ್ದಾರೆ. ಹಳೆ ಮೈಸೂರು ಭಾಗದಲ್ಲಿ ಎಸ್.ಸಿ.ಬಸವರಾಜು ಅವರು ಜನರ ಕಷ್ಟಗಳಿಗೆ ಸ್ಪಂದಿಸಲಿದ್ದು, ಅವರಿಗೆ ಯಾವುದೇ ರಾಜಕೀಯ ಸ್ಥಾನಮಾನ ದೊರೆತಿಲ್ಲ. ಆದ ಕಾರಣ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಿಸುವ ಮೂಲಕ ನಾಯಕ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಒದಗಿಸಲು ಮುಂದಾಗಬೇಕು ಎಂದು ಕಾಂಗ್ರೆಸ್ ವರಿಷ್ಠರನ್ನು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಶಿವನಂಜ ನಾಯಕ, ದೊರೆಸ್ವಾಮಿ ನಾಯಕ, ಸುಧೀಂದ್ರ ಕುಮಾರ್, ನಾಗರಾಜು, ಶ್ರೀಕಂಠಸ್ವಾಮಿ, ಶ್ರೀನಿವಾಸ್, ಮಂಜು, ಗಣೇಶ್, ಸೋಮ ನಾಯಕ ಸೇರಿದಂತೆ ಹಲವರಿದ್ದರು.

ನೂತನ ಸಿಎಂ ಡಿಕೆಶಿಯನ್ನು ಅಭಿನಂದಿಸಿದ ಮುಖಂಡರು

ಡಾ.ಹೆಚ್.ಸಿ.ಮಹದೇವಪ್ಪರನ್ನು ಡಿಸಿಎಂ ಮಾಡಲು ಒತ್ತಾಯ



ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಮುಖಂಡರು ಅಭಿನಂದಿಸಿದರು.

ತಿ.ನರಸೀಪುರ, ಜೂ.3– ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಬುಧವಾರ ಪ್ರಮಾಣ ವಚನ ಸ್ವೀಕರಿಸಿದ ಡಿ.ಕೆ.ಶಿವಕುಮಾರ್ ಅವರನ್ನು ತಾಪಂ ಮಾಜಿ ಅಧ್ಯಕ್ಷ ದೊಡ್ಡೆಬಾಗಿಲು ಎಂ.ಮಲ್ಲಿಕಾರ್ಜುನಸ್ವಾಮಿ ಹಾಗೂ ಬೆಂಬಲಿಗರು ಅಭಿನಂದಿಸಿದರು.

ಬೆಂಗಳೂರಿನಲ್ಲಿ ನೂತನ ಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗಿ ಅಭಿನಂದಿಸಿದ ಮುಖಂಡರು, ಮಾಜಿ ಸಚಿವರೂ ಆದ ಹಿರಿಯ ದಲಿತ ಮುಖಂಡ ಡಾ.ಹೆಚ್.ಸಿ.ಮಹದೇವಪ್ಪನವರನ್ನು ಉಪ ಮುಖ್ಯಮಂತ್ರಿ ಮಾಡಿ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಡಾ.ಹೆಚ್.ಸಿ.ಮಹದೇವಪ್ಪ ಅವರು ರಾಜ್ಯದ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಇದನ್ನು ಗಮನಿಸಿ ಅವರಿಗೆ ಉನ್ನತ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು.

ಡಾ.ಹೆಚ್.ಸಿ.ಮಹದೇವಪ್ಪನವರು ತಮ್ಮ ಅಧಿಕಾರವಧಿಯಲ್ಲಿ ಎಲ್ಲಾ ಸಮುದಾಯದವರನ್ನು ಒಟ್ಟಾಗಿ ಕರೆದುಕೊಂಡು ಹೋಗುವ ಮೂಲಕ ಸರ್ಕಾರಕ್ಕೆ ಮತ್ತು ಪಕ್ಷಕ್ಕೆ ಒಳ್ಳೆಯ ಹೆಸರು ತಂದಿದ್ದಾರೆ. ಹೀಗಾಗಿ ಅವರನ್ನು ಮತ್ತೊಮ್ಮೆ ಸಂಪುಟಕ್ಕೆ ಸೇರ್ಪಡೆ ಮಾಡಿಕೊಂಡು ಅವರನ್ನು ಡಿಸಿಎಂ ಮಾಡಿ ಸಚಿವ ಸ್ಥಾನ ನೀಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಪುರಸಭೆ ಮಾಜಿ ಅಧ್ಯಕ್ಷ ಎನ್.ಎಸ್.ಬಸವರಾಜು, ಎನ್.ಮಹ ದೇವಸ್ವಾಮಿ, ಕೆಎಸ್‌ಆರ್‌ಟಿಸಿ ರಾಜಣ್ಣ, ಗ್ರಾಪಂ ಮಾಜಿ ಅಧ್ಯಕ್ಷರಾದ ವಾಟಾಳ್ ನಾಗೇಶ್, ನಾಗರಾಜ್, ಅಕ್ಕೂರು ಗುರು ಮೂರ್ತಿ, ಕೋಣಗಳ್ಳಿ ನಾಗರಾಜು ಮತ್ತಿತರರಿದ್ದರು.

ಮನೆಗಳ್ಳತನ: ನಗದು, ಚಿನ್ನಾಭರಣ ಕಳವು

ನಂಜನಗೂಡು, ಜೂ.3– ನಗರದಲ್ಲಿ ಮನೆಗಳ್ಳತನ ಪ್ರಕರಣಗಳು ಮುಂದುವರೆದಿದ್ದು, ಇದೀಗ ನಗರದ ಹಂಡುವಿನಹಳ್ಳಿ ಬಡಾವಣೆಯ ಕಂಠಿ ಲೇಔಟ್‌ನ ಮನೆಯೊಂದರ ಬಾಗಿಲು ಮೀಟಿ ಕಳ್ಳರು ಸಾವಿರಾರು ರೂ., ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ.

ನಗರದ ಸಾರ್ವಜನಿಕ ಆಸ್ಪತ್ರೆ ಶುಶ್ರೂಷಕಿ ಭಾಗ್ಯಶ್ರೀ ಅವರ ಮನೆಯಲ್ಲಿ ಕೈಚಳಕ ತೋರಿರುವ ಕಳ್ಳರು 20 ಸಾವಿರ ರೂ., 25 ಗ್ರಾಂ ಚಿನ್ನಾಭರಣ ದೋಚಿದ್ದಾರೆ. ಎಂದಿನಂತೆ ಮಂಗಳವಾರ ಭಾಗ್ಯಶ್ರೀ ಅವರು ರಾತ್ರಿ ಪಾಳಿ ಕೆಲಸಕ್ಕೆ ನಗರದ ಸಾರ್ವಜನಿಕ ಆಸ್ಪತ್ರೆಗೆ ತೆರಳಿದ್ದಾರೆ. ಈ ವೇಳೆ ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಗಮನಿಸಿದ ಕಳ್ಳರು ಮನೆ ಬಾಗಿಲು ಮೀಟಿ ಒಳ ನುಗ್ಗಿ ಸಾವಿರಾರು ರೂ. ಹಾಗೂ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ ಎನ್ನಲಾಗಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರು ಶ್ವಾನದಳ, ಬೆರಳಚ್ಚು ತಜ್ಞರೊಂದಿಗೆ ಪರಿಶೀಲನೆ ನಡೆಸಿ, ಸಿಸಿ ಕ್ಯಾಮರಾ ಪರಿಶೀಲಿಸಿ ಕಳ್ಳರ ಪತ್ತೆಗೆ ಬಲೆ ಬೀಸಿದ್ದಾರೆ. ಈ ಸಂಬಂಧ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು.ಜೂ.3– ಮೈಸೂರಿನ ವಿಶ್ವಕರ್ಮ ಜಾಗೃತಿ ವೇದಿಕೆ ವತಿಯಿಂದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ. 65 ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಮೈಸೂರು ಜಿಲ್ಲಾ ವ್ಯಾಪ್ತಿಯ ವಿಶ್ವಕರ್ಮ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ.

ಅರ್ಜಿ ಸಲ್ಲಿಸಲು ಜೂನ್ 15 ಕೊನೆಯ ದಿನ. ಅರ್ಜಿಯನ್ನು ಮೈಸೂರಿನ ಸರ್ದಾರ್ ವಲ್ಲಬಾಯ್ ಪಟೇಲ್ ನಗರ, ಪೊಲೀಸ್ ಲೇಔಟ್ 2ನೇ ಹಂತದಲ್ಲಿರುವ ವಿಶ್ವಕರ್ಮ ಜಾಗೃತಿ ವೇದಿಕೆಯ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಮೊ: 9108814433, 9739809952, 9743489608 ಮೂಲಕ ಸಂಪರ್ಕಿಸಬಹುದು.

ಮತದಾರರ ಪಟ್ಟಿ ಪರಿಷ್ಕರಣೆ: ನಾಳೆ ರಾಜಕೀಯ ಪಕ್ಷಗಳ ಸಭೆ

ಹುಣಸೂರು, ಜೂ.3– ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಹುಣಸೂರು ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆ (ಎಸ್ಐಆರ್) ಕುರಿತು ಚರ್ಚಿಸಲು ಜೂ.5ರಂದು ರಾಜಕೀಯ ಪಕ್ಷಗಳ ಪ್ರಮುಖ ಮುಖಂಡರ ಮಹತ್ವದ ಸಭೆ ಕರೆಯಲಾಗಿದೆ.

ಅಂದು ಮಧ್ಯಾಹ್ನ 1 ಗಂಟೆಗೆ ನಗರದ ಉಪ ವಿಭಾಗಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮೈಸೂರು ಜಿಲ್ಲಾಧಿಕಾರಿ ಕಚೇರಿಯ ನಿರ್ದೇಶನದನ್ವಯ ಸಭೆ ನಡೆಯಲಿದ್ದು, ಕ್ಷೇತ್ರದ ಎಲ್ಲಾ ರಾಷ್ಟ್ರೀಯ ಹಾಗೂ ಪ್ರಾದೇಶಿಕ ರಾಜಕೀಯ ಪಕ್ಷಗಳ ಅಧ್ಯಕ್ಷರು ಮತ್ತು ಮುಖಂಡರು ಸಭೆಗೆ ತಪ್ಪದೇ ಹಾಜರಾಗಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಚುನಾವಣಾ ಆಯೋಗ ಪ್ರಕಟಿಸಿರುವ ವೇಳಾಪಟ್ಟಿಯಂತೆ ಅರ್ಹ ಮತದಾರರ ಸೇರ್ಪಡೆ, ತಿದ್ದುಪಡಿ ಹಾಗೂ ಪಾರದರ್ಶಕ ಮತದಾರರ ಪಟ್ಟಿ ಸಿದ್ಧಪಡಿಸುವಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಸಹಕಾರ ಪಡೆಯುವುದು ಈ ಸಭೆಯ ಮುಖ್ಯ ಉದ್ದೇಶವಾಗಿದೆ.

ಹಳೇ ಮೈಸೂರು–ಬಂಟ್ವಾಳ ಹೆದ್ದಾರಿ ಅಭಿವೃದ್ಧಿಗೆ ಚಾಲನೆ



ಹೆದ್ದಾರಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಚಾಲನೆ ನೀಡಿದರು.

ಹುಣಸೂರು, ಜೂ.3– ನಗರ ವ್ಯಾಪ್ತಿಯ ಹಳೆಯ ಮೈಸೂರು–ಬಂಟ್ವಾಳ ರಾಜ್ಯ ಹೆದ್ದಾರಿ (88)ಯನ್ನು ಲೋಕೋಪಯೋಗಿ ಇಲಾಖೆ ವತಿಯಿಂದ 7 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಸೇರಿದಂತೆ ಒಟ್ಟು 8.50 ಕೋಟಿ ರೂ. ವೆಚ್ಚದ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ನಗರದ ಹಳೆ ಬಸ್ ನಿಲ್ದಾಣದ ಬಳಿ ಬುಧವಾರ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನಗರದ ಅರಸು ಪುತ್ಥಳಿಯಿಂದ ಆರಂಭಗೊಂಡು ಹಳೆಯ ಸೇತುವೆವರೆಗೆ (ಆಯ್ದ ಭಾಗಗಳಲ್ಲಿ) 4.7 ಕಿಮೀ ಉದ್ದದ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಿ ರಸ್ತೆಯ ಎರಡೂ ಕಡೆಗಳಲ್ಲಿ ನೀರು ಸರಾಗವಾಗಿ ಹರಿಯುವಂತಾಗಲು ಸಿಸಿ ಚರಂಡಿ ನಿರ್ಮಿಸಲಾಗುವುದು ಎಂದರು.

ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪದಗ್ರಹಣ ಮಾಡಿದ್ದು, ಮುಂದಿನ ದಿನಗಳಲ್ಲಿ ಹುಣಸೂರಿನ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡುವರು ಎಂಬ ವಿಶ್ವಾಸವಿದೆ. ಈ ಹಿಂದಿನ ಸಿದ್ದರಾಮಯ್ಯ ಸರ್ಕಾರದಲ್ಲಿ ಜಲಸಂಪನ್ಮೂಲ ಸಚಿವರಾಗಿ ಡಿ.ಕೆ.ಶಿವಕುಮಾರ್ ನೀರಾವರಿ ಯೋಜನೆಗಳಿಗೆ ಅನುದಾನ ನೀಡಿದ್ದರು. ಈ ಪೈಕಿ ಕಟ್ಟೆಮಳಲವಾಡಿ ನಾಲೆ ಅಭಿವೃದ್ಧಿಗೆ 38 ಕೋಟಿ ರೂ. ಮತ್ತು ಮರೂರು ಬ್ರಾಂಚ್ ಒಡಕೆಟ್ಟೆ ನಾಲೆ ಅಭಿವೃದ್ಧಿಗೆ 92 ಕೋಟಿ ರೂ. ಮೀಸಲಿದ್ದು, ಮುಂದಿನ ತಿಂಗಳಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದರು.

ಗೋಂಧಳಿ ಸಮುದಾಯ ಭವನಕ್ಕೆ 20 ಲಕ್ಷ ರೂ., ನಗರದ ಗಾಣಿಗ ಸಮುದಾಯ ಭವನಕ್ಕೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ರಾಜ್ಯಸಭಾ ಸದಸ್ಯರ ನಿಧಿಯಿಂದ 20 ಲಕ್ಷ ರೂ. ಮಂಜೂರಾಗಿದ್ದು, ಕಾಮಗಾರಿ ಆರಂಭಿಸಲಾಗುವುದು. ಮುಂದಿನ ದಿನಗಳಲ್ಲಿ ತಾಲೂಕಿನಲ್ಲಿ ನಿತ್ಯ ಹೊಸ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು. ತಾಲೂಕಿನ ಜೀವನದಿ ಲಕ್ಷ್ಮಣತೀರ್ಥ ನದಿ ಶುದ್ಧೀಕರಣ ಪ್ರಸ್ತಾವನೆ ಸರ್ಕಾರದ ಮುಂದಿಟ್ಟಿದ್ದು, ಈ ಅವಧಿಯಲ್ಲೇ ಯೋಜನೆ ಪೂರ್ಣಗೊಳಿಸುವ ವಿಶ್ವಾಸವಿದೆ ಎಂದರು.

> **"ಮಾಜಿ ಸಿಎಂ ಸಿದ್ದರಾಮಯ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಹೊಡೆತಕ್ಕೆ ಸಿಲುಕಿ ಅನುದಾನದ ಕೊರತೆ ಎದುರಿಸಿತ್ತು. ಈಗ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿದ್ದು, ಗ್ಯಾರಂಟಿಗಳೊಂದಿಗೆ ಅಭಿವೃದ್ಧಿಗೂ ಅನುದಾನ ನೀಡುವಂತಾಗಲಿ. ತಾಲೂಕಿನ ಅಭಿವೃದ್ಧಿಗೂ ಸಹಕರಿಸುತ್ತಾರೆ ಎಂಬ ವಿಶ್ವಾಸವಿದೆ. – ಜಿ.ಡಿ.ಹರೀಶ್‌ಗೌಡ, ಶಾಸಕ.**

ಮಳಿಗೆ ನಿರ್ಮಾಣ: ನಗರದ ಹಳೆ ಬಸ್ ನಿಲ್ದಾಣದ ಮುಂಭಾಗ ವ್ಯಾಪಾರ ಮಾಡುವ ಹೂ ಮಾರಾಟಗಾರರಿಗೆ ಶಾಸಕರ ನಿಧಿಯಿಂದ 10 ಲಕ್ಷ ರೂ. ಅಡಿ ಶಾಶ್ವತ ಮಳಿಗೆ ನಿರ್ಮಾಣಕ್ಕೂ ಶಾಸಕ ಜಿ.ಡಿ.ಹರೀಶ್‌ಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ಈ ವೇಳೆ ಜೆಡಿಎಸ್ ತಾಲೂಕು ಅಧ್ಯಕ್ಷ ಎಂ.ಬಿ.ಸುರೇಂದ್ರ, ಪ್ರಧಾನ ಕಾರ್ಯದರ್ಶಿ ಸತೀಶ್ ಕುಮಾರ್, ನಗರಸಭೆ ಮಾಜಿ ಅಧ್ಯಕ್ಷ ಮಾಲೀಕ್ ಪಾಷ, ಸದಸ್ಯರಾದ ಕೃಷ್ಣರಾಜಗುಪ್ತ, ಹರೀಶ್, ಟಿಎಪಿಎಂಎಸ್ ಸದಸ್ಯ ಗೋವಿಂದೇಗೌಡ, ಕುಮಾರ್, ಫಜಲುಲ್ಲಾ, ಪ್ರೇಮ್ ಕುಮಾರ್, ಕೆಂಪೇಗೌಡ, ಪೌರಾಯುಕ್ತೆ ಎಂ.ಮಾನಸ, ಎಇಇ ಯತೀಶ್ ಇತರರಿದ್ದರು.

ಶಾಲಾ ಮಕ್ಕಳಿಗೆ ನೋಟ್‌ಬುಕ್, ಬ್ಯಾಗ್ ವಿತರಣೆ



ಮಕ್ಕಳಿಗೆ ಶಾಲಾ ಬ್ಯಾಗ್, ನೋಟ್ ಬುಕ್ ವಿತರಿಸಲಾಯಿತು.

ತಿ.ನರಸೀಪುರ, ಜೂ.3– ತಾನು ಪ್ರಾಥಮಿಕ ಶಿಕ್ಷಣ ಪಡೆದ ಸರ್ಕಾರಿ ಶಾಲಾ ಮಕ್ಕಳಿಗೆ ತಾಲೂಕಿನ ಸೋಮನಾಥಪುರ ಪಿಎಸಿಎಸ್ ನಿರ್ದೇಶಕ ಶ್ರೀರಂಗರಾಜಪುರ ಎಂ.ಸಿದ್ದರಾಜು ನೋಟ್ ಬುಕ್ ಹಾಗೂ ಶಾಲಾ ಬ್ಯಾಗ್‌ಗಳನ್ನು ವಿತರಿಸುವ ಮೂಲಕ ಶಿಕ್ಷಣದ ಬಗೆಗಿನ ತಮ್ಮ ಕಾಳಜಿ ಮತ್ತು ಅಭಿಮಾನ ವ್ಯಕ್ತಪಡಿಸಿದರು.

ತಾಲೂಕಿನ ಶ್ರೀರಂಗರಾಜಪುರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ನೋಟ್ ಬುಕ್, ಶಾಲಾ ಬ್ಯಾಗ್ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜೀವನದಲ್ಲಿ ಉನ್ನತ ಸ್ಥಾನಕ್ಕೇರಲು ಸರ್ಕಾರಿ ಶಾಲೆ ಶಿಕ್ಷಕರು ನೀಡಿದ ಶಿಕ್ಷಣ, ಮಾರ್ಗದರ್ಶನವೇ ಕಾರಣ. ಹೀಗಾಗಿ ಶಾಲೆಯ ವಿದ್ಯಾರ್ಥಿಗಳಿಗೆ ತಮ್ಮ ಕೈಲಾದ ಸಹಾಯ ಮಾಡುವ ಉದ್ದೇಶದಿಂದ ನೋಟ್ ಬುಕ್ ಹಾಗೂ ಶಾಲಾ ಬ್ಯಾಗ್‌ಗಳನ್ನು ವಿತರಿಸಲಾಗುತ್ತಿದೆ ಎಂದು ತಿಳಿಸಿದರು.

ಗ್ರಾಮೀಣ ವಿದ್ಯಾರ್ಥಿಗಳು ಹಿಂಜರಿಕೆ ಇಲ್ಲದೆ ಸಾಧನೆ ಮಾಡಬೇಕು. ಸರ್ಕಾರಿ ಶಾಲೆಗಳಲ್ಲಿ ಉತ್ತಮ ಅವಕಾಶ ಮತ್ತು ಗುಣಮಟ್ಟದ ಶಿಕ್ಷಣ ದೊರೆಯುತ್ತಿದ್ದು, ವಿದ್ಯಾರ್ಥಿಗಳು ಅದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಶಿಕ್ಷಣವು ಮಕ್ಕಳ ಭವಿಷ್ಯ ರೂಪಿಸುವ ಶಕ್ತಿಯಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಉತ್ತಮ ಶಿಕ್ಷಣ ಪಡೆಯುವ ಮೂಲಕ ಸಮಾಜದಲ್ಲಿ ಉನ್ನತ ಸ್ಥಾನ ಗಳಿಸಬೇಕು. ಗ್ರಾಮೀಣ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸೌಲಭ್ಯಗಳ ಕೊರತೆ ಉಂಟಾಗದಂತೆ ಸಮಾಜದ ಪ್ರತಿಯೊಬ್ಬರೂ ಕೈಜೋಡಿಸಬೇಕಿದೆ ಎಂದರು.

ಮಂಡಲ ಪಂಚಾಯ್ತಿ ಮಾಜಿ ಚೇರ್ಮನ್ ಪುಟ್ಟಸ್ವಾಮಿ, ಸೊಸೈಟಿ ನಿರ್ದೇಶಕ ಸುಂದರ್, ಶಿವಣ್ಣ, ಎಸ್‌ಡಿಎಂಸಿ ಅಧ್ಯಕ್ಷ ಶ್ರೀನಿವಾಸ್, ಬಿ.ಲೋಕೇಶ್, ಯಜಮಾನ್ ಮಹದೇವ, ಶ್ರೀನಿವಾಸ ಪ್ರಸಾದ್, ಮುಖ್ಯಶಿಕ್ಷಕಿ ಶೆರ್ಲಿ, ಸಹ ಶಿಕ್ಷಕಿ ಶಿಲ್ಪ ಇದ್ದರು.

ಮೈಸೂರು ಮಿತ್ರ
ಗುರುವಾರ 4 ಜೂನ್ 2026

ಪೂರ್ವ ಮುಂಗಾರು ಕೊರತೆ ನಡುವೆಯೂ ಮೈಸೂರು ಜಿಲ್ಲೆಯ ಶೇ.28ರಷ್ಟು ಪ್ರದೇಶದಲ್ಲಿ ಬಿತ್ತನೆ

ಮೈಸೂರು, ಜೂ.3(ಎಂಕೆ)– ಪೂರ್ವ ಮುಂಗಾರು ಕೊರತೆ ನಡುವೆ ಮೈಸೂರು ಜಿಲ್ಲೆಯಾದ್ಯಂತ ಕೃಷಿ ಚಟುವಟಿಕೆಗಳು ಆರಂಭವಾಗಿದ್ದು, ಇದುವರೆಗೆ ಶೇ.28ರಷ್ಟು ಪ್ರದೇಶದಲ್ಲಿ ಬಿತ್ತನೆಯಾಗಿದೆ.

ಏಪ್ರಿಲ್‌ನಲ್ಲಿ ಶೇ.85 ರಷ್ಟು, ಮೇ ತಿಂಗಳಲ್ಲಿ ಶೇ.23ರಷ್ಟು ಸೇರಿ ಮಾರ್ಚ್‌ನಿಂದ ಇಲ್ಲಿಯವರೆಗೆ ಶೇ.42ರಷ್ಟು ಮಳೆ ಪ್ರಮಾಣ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಬಿತ್ತನೆ ಪ್ರಮಾಣವೂ ಕಡಿಮೆಯಾಗಿದ್ದು, ಇದೇ ವೇಳೆಗೆ ಕಳೆದ ವರ್ಷಕ್ಕಿಂತ ಶೇ.13ರಷ್ಟು ಬಿತ್ತನೆ ಪ್ರಮಾಣ ಕಡಿಮೆಯಾಗಿದೆ.

ಜಿಲ್ಲೆಯಲ್ಲಿ ಮುಂಗಾರಿಗೆ 3,76,609 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಿದ್ದು, ಇಲ್ಲಿಯವರೆಗೆ 1,05,880 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಕಳೆದ ವರ್ಷ ಇದೇ ಅವಧಿಗೆ ಶೇ.41 ರಷ್ಟು ಬಿತ್ತನೆಯಾಗಿತ್ತು. ಆದರೆ ಈ ವರ್ಷ ಪೂರ್ವ ಮುಂಗಾರಿನ ಕೊರತೆಯಿಂದಾಗಿ ಶೇ.28 ರಷ್ಟು ಹೆಕ್ಟೇರ್ ಪ್ರದೇಶದಲ್ಲಿ ಮಾತ್ರವೇ ಬಿತ್ತನೆಯಾಗಿದೆ.

ಕಳೆದ ಬಾರಿಗಿಂತ ಶೇ.13ರಷ್ಟು ಬಿತ್ತನೆ ಪ್ರಮಾಣ ಕುಸಿತ



ಪ್ರಮುಖವಾಗಿ ಮುಸುಕಿನ ಜೋಳ 31,160 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದರೆ, ತಂಬಾಕು 51,817, ಅಲಸಂದೆ 8,976, ಉದ್ದು 2601, ಹೆಸರುಕಾಳು 1661, ಅವರೆ 498, ಸೂರ್ಯಕಾಂತಿ 663, ಎಳ್ಳು 57, ನೆಲಗಡಲೆ 24, ಹತ್ತಿ 3,780 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಕಾರ್ಯ ನಡೆದಿದೆ.

ಜೂ.5ಕ್ಕೆ ಮುಂಗಾರು ಪ್ರವೇಶ...!

ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆಯ ಪ್ರಕಾರ, ನೈಋತ್ಯ ಮುಂಗಾರು ಜೂ.5ರ ಸುಮಾರಿಗೆ ಕರ್ನಾಟಕ ಕರಾವಳಿಯನ್ನು ಪ್ರವೇಶಿಸಲಿದೆ. ಮುಂಗಾರು ಪ್ರವೇಶ ತಡವಾಗಬಹುದು ಎಂಬ ಊಹಾಪೋಹಗಳಿದ್ದರೂ, ಕಳೆದ ಎರಡ್ಮೂರು ದಿನಗಳ ಮೈಸೂರು ಸೇರಿದಂತೆ ರಾಜ್ಯದ ವಿವಿಧೆಡೆ ಮಳೆಯಾಗುತ್ತಿರುವುದು ಕೃಷಿಕರಿಗೆ ಮತ್ತು ಜನಸಾಮಾನ್ಯರಿಗೆ ನೆಮ್ಮದಿ ತಂದಿದೆ.

ಹತ್ತಿ ಬಿತ್ತನೆಯಲ್ಲಿ ಇಳಿಕೆ: 2022–23ನೇ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಾದ್ಯಂತ 48 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಹತ್ತಿ ಬಿತ್ತನೆಯಾಗಿತ್ತು. ಬಳಿಕ ವರ್ಷದಿಂದ ವರ್ಷಕ್ಕೆ ಹತ್ತಿ ಬಿತ್ತನೆ ಪ್ರಮಾಣ ಕಡಿಮೆಯಾಗುತ್ತಿದ್ದು, ಈ ವರ್ಷ ಕೇವಲ 3,780 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರವೇ ಬಿತ್ತನೆಯಾಗಿದೆ.

ಬಿತ್ತನೆ ಬೀಜ ಕೊರತೆ ಇಲ್ಲ: ಜಿಲ್ಲೆಯಲ್ಲಿ ಬಿತ್ತನೆ ಬೀಜ ಕೊರತೆ ಇಲ್ಲ. ರೈತರ ಬೇಡಿಕೆ ತಕ್ಕಂತೆ ಬಿತ್ತನೆ ಬೀಜ ದಾಸ್ತಾನಿದ್ದು, ಇಲ್ಲಿಯವರೆಗೆ ಜಿಲ್ಲೆಯ 11390 ರೈತರಿಗೆ 1,397 ಕ್ವಿಂಟಾಲ್ ಬಿತ್ತನೆ ಬೀಜ ವಿತರಣೆ ಮಾಡಲಾಗಿದೆ. ಹಾಗೆಯೇ ರಸಗೊಬ್ಬರದ ದಾಸ್ತಾನೂ ಅಗತ್ಯತೆಯಷ್ಟಿದ್ದು, ಕೆಲ ಡೀಲರ್‌ಗಳು ಖರೀದಿಸಿ ಮಾರಾಟ ಮಾಡಲು ಹಿಂದೇಟು ಹಾಕುತ್ತಿರುವುದರಿಂದ ಮಾತ್ರವೇ ವಿತರಣೆಯಲ್ಲಿ ಕೊರತೆ ಕಂಡುಬಂದಿದೆ ಎಂದು ಜಂಟಿ ಕೃಷಿ ನಿರ್ದೇಶಕ ಕೆ.ಹೆಚ್.ರವಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪೂರ್ವ ಮುಂಗಾರು ಕೊರತೆ: ಶೇ.42 ರಷ್ಟು ಪೂರ್ವ ಮುಂಗಾರು ಕೊರತೆಯಾಗಿದೆ. ಕಳೆದ ಮೂರು ತಿಂಗಳ ಅವಧಿಯಲ್ಲಿ 198 ಮಿಲಿ ಮೀಟರ್ ವಾಡಿಕೆ ಮಳೆಯಾಗಬೇಕಿತ್ತು. ಆದರೆ 114 ಮಿಲಿ ಮೀಟರ್ ಮಳೆ ಬಿದ್ದಿದೆ. ಇದರಿಂದ ಬಿತ್ತನೆ ಪ್ರಮಾಣವೂ ಕಡಿಮೆಯಾಗಿದೆ. ಮುಂಗಾರು ಉತ್ತಮವಾಗಿದ್ದರೆ, ಬಿತ್ತನೆ ಪ್ರಮಾಣ ಹೆಚ್ಚಾಗಲಿದೆ ಎಂದು ಮಾಹಿತಿ ನೀಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕೆಡಿ (ಕ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರೆಬೆಲ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ಕಾಟಾಳನ್ (ಕ)	4 ಪ್ರದರ್ಶನಗಳು
ಲಿಡೋ	
ಆತುಡು(ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕುಚುಕು (ಕ)	4 ಪ್ರದರ್ಶನಗಳು

ರೈಲ್ವೆ ಪ್ರಯಾಣಿಕರಿಂದ ಹಣ ಸಂಗ್ರಹಿಸುತ್ತಿದ್ದ ನಕಲಿ ಟಿಟಿಇ ಬಂಧನ

ಮೈಸೂರು, ಜೂ.3(ಬಿಎಲ್‌ಯು)– ರೈಲ್ವೆ ಪ್ರಯಾಣಿಕರಿಂದ ಹಣ ಸಂಗ್ರಹಿಸುತ್ತಿದ್ದ ನಕಲಿ ಟಿಟಿಇಯನ್ನು ಮೈಸೂರಿನ ಆರ್ ಪಿಎಫ್ ಪೊಲೀಸರು ಬಂಧಿಸಿದ್ದಾರೆ. ಶಿವಮೊಗ್ಗ ವಾಸಿ ಎಂ.ಕೆ. ರಕೀಬುದ್ದೀನ್ ಬಂಧಿತ ಆರೋಪಿಯಾಗಿದ್ದಾನೆ.

ಬೆಂಗಳೂರು– ಶಿವಮೊಗ್ಗ ಟೌನ್ ಜನಶತಾಬ್ದಿ ಎಕ್ಸ್‌ಪ್ರೆಸ್ ರೈಲಿನಲ್ಲಿ ತಾನು ಟಿಟಿಇ ಎಂದು ಪ್ರಯಾಣಿಕರಿಂದ ಹಣ ಸಂಗ್ರಹಿಸುತ್ತಿದ್ದನು. ಅರಸೀಕೆರೆ ರೈಲ್ವೆ ನಿಲ್ದಾಣ ದಾಟಿದ ನಂತರ ಆರ್‌ಪಿಎಫ್ ಅಧಿಕಾರಿಗಳು ಆತನಿದ್ದ ಬೋಗಿಗೆ ಹೋಗಿ ಪರಿಶೀಲನೆ ನಡೆಸಿದಾಗ ಈತ ಸಿಕ್ಕಿ ಬಿದ್ದನು.

ತನ್ನ ಮೊಬೈಲ್‌ನಲ್ಲಿರುವ ನಕಲಿ ಗುರುತಿನ ಚೀಟಿ ತೋರಿಸಿ ಹಣ ಸಂಗ್ರಹಿಸುತ್ತಿದ್ದನು. ಪ್ರಯಾಣಿಕರಿಂದ ಹಣ ಸಂಗ್ರಹಿಸುವ ಉದ್ದೇಶದಿಂದ ಟಿಟಿಇ ವೇಷ ಧರಿಸಿರುವುದಾಗಿ ರಕೀಬುದ್ದೀನ್ ತನಿಖೆ ವೇಳೆ ತಿಳಿಸಿದ್ದಾನೆ.

ಅರಸೀಕೆರೆ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಿಸಿದ್ದು, ಈತನನ್ನು ಆರ್ ಪಿಎಫ್ ತಂಡ ಬಂಧಿಸಿದೆ.

ಮೊಬೈಲ್ ವಾಪಸ್ಸು: ಗುಂತಕಲ್‌ನಿಂದ ಮಂಡ್ಯದವರೆಗೆ ಪ್ರಯಾಣಿಸುವ ರೈಲಿನಲ್ಲಿ ದಿಲೀಪ್ ಕುಮಾರ್ ರೆಡ್ಡಿ ಎಂಬುವರು ಮೊಬೈಲ್ ಕಳೆದುಕೊಂಡಿದ್ದರು. ಈ ಬಗ್ಗೆ ದಿಲೀಪ್ ಅವರು ರೈಲ್ ಮದದ್ ಪೋರ್ಟಲ್ ಮೂಲಕ ದೂರು ದಾಖಲಿಸಿದ್ದರು. ಕೂಡಲೇ ಕಾರ್ಯ ಪ್ರವೃತ್ತರಾದ ಆರ್ ಪಿಎಫ್ ತಂಡ ಪರಿಶೀಲನೆ ನಡೆಸಿ ಬೇರೊಬ್ಬರ ಬಳಿ ಇದ್ದ ಮೊಬೈಲ್ ಅನ್ನು ಪತ್ತೆ ಮಾಡಿ ದಿಲೀಪ್ ಅವರಿಗೆ ಹಿಂತಿರುಗಿಸಿದ್ದಾರೆ.

ಪಶುಪಾಲನಾ ಇಲಾಖೆ ಉಪನಿರ್ದೇಶಕ ಡಾ.ನಾಗರಾಜುಗೆ ಬೀಳ್ಕೊಡುಗೆ



ಡಾ. ನಾಗರಾಜು ಹಾಗೂ ಪತ್ನಿ ಡಾ. ಆರ್. ಜಯಮಾಲ ಅವರನ್ನು ಪಶು ಸಂಗೋಪನಾ ಇಲಾಖೆಯ ನಿರ್ದೇಶಕ ಡಾ. ಪಿ. ಶ್ರೀನಿವಾಸ್ ಹಾಗೂ ಸಿಬ್ಬಂದಿವರ್ಗ ಆತ್ಮೀಯವಾಗಿ ಅಭಿನಂದಿಸಿ ಬೀಳ್ಕೊಟ್ಟರು.

ಮೈಸೂರು, ಜೂ.3 – ಪಶುಪಾಲನಾ ಇಲಾಖೆಯಲ್ಲಿ 35 ವರ್ಷ ಸೇವೆ ಸಲ್ಲಿಸಿ ವಯೋನಿವೃತ್ತರಾದ ಮೈಸೂರು ಜಿಲ್ಲೆಯ ಪಶುಪಾಲನಾ ಇಲಾಖೆಯ ಉಪ ನಿರ್ದೇಶಕ ಡಾ. ನಾಗರಾಜು ಹಾಗೂ ಪತ್ನಿ ಡಾ. ಆರ್. ಜಯಮಾಲ ಅವರನ್ನು ಪಶು ಸಂಗೋಪನಾ ಇಲಾಖೆಯ ನಿರ್ದೇಶಕ ಡಾ. ಪಿ. ಶ್ರೀನಿವಾಸ್ ಹಾಗೂ ಸಿಬ್ಬಂದಿವರ್ಗ ಆತ್ಮೀಯವಾಗಿ ಅಭಿನಂದಿಸಿ ಬೀಳ್ಕೊಟ್ಟರು.

ನಗರದ ಪಶುಪಾಲನಾ ಇಲಾಖೆಯ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ನಾಗರಾಜು, ನಾನು ಬೀದರ್, ಮೇಲುಕೋಟೆ, ಬೆಂಗಳೂರು, ತಿಪಟೂರು, ಮೈಸೂರಿನಲ್ಲಿ ಪಶು ವೈದ್ಯಾಧಿಕಾರಿಯಾಗಿ, ಸಹಾಯಕ ನಿರ್ದೇಶಕರಾಗಿ, ಉಪನಿರ್ದೇಶಕರಾಗಿ ಕೆಲವು ಕಾಲ ಜಂಟಿ ನಿರ್ದೇಶಕರಾಗಿ, ಹೆಚ್.ಡಿ. ಕೋಟೆ ತಾಲ್ಲೂಕು ಪಂಚಾಯಿತಿ ಆಡಳಿತಾಧಿಕಾರಿಯಾಗಿ ಯಶಸ್ವಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.


ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯರವರು, ಪಶುಸಂಗೋಪನಾ ಸಚಿವರಾಗಿದ್ದ ಕೆ. ವೆಂಕಟೇಶ್ ಸಹಕಾರದಿಂದ ಜಿಲ್ಲೆಯಲ್ಲಿ 17 ಹೊಸ ಆಸ್ಪತ್ರೆ ನಿರ್ಮಾಣವಾಗಿವೆ. ಇದಲ್ಲದೇ ಕಿರಿಯ ಪಶುವೈದ್ಯ ಪರೀಕ್ಷಕರ ನೇಮಕ, 12 ಜನ ಗುತ್ತಿಗೆ ಪಶುವೈದ್ಯರ ನೇಮಕ, 180 ಜನ ಡಿ–ಗ್ರೂಪ್ ಗುತ್ತಿಗೆ ನೌಕರರನ್ನು ನೇಮಕ ಮಾಡಿ ಒಂದು ದಿನವೂ ರಜೆ ತೆಗೆದುಕೊಳ್ಳದೇ ರೈತರ, ಬಡವರ ಬದುಕನ್ನು ಹಸನು ಮಾಡಲು ಪ್ರಯತ್ನ ಮಾಡಿದ್ದೇನೆ. ಜಾನುವಾರುಗಳಿಗೆ ರೋಗ ಹರಡದಂತೆ ಕ್ರಮ, ರೈತರು ಹಾಗೂ ನಿರುದ್ಯೋಗಿ ಯುವಕರು ಹೈನುಗಾರಿಕೆಗೆ ತೊಡಗಿಸಿಕೊಳ್ಳಲು ಪ್ರೋತ್ಸಾಹ. ಜಿಲ್ಲಾ ರೈತ ತರಬೇತಿ ಕೇಂದ್ರ ಸ್ಥಾಪನೆ, ವರುಣಾದ ಆಯರಹಳ್ಳಿಯಲ್ಲಿ ಗೋಶಾಲೆ, ಪಿರಿಯಾಪಟ್ಟಣದ ಕಂಪಲಾಪುರದಲ್ಲಿ ಬಂಡೂರು ತಳಿ ಫಾರಂ ಅಭಿವೃದ್ಧಿ ಯೋಜನೆ, ಬೋಯರ್ ಮೇಕೆತಳಿ ಅಭಿವೃದ್ಧಿ ಕೇಂದ್ರ ಸ್ಥಾಪನೆ, ಕೇಂದ್ರ ಸರ್ಕಾರದಿಂದ ಕುರಿ, ಕೋಳಿ, ಹಂದಿ ಸಾಕಾಣೆಯ ಉದ್ಯಮ ಸ್ಥಾಪನೆಗೆ 43 ಜನರಿಗೆ ಸಹಾಯಧನ ನೀಡಲಾಗಿದೆ.

ಇವೆಲ್ಲದರ ಪರಿಣಾಮವಾಗಿ ರಾಜ್ಯಮಟ್ಟದಲ್ಲಿ ಪಶುಪಾಲನಾ ಇಲಾಖೆಯ ಪ್ರಗತಿಯಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಹೆಮ್ಮೆ ನನಗಿದೆ. ಈ ಎಲ್ಲಾ ಸಾಧನೆಗೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಅಧಿಕಾರಿಗಳು ನಮ್ಮ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳ ಸಹಕಾರವನ್ನು ಮರೆಯಲು ಸಾಧ್ಯವಿಲ್ಲ. ಈ 35 ವರ್ಷದ ಸೇವೆ ನನಗೆ ತೃಪ್ತಿ ತಂದಿದೆ ಎಂದು ಎಲ್ಲರಿಗೂ ಧನ್ಯವಾದ ಅರ್ಪಿಸಿದರು.

ಪಶುಸಂಗೋಪನಾ ಇಲಾಖೆಯ ನಿರ್ದೇಶಕ ಡಾ. ಪಿ. ಶ್ರೀನಿವಾಸ್ ಮಾತನಾಡಿ ನಾಗರಾಜುರವರು ಇಲಾಖೆಯಲ್ಲಿ ರೈತರು, ಬಡವರಪರ ಕಾಳಜಿ ವಹಿಸಿ ಕೆಲಸ ಮಾಡಿದ್ದಾರೆ. ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ರೈತರಿಗೆ ದೊರಕಿಸಿಕೊಡುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ದಸರಾ ಸಂದರ್ಭದಲ್ಲಿ ಹಾಲು ಕರೆಯುವ ಸ್ಪರ್ಧೆ ಹಾಗೂ ಶ್ವಾನ ಪ್ರದರ್ಶನವನ್ನು ರಾಷ್ಟ್ರಮಟ್ಟದಲ್ಲಿ ನಡೆಸಿ ಯಶಸ್ವಿಯಾಗಿದ್ದಾರೆ. ಅವರ ನಿವೃತ್ತಿಯ ಜೀವನ ಸುಖಕರವಾಗಿರಲಿ ಎಂದರು.

ಸಮಾರಂಭದಲ್ಲಿ ಪಶುಪಾಲನಾ ಇಲಾಖೆಯ ಅಪರ ನಿರ್ದೇಶಕ ಡಾ. ಪ್ರಸಾದ ಮೂರ್ತಿ, ಜಂಟಿನಿರ್ದೇಶಕ ಡಾ. ಶ್ರೀಧರ್ ಮೂರ್ತಿ, ಕೆ.ವಿ.ಸಿ. ಅಧ್ಯಕ್ಷ ಡಾ. ಶಂಕರ್, ಡಾ. ಸಿದ್ದರಾಮು, ಪಶು ವೈದ್ಯರ ಸಂಘದ ಪ್ರಧಾನ ಕಾರ್ಯದರ್ಶಿ ಡಾ. ಅನಿಲ್, ಡಾ. ನಾಗರಾಜ್ ಪತ್ನಿ ಡಾ. ಜಯಮಾಲ, ಪುತ್ರಿ ಪ್ರಾರ್ಥನಾ, ಪಶುವೈದ್ಯರ ಸಂಘದ ಪದಾಧಿಕಾರಿಗಳು ಹಾಜರಿದ್ದರು.


ಅಭಿನಂದನೆ



ನೂತನ ಸಂಪುಟದಲ್ಲಿ ಸಚಿವರಾಗಿ ಆಯ್ಕೆಯಾದ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಮುಖಂಡರು ಅಭಿನಂದಿಸಿದರು. ಚಿತ್ರದಲ್ಲಿ ಮುಡಾ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಶಾಸಕ ಡಿ.ರವಿಶಂಕರ್, ಬ್ಲಾಕ್ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಅರಸನಕೆರೆ ಸ್ವಾಮಿಗೌಡ ಹಾಗೂ ಕೇರ್ಗಳ್ಳಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಮಾದೇವ್‌ರನ್ನು ಕಾಣಬಹುದು

ಶ್ರೀವೆಂಕಟಾಚಲ ಧಾಮದ 15ನೇ ಸಂವತ್ಸರೋತ್ಸವ

ಮೈಸೂರು, ಜೂ.3(ಎಂಕೆ)– ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಶ್ರೀ ವೆಂಕಟಾಚಲಧಾಮದ 15ನೇ ಸಂವತ್ಸರೋತ್ಸವ (ವಾರ್ಷಿಕೋತ್ಸವ) ಜೂ.5 ರಂದು ಉಡುಪಿ ಭಂಡಾರಕೇರಿ ಮಠದ ಪೀಠಾಧಿಪತಿ ಶ್ರೀ ವಿದ್ಯೇಶ ತೀರ್ಥ ಸ್ವಾಮೀಜಿ ದಿವ್ಯ ಸಾನಿಧ್ಯದಲ್ಲಿ ನೆರವೇರಲಿದೆ.



ಅಂದು ಬೆಳಗ್ಗೆ 7ಕ್ಕೆ ಪಂಚಾಶತ್ ಕಲಶಾರಾಧನೆ, 10 ಗಂಟೆಗೆ ವೆಂಕಟೇಶ ದೇವರ ಮೂಲ ಮೂರ್ತಿಗೆ ಬ್ರಹ್ಮ ಕಲಶಾಭಿಷೇಕ, ಪಂಚಾಮೃತ ಅಭಿಷೇಕ, ರಾಯರ ವೃಂದಾವನಕ್ಕೆ ವಿಶೇಷ ಅಲಂಕಾರ, ವೆಂಕಟೇಶ ದೇವರಿಗೆ ಚಿನ್ನದ ಕಿರೀಟ ಸಹಿತ ಅಲಂಕಾರ, ಸಂಸ್ಥಾನ ಪೂಜೆ, ಮಹಾ ಮಂಗಳಾರತಿ ಹಾಗೂ ಸಂಜೆ 7 ಗಂಟೆಗೆ ರಂಗಪೂಜೆ ಮತ್ತು ರಥೋತ್ಸವ ಪೂಜಾ ಕೈಂಕರ್ಯಗಳೊಂದಿಗೆ ಸಂಪನ್ನಗೊಳ್ಳಲಿದೆ.

2011ರ ಮೇ 24 ರಂದು ಪೇಜಾವರ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ ಮತ್ತು ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರು, ನೂತನ ಕಟ್ಟಡ ಶ್ರೀ ವೆಂಕಟಾಚಲ ಧಾಮವನ್ನು ಲೋಕಾರ್ಪಣೆಗೊಳಿಸಿದ್ದು, ಧಾಮದಲ್ಲಿ ಪ್ರತಿನಿತ್ಯ ವಿವಿಧ ಸಾಂಪ್ರದಾಯಿಕ ಪೂಜಾ ಕೈಂಕರ್ಯಗಳು ನಡೆಯುತ್ತಿವೆ.

ವಿದ್ವಾಂಸರಿಗೆ ಪ್ರಶಸ್ತಿ: ಸಂವತ್ಸರೋತ್ಸವ ದಿನದಂದು ವೇದ ವಿದ್ಯೆ ಪೋಷಣೆ ಮಾಡುವ ದೇಶದ ಒಂದು ಸಂಸ್ಥೆಗೆ ಮತ್ತು ನಾಲ್ವರು ಶಾಸ್ತ್ರಾಧ್ಯಯನ ವಿದ್ವಾಂಸರಿಗೆ 1 ಲಕ್ಷ ರೂ.ನಗದು ಪುರಸ್ಕಾರ ಸಹಿತ ವಿದ್ವತ್ ಸನ್ಮಾನ ಮಾಡಲಾಗುತ್ತಿದೆ. ಪ್ರತಿ ವರ್ಷವೂ ಕನ್ನಡದಲ್ಲಿ ಗ್ರಂಥ ಪ್ರಕಟಣೆಗೆ ಆದ್ಯತೆ ನೀಡಲಾಗಿದೆ. ಪಾಠ–ಪ್ರವಚನ ಇತ್ಯಾದಿ ಜ್ಞಾನ ಯಜ್ಞವನ್ನು ನಿರಂತರವಾಗಿ ಮಾಡುತ್ತಿದೆ ಎಂದು ಶ್ರೀ ವಿದ್ಯೇಶ ತೀರ್ಥ ಸ್ವಾಮೀಜಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಿನ ಭರಣಿ ಆರ್ಟ್ ಗ್ಯಾಲರಿಯ 32 ನೇ ವಾರ್ಷಿಕೋತ್ಸವ ಸಮಾರಂಭ

ಮೈಸೂರು, ಜೂ.3(ಬಿಎಲ್‌ಯು)– ಮೈಸೂರಿನ ಭರಣಿ ಆರ್ಟ್ ಗ್ಯಾಲರಿಯ 32ನೇ ವಾರ್ಷಿಕೋತ್ಸವ ಸಮಾರಂಭ ಜೂನ್ 7 ರಂದು ಗ್ಯಾಲರಿಯಲ್ಲಿ ನಡೆಯಲಿದೆ.



ಅಂದು ಬೆಳಿಗ್ಗೆ 11 ಗಂಟೆಗೆ ನಡೆಯುವ ಸಮಾರಂಭವನ್ನು ಮೈಸೂರಿನ ಆಡಳಿತ ತರಬೇತಿ ಕೇಂದ್ರದ ಜಂಟಿ ನಿರ್ದೇಶಕ ಸಾಧನಾ ಅಶೋಕ ಪೋತೆ ಅವರು ಉದ್ಘಾಟಿಸಲಿದ್ದಾರೆ. ಅಂದು ಸಂಸ್ಥೆಯ ಸಹ ಸಂಸ್ಥಾಪಕರಾಗಿದ್ದ ಶೀಲಾ ಕಾವೇರಪ್ಪ ನೆನಪು ಭಾವಚಿತ್ರ ಅನಾವರಣಗೊಳ್ಳಲಿದೆ.

ಬೆಳಗಾವಿಯ ಖ್ಯಾತ ಕಲಾವಿದ ಬಾಬುರಾವ್ ನಾಡೋಣಿ, ಭರಣಿ ಆರ್ಟ್ ಗ್ಯಾಲರಿಯ ಸಂಸ್ಥಾಪಕರಾದ ಎನ್.ಬಿ.ಕಾವೇರಪ್ಪ ಅವರು ವಿಶೇಷ ಅತಿಥಿಗಳಾಗಿ ಆಗಮಿಸಲಿದ್ದು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಅಂದಿನಿಂದ ಮೂರು ದಿನದವರೆಗೆ ನಾಡಿನ ಹಿರಿಯ ಕಲಾವಿದರ ಕಲಾತ್ಮಕ ಪ್ರದರ್ಶನ ಆಯೋಜಿಸಿದ್ದು, ಬಾಬುರಾವ್ ನಾಡೋಣಿ ಅವರ ಭಾವಚಿತ್ರ ಪ್ರಾತ್ಯಕ್ಷಿಕೆ ಕೂಡ ನಡೆಯಲಿದೆ.

ವಿವಿಧ ನೇಮಕಾತಿ ಪರೀಕ್ಷೆಗೆ ತರಬೇತಿ

ಮೈಸೂರು, ಜೂನ್ 3–ಮೈಸೂರಿನ ನೇತಾಜಿ ಕರಿಯರ್ ಅಕಾಡೆಮಿಯಿಂದ ಪಿಎಸ್‌ಟಿಆರ್, ಜಿಪಿಎಸ್‌ಟಿಆರ್, ಹೆಚ್‌ಎಸ್‌ಟಿಆರ್, ಎಸ್‌ಎಸ್‌ಸಿ, ರೈಲ್ವೆ ಹುದ್ದೆ ನೇಮಕಾತಿ ಪರೀಕ್ಷೆಗೆ 3 ತಿಂಗಳ ತರಬೇತಿ ಜೂನ್ 3 ರಿಂದ ಆರಂಭವಾಗಲಿದೆ. ಹೆಚ್ಚಿನ ಮಾಹಿತಿಗೆ 0821–3553964, 6364116745 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಖಾಲಿ ಇರುವ ವಿವಿಧ ವೃತ್ತಿಗಳಿಗೆ ಅರ್ಜಿ ಆಹ್ವಾನ

ಮೈಸೂರು: ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಎನ್.ಆರ್.ಮೊಹಲ್ಲಾ ಮೈಸೂರು ವತಿಯಿಂದ 2026–27ನೇ ಸಾಲಿನ ವಿವಿಧ ವೃತ್ತಿಗಳ ಖಾಲಿ ಸ್ಥಾನಗಳಿಗೆ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಹಾಗೂ 8ನೇ ತರಗತಿ ಪಾಸಾದವರಿಗೆ (ವೆಲ್ಡರ್ ವೃತ್ತಿಗೆ ಮಾತ್ರ) ಮೆರಿಟ್ ಆಧಾರದಲ್ಲಿ ಆಫ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಜೂನ್ 2ರಿಂದ ಆಗಸ್ಟ್ 31ರವರೆಗೆ ಅರ್ಜಿ ಸಲ್ಲಿಸಲು ಕಾಲಾವಕಾಶ ಇದೆ. ಪ್ರವೇಶ ಶುಲ್ಕ ರೂ. 1200 ಮತ್ತು ದಾಖಲಾತಿ ಪರಿಶೀಲನಾ ಶುಲ್ಕ 50 ರೂ., ಮಹಿಳಾ ಅಭ್ಯರ್ಥಿಗಳಿಗೆ ಉಚಿತ ಪ್ರವೇಶ. ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ನೇರವಾಗಿ ಅಥವಾ ದೂ.ಸಂ. 0821–2498456 ಮೂಲಕ ಸಂಪರ್ಕಿಸಬಹುದೆಂದು ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.3– ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ವೀರಶೈವ ಅನಾಥಾಲಯ ಟ್ರಸ್ಟ್ ವತಿಯಿಂದ ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ 2026–27 ನೇ ಸಾಲಿನಲ್ಲಿ ಪದವಿ ವ್ಯಾಸಂಗ ಮಾಡುತ್ತಿರುವ ಶೇ.50 ಕ್ಕಿಂತ ಹೆಚ್ಚು ಅಂಕಗಳಿಸಿರುವ ಆರ್ಥಿಕವಾಗಿ ಹಿಂದುಳಿದ ಗ್ರಾಮೀಣ ವೀರಶೈವ–ಲಿಂಗಾಯತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಅರ್ಜಿಗಳನ್ನು ಅನಾಥಾಲಯದ ಕಚೇರಿಯಲ್ಲಿ ವಿತರಿಸಲಾಗುತ್ತದೆ. ಭರ್ತಿ ಮಾಡಿದ ಅರ್ಜಿ ಸಲ್ಲಿಸಲು ಜೂನ್ 15 ಕಡೆಯ ದಿನ. ಅರ್ಹ ವಿದ್ಯಾರ್ಥಿಗಳನ್ನು ಜೂನ್ 21 ರಂದು ಬೆಳಗ್ಗೆ 10 ಗಂಟೆಗೆ ಅನಾಥಾಲಯದ ಕಚೇರಿಯಲ್ಲಿ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುತ್ತದೆ. ಸಂದರ್ಶನಕ್ಕೆ ವಿದ್ಯಾರ್ಥಿಗಳು ಕಡ್ಡಾಯವಾಗಿ ತಮ್ಮ ಪೋಷಕರನ್ನು ಜೊತೆಗೆ ಕರೆತರಬೇಕು. ಹೆಚ್ಚಿನ ಮಾಹಿತಿಗೆ ಮೊ: 9916650106 ಸಂಪರ್ಕಿಸಬಹುದು.

ರಾಜರ್ಷಿ ನಾಲ್ವಡಿಯವರ ಜಯಂತಿ

ಶ್ರೀಯುತರ ಕೊಡುಗೆ ಸ್ಮರಿಸಿ ಸಿಹಿ ವಿತರಣೆ

ಮೈಸೂರು, ಜೂ.3(ಎಂಕೆ)– ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿ ಅಂಗವಾಗಿ ಕರ್ನಾಟಕ ಸೇನಾ ಪಡೆ ವತಿಯಿಂದ ಮೈಸೂರು ಅರಮನೆಗೆ ಆಗಮಿಸುವ ಪ್ರವಾಸಿಗರಿಗೆ ಮೈಸೂರು ಪಾಕ್ ವಿತರಿಸಲಾಯಿತು.

ಅರಮನೆಯ ದಕ್ಷಿಣ ದ್ವಾರದ ವರಾಹ ಗೇಟ್ ಎದುರು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಅವರ ಕೊಡುಗೆಗಳನ್ನು ಸ್ಮರಿಸಿದ ಬಳಿಕ ದೇಶ–ವಿದೇಶಗಳಿಂದ ಅರಮನೆ ವೀಕ್ಷಣೆಗೆ ಆಗಮಿಸುತ್ತಿದ್ದ ಪ್ರವಾಸಿಗರಿಗೆ ಸಿಹಿ ವಿತರಿಸಲಾಯಿತು.

ಈ ವೇಳೆ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ದೂರದೃಷ್ಟಿಯ ಆಡಳಿತಗಾರರು, ಜನಪರ ರಾಜರು ಹಾಗೂ ರಾಜರ್ಷಿ ಬಿರುದಿಗೆ ಪಾತ್ರರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ನಾಡಿನ ಹೆಮ್ಮೆಯಾಗಿದ್ದಾರೆ ಎಂದು ಸ್ಮರಿಸಿದರು.

ಮೈಸೂರು ಸಂಸ್ಥಾನದ 24ನೇ ಮಹಾರಾಜರಾಗಿ ನಾಲ್ಕು ದಶಕಗಳ ಕಾಲ ಆಳ್ವಿಕೆ ನಡೆಸಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲವನ್ನು ಮೈಸೂರು ಸಂಸ್ಥಾನದ ಸುವರ್ಣಯುಗ ಎಂದು ಕರೆಯಲಾಗುತ್ತದೆ. ಮಹಿಳಾ ಶಿಕ್ಷಣ, ಮಹಿಳೆಯರ ಸಬಲೀಕರಣಕ್ಕೆ ಪ್ರೋತ್ಸಾಹ, ಎಲ್ಲಾ ಜಾತಿ–ಜನಾಂಗದವರ ಕಲ್ಯಾಣಕ್ಕೆ ಆದ್ಯತೆ, ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆ, ಕೆಆರ್‌ಎಸ್ ಡ್ಯಾಂ ಸೇರಿದಂತೆ ಅವರ ಕೊಡುಗೆಗಳು ಅಪಾರವಾಗಿವೆ ಎಂದು ನೆನೆದರು.



ಅರಮನೆಯ ದಕ್ಷಿಣ ದ್ವಾರದ ವರಾಹ ಗೇಟ್ ಎದುರು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿ ಅಂಗವಾಗಿ ಕರ್ನಾಟಕ ಸೇನಾ ಪಡೆ ವತಿಯಿಂದ ಮೈಸೂರು ಅರಮನೆಗೆ ಆಗಮಿಸುವ ಪ್ರವಾಸಿಗರಿಗೆ ಮೈಸೂರು ಪಾಕ್ ವಿತರಣೆ ಮಾಡಲಾಯಿತು.

ನಿಸ್ವಾರ್ಥ ಸೇವೆಗೆ ಮತ್ತೊಂದು ಹೆಸರು ನಾಲ್ವಡಿ...

"ಮೈಸೂರು ವಿವಿ, ಕೆಆರ್‌ಎಸ್ ಡ್ಯಾಂ ಸೇರಿದಂತೆ ಹಲವು ಕೊಡುಗೆಗಳನ್ನು ನೀಡಿರುವ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು, ಎಲ್ಲಿಯೂ ತಮ್ಮ ಹೆಸರನ್ನು ಹೇಳಿಕೊಂಡಿಲ್ಲ. ಮೈಸೂರಿನಲ್ಲಿ ಅನೇಕ ಆರೋಗ್ಯ ಸಂಸ್ಥೆಗಳನ್ನು ಸ್ಥಾಪಿಸಿ, ಮೈಸೂರನ್ನು ಮಾದರಿ ನಗರವನ್ನಾಗಿ ಅಭಿವೃದ್ಧಿ ಮಾಡಿರುವ ಅವರದ್ದು ನಿಸ್ವಾರ್ಥ ಸೇವೆಯಾಗಿದೆ

– ಸಿ.ಎನ್.ಮಂಜೇಗೌಡ, ವಿಧಾನ ಪರಿಷತ್ ಸದಸ್ಯ

ಕೃಷಿ, ಕೈಗಾರಿಕೆ, ಆರೋಗ್ಯ, ಶಿಕ್ಷಣ ಸೇರಿದಂತೆ ಎಲ್ಲಾ ಕ್ಷೇತ್ರಗಳಿಗೂ ಆದ್ಯತೆ ನೀಡಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆಗಳು ಮೈಸೂರಿನ ಮೂಲೆ ಮೂಲೆಯಲ್ಲೂ ಕಾಣುತ್ತಿವೆ. ಹಾಗೆಯೇ ಕಲೆ, ಸಾಹಿತ್ಯ, ಸಂಸ್ಕೃತಿಯ ಪೋಷಕರಾಗಿ ಸಾವಿರಾರು ಸಂಗೀತ ವಿದ್ವಾಂಸರಿಗೆ ಆಶ್ರಯ ನೀಡಿದ ಹೆಗ್ಗಳಿಕೆ ಅವರದ್ದಾಗಿದೆ ಎಂದು ತಿಳಿಸಿದರು.

ರಾಜ್ಯ ಸರ್ಕಾರವು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆಗಳನ್ನು ಸ್ಮರಿಸುತ್ತಾ, ಅವರ ಆದರ್ಶಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ನಿಟ್ಟಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಅತ್ಯಂತ ಶ್ಲಾಘನೀಯ. ಹಾಗೆಯೇ ರಾಜರ್ಷಿ ಅವರ ಜೀವನ ಮತ್ತು ಸಾಧನೆಗಳು ಯುವಜನತೆಗೆ ಸ್ಫೂರ್ತಿಯ ಮೂಲವಾಗಲಿ ಎಂದು ಆಶಯ ವ್ಯಕ್ತಪಡಿಸಿದರು.

ಈ ವೇಳೆ ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ನಗರಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು, ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಎಪಿಎನ್ ಪ್ರಾಪರ್ಟೀಸ್ ಮುಖ್ಯಸ್ಥ ಎ.ಪಿ. ನಾಗೇಶ್, ಲಯನ್ಸ್ ಕ್ಲಬ್ ಆಫ್ ಗೋಲ್ಡನ್ ಸಿಟಿ ಅಧ್ಯಕ್ಷ ಗೋಲ್ಡನ್ ಸುರೇಶ್, ಕರ್ನಾಟಕ ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ ಮತ್ತಿತರರಿದ್ದರು.

9ನೇ ಪುಟದಿಂದ ಮುಂದುವರೆದ ವರ್ಗೀಕೃತ ಜಾಹೀರಾತು

WANTED
BEAUTICIANS
with experience and
Experienced
Full Time Cook
Contact:- 9036256186

WANTED IMMEDIATELY
For a reputed resort in Mysuru
> SOUTH INDIAN COOK (Male)
> WAITERS (Male)
> HOUSE KEEPING STAFFS (Male)
Contact:- 99455 46713

NOT GETTING YOUR
STAR OF MYSORE
&
ಮೈಸೂರು ಮಿತ್ರ
Call:
98452-96447
99003-82840

"ಸೈಟ್ ಬೇಕಾಗಿದೆ"
1. ಲಾಲ್ ಬಹದ್ದೂರ್ ಶಾಸ್ತ್ರಿನಗರ
2. ಶಾಂತವೇರಿ ಗೋಪಾಲಗೌಡ ನಗರ
3. ಲಲಿತಾದ್ರಿ ನಗರ
4. ಸಪ್ತಮಾತೃಕಾ ಬಡಾವಣೆಗಳು
ಮಾಲೀಕರು ಸಂಪರ್ಕಿಸಿ
9741624588, 9686714571

47
ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೈಸೂರು ಪಿಂಜ್ರಪೋಲ್ ಸೊಸೈಟಿ
ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಮೈಸೂರು ಪಿಂಜ್ರಪೋಲ್‌ನಲ್ಲಿ ಶುದ್ಧ ಹಸುವಿನ ಸಗಣಿ ಪ್ರತಿ ಟನ್‌ಗೆ ಕೇವಲ 2500 ಕ್ಕೆ ಲಭ್ಯವಿದೆ ಖರೀದಿ ಮಾಡಲು ಸಂಪರ್ಕಿಸಿ
ಆರಾಧ್ಯ: 7676475706
ವಿನೋದ್: 9845861789

RAM
TUITION CENTER
I PUC
Admissions Open
Classes Starts from
Monday 8th June 2026
Office Time - 4.30 pm to 8.00 pm
Branches : Agrahara & Kuvempunagar
Call : 81973 63131, 95380 65996
Admission open For
Weekend CET / NEET Classes

DESIKA ACADEMY
Kindergarten English Teacher Training
COURSES OFFERED
Spoken English | Health Care Basics | Effective Parenting | Computer Essentials with AI Tools | Kindergarten English Teacher Training
99860 32465 / 9739663443

ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ 2ನೇ ಹಂತ, ಎಚ್.ಡಿ ಕೋಟೆ ರಸ್ತೆಯ ಸಮೀಪವಿರುವ ಮುಡಾ ಅನುಮೋದಿತ ಸೌತ್ ಅವೆನ್ಯೂ ಲೇಔಟ್‌ನಲ್ಲಿ **30x50** ಸೈಟ್‌ಗಳು ಮಾರಾಟಕ್ಕಿವೆ.
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಆಸ್ಟರ್
97317-49500

REPCO BANK
Grow with us! Govt. of India Enterprise
(ಭಾರತ ಸರ್ಕಾರದ ಉದ್ಯಮ)
1022, 1ನೇ ಮಹಡಿ, ಜಿ & ಹೆಚ್ ಬ್ಲಾಕ್, ಪಂಚಮಂತ್ರ ರಸ್ತೆ,
ಕುವೆಂಪುನಗರ, ಮೈಸೂರು–570023
ವಿಶೇಷ ಠೇವಣಿ ಮೇಲೆ ಆಕರ್ಷಕ ಬಡ್ಡಿದರ
1 ವರ್ಷದ ಅವಧಿಗೆ
8.25%* p.a (ಹಿರಿಯ ನಾಗರೀಕರಿಗೆ) | **7.75%* p.a** (ಸಾಮಾನ್ಯರಿಗೆ)
ಸ್ಥಿರಾಸ್ತಿಗಳ ಮೇಲೆ ಸಾಲ
ಎ ಖಾತೆಗಳ ಮೇಲೆ ರೂ.5.00 ಕೋಟಿಗಳವರೆಗೆ
ಬಿ ಖಾತೆಗಳ ಮೇಲೆ ರೂ.50.00 ಲಕ್ಷಗಳವರೆಗೆ
ಗೃಹಸಾಲ ಹಾಗೂ ಸ್ಥಿರಾಸ್ತಿಗಳ ಮೇಲೆ ಅಡಮಾನ ಸಾಲ ದೊರೆಯುತ್ತದೆ.
ಚಿನ್ನಾಭರಣಗಳ ಮೇಲೆ ಸಾಲ ಪ್ರತಿಗ್ರಾಂಗೆ ರೂ.10,000/– ಮಾಸಿಕ 96 ಪೈಸೆ ಬಡ್ಡಿ ದರದಲ್ಲಿ ಸಾಲ ದೊರೆಯುತ್ತದೆ.
*ಷರತ್ತುಗಳು ಅನ್ವಯಿಸುತ್ತದೆ. ಸದಸ್ಯ ಗ್ರಾಹಕರಿಗೆ ಮಾತ್ರ
PH : 0821 - 2562211 | Mob : 9449856210

IMKTA TEACHER TRAINING COURSES
INDIA MYSORE
IMKTA Since 2003
WWW.IMKTA.IN
FIRST AND LARGEST PRESCHOOL TEACHER TRAINING STUDENTS BASE IN MYSORE SINCE 2003



JOIN DIPLOMA MONTESSORI/ PRIMARY TEACHER TRAINING
23 YEARS CELEBRATING ANNIVERSARY
DURATION : 6 TO 9 MONTHS
ELIGIBILITY : SSLC/PUC/ANY DEGREE
ONLINE COURSE AVAILABLE — ADMISSION OPEN
FOR STUDENTS, WORKING WOMEN, HOUSEWIFE
MODE : REGULAR/ONLINE/ SATURDAY/ WITH PRACTICAL TRAINING
- 30,000+ ALUMNI
- 25+ BRANCHES IN INDIA & ABROAD
- 23 YEARS OF SUCCESS
- 800+ SCHOOL PARTNERSHIP
- PLACEMENT
- CAMPUS INTERVIEW

Alpha International School
No.66/2, Manandavadi Road, Near Ring Road Signal Junction, Srirampura, Mysuru
+91 7829937469

SBIT Travels Pvt. Ltd.
SBIT travels Since 2015
#656E, 16th Main, 5th Cross, Saraswathipuram, Mysuru - 09
9742582345
9343524127

EXCLUSIVE EUROPE 12 NIGHTS 13 DAYS
Aug 1st,12th | Sep : 2nd,24th | Oct : 7th,21st 2026
CHINA 5 NIGHTS 6 DAYS
Aug : 12th | Sep : 3rd | Oct : 21st : Nov : 5th 2026
HONGKONG MACAU 5 NIGHTS 6 DAYS
July 2nd 2026
BALI 5 NIGHTS 6 DAYS
Jul : 22nd | Aug : 27th |Sep : 3rd, 24th| Oct : 8th,29th2026
BANGKOK PATTAYA & KRABI 6 NIGHTS 7 DAYS
July 25th 2026
BHUTAN 6 NIGHTS 7 DAYS
July 24th 2026
SINGAPORE & MALAYSIA 5 NIGHTS 6 DAYS
July 30th | Aug : 27th | Sep : 24th | Oct : 29th | Nov 5th 2026
CHARDHAM YATRA 11 NIGHTS 12 DAYS
Jun : 26th | Jul : 10th,15th,25th 2026
MADHYA PRADESH 3 NIGHTS 4 DAYS
July 21st 2026
ODISHA 3 NIGHTS 4 DAYS
Oct : 5th,15th | Nov : 9th,26th | Dec : 1st,12th 2026
VARANASI 4 NIGHTS 5 DAYS
Jul : 3rd,9th & 23rd 2026
KAILASH MANASAROVAR YATRA 13 NIGHTS 14 DAYS
July 23rd 2026
ANDAMAN 4 NIGHTS 5 DAYS
June : 26th 2026
SHIMLA MANALI 5 NIGHTS 6 DAYS
Jul : 11th,29th | Aug : 5th,26th | Sep : 19th,26th | Oct : 2nd,16th 2026
Inclusions: BOOK NOW!

ಇಂದು ಪ್ರಾರಂಭ
THAILAND INTERNATIONAL SHOPPING FESTIVAL



ಹುಡುಕಿರಿ
4 ರಿಂದ 8ನೇ ಜೂನ್, 2026
(ಬೆಳಿಗ್ಗೆ 10.30 ರಿಂದ ರಾತ್ರಿ 8.30 ರವರೆಗೆ)
ಸಾ ರಾ ಕನ್ವೆನ್ಷನ್ ಹಾಲ್,
ದಟ್ಟಗಳ್ಳಿ ರಿಂಗ್ ರಸ್ತೆ, ಕೆಬಿ ಗ್ರಿಡ್ ಹತ್ತಿರ,
ಕನಕದಾಸ ನಗರ, ಮೈಸೂರು



THAILAND AFGHANISTAN SINGAPORE VIETNAM IRAN DUBAI INDONESIA EGYPT KOREA TIBET UGANDA

• ಥೈಲ್ಯಾಂಡ್ ಹೂವುಗಳು. • ಥೈಲ್ಯಾಂಡ್ ಗೃಹಾಲಂಕಾರ ಉತ್ಪನ್ನಗಳು. • ಥೈಲ್ಯಾಂಡ್ ಮುತ್ತಿನ ಆಭರಣಗಳು. • ಥೈಲ್ಯಾಂಡ್ ಮಹಿಳಾ ಪರಿಕರಗಳು. • ಥೈಲ್ಯಾಂಡ್ ಪಾದರಕ್ಷೆಗಳು. • ಸಿಂಗಾಪುರ ಕೈಚೀಲಗಳು ಮತ್ತು ಮಹಿಳಾ ಪರಿಕರಗಳು. • ಕೊರಿಯಾ ಮಹಿಳಾ ಪರಿಕರಗಳು. • ದುಬೈ ಆಭರಣಗಳು, ಬಕ್ಲವಾ, ಸುಗಂಧ ದ್ರವ್ಯಗಳು ಮತ್ತು ಚಾಕೊಲೇಟ್‌ಗಳು. • ಇರಾನಿನ ಪುರುಷರು ಮತ್ತು ಮಹಿಳೆಯರ ಆಭರಣಗಳು, ಕೇಸರಿ, ಖರ್ಜೂರ ಮತ್ತು ಚಾಕೊಲೇಟ್‌ಗಳು. • ಅಫ್ಘಾನಿಸ್ತಾನದ ಒಣ ಹಣ್ಣುಗಳು, ಕೇಸರಿ ಮತ್ತು ಜೇನುತುಪ್ಪ. • ಮಲೇಷ್ಯಾ ಮಹಿಳಾ ಆಭರಣಗಳು ಮತ್ತು ಪರಿಕರಗಳು. • ಉಗಾಂಡಾ ಕಲಾಕೃತಿಗಳು ಮತ್ತು ಕೃತಕ ಆಭರಣಗಳು. • ಟಿಬೆಟ್ ಸೆರಾಮಿಕ್ ಕ್ರೋಕರಿ ಮತ್ತು ಗೃಹಾಲಂಕಾರ ಉತ್ಪನ್ನಗಳು. • ಬಾಂಗ್ಲಾದೇಶ ಸೀರೆಗಳು. • ಥಾಯ್ ಛತ್ರಿ ಮತ್ತು ಕೊರಡಿ ಫ್ರೆಶ್ನರ್. • ಇಂಡೋನೇಷಿಯಾ ಟೀಕ್ ವುಡ್ ಪೀಠೋಪಕರಣಗಳು. • ವಿಯೆಟ್ನಾಂ ಹೊರಾಂಗಣ ಪೀಠೋಪಕರಣಗಳು. • ಟರ್ಕಿ ರಗ್‌ಗಳು ಮತ್ತು ಕಾರ್ಪೆಟ್‌ಗಳು ಮತ್ತು ಇನ್ನೂ ಹೆಚ್ಚಿನವು..

www.iadsandevents.com exhibitions_iadsnevents iadsnevents +91 8884688894 / 6363160413
AN EVENT BY iads & events COMPLETE BUSINESS SOLUTIONS

ಎಲ್ಲರಿಗೂ ಸ್ವಾಗತ
MYSORE travel mart 26
Powered By GRS fantasy park
05 – 07th June, 2026
ದಕ್ಷಿಣ ಭಾರತದ ಅತಿ ದೊಡ್ಡ ಟ್ರಾವೆಲ್ ಎಕ್ಸ್‌ಪೋ
South India's Biggest Travel Expo
FREE ENTRY 5th-7th June




EVENT HIGHLIGHTS
Pre-Scheduled B2B Meetings | Tourism Expo | Cultural Evening | Destination Showcase | Family & Kids Activities

EXPO TIMINGS
10:00 AM - 8:00 PM
ALL 3 DAYS
MYSURU TOURISM EXCELLENCE AWARDS In Association With SKÅL INTERNATIONAL MYSURU
JCAC JAGANNATHA CENTER FOR ART AND CULTURE Opp. Oyster Bay, Vijayanagar 2nd Stage, Mysuru.

Associate Partner: Akshaya Motors
Hospitality Partner: ARCOR HOTELS
Hospitality Partner: HOTEL LE ruchi THE PRINCE
Awards Partner: QUORUM HOTEL
MTA Mysuru Travels Association (R)
Government of India Ministry of Tourism
अतुल्य !भारत Incredible !ndia
Karnataka One state. Many worlds. Department of Tourism
HOA Mysuru
www.mysoretravelmart.com

ಇಂದು ಪ್ರಾರಂಭ
ಬೆಳಿಗ್ಗೆ 10.30 ರಿಂದ ರಾತ್ರಿ 8.30 ರವರೆಗೆ
FURNITURE & HOME INTERIOR
INTERIOR & EXTERIOR EXPO
4 ರಿಂದ 8ನೇ ಜೂನ್, 2026
ಸಾ ರಾ ಕನ್ವೆನ್ಷನ್ ಹಾಲ್,
ಹುಡುಕಿರಿ
ದಟ್ಟಗಳ್ಳಿ ರಿಂಗ್ ರಸ್ತೆ, ಕೆಬಿ ಗ್ರಿಡ್ ಹತ್ತಿರ,
ಕನಕದಾಸ ನಗರ, ಮೈಸೂರು



• ಲಿವಿಂಗ್ ರೂಮ್ ಸೆಟ್ • ಸೋಫಾ ಸೆಟ್ • ಮನೆ ಅಲಂಕಾರ ಉತ್ಪನ್ನಗಳು • ಕಲಾಕೃತಿಗಳು • ಮರದ ಪೀಠೋಪಕರಣಗಳು • ಕಾರ್ಪೆಟ್ ಮತ್ತು ಕುಶನ್‌ಗಳು • ಮಸಾಜ್ ಚೇರ್ • ಕರ್ಟೈನ್‌ಗಳು • ನೀರಿನ ಕಾರಂಜಿಗಳು ಮತ್ತು ಇನ್ನೂ ಹೆಚ್ಚಿನವು...
www.iadsandevents.com exhibitions_iadsnevents iadsnevents +91 8884688894 / 6363160413
AN EVENT BY iads & events COMPLETE BUSINESS SOLUTIONS